ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಂಜು ಸ್ಫೋಟ, ಸೆಮಿಫೈನಲ್‌ಗೆ ಭಾರತ

ಎಲ್ಲ ಆತಂಕಗಳನ್ನು ಮೀರಿ ನಿಂತ ಭಾರತ ಭಾನುವಾರ ನಡೆದ ಟಿ20 ವಿಶ್ವಕಪ್ ಸೂಪರ್ 8 ಹಂತದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಗುಂಪು-1ರಿಂದ 2ನೇ ತಂಡವಾಗಿ ಸೆಮಿಫೈನಲ್‌ಗೆ ಜಿಗಿದಿದೆ. ಇತ್ತೀಚೆಗೆ ಲಯದಲ್ಲಿಲ್ಲದೇ ಒದ್ದಾಡುತ್ತಿದ್ದ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್ ನಡೆಸಿ 50 ಎಸೆತಗಳಲ್ಲಿ ಅಜೇಯ 97 ರನ್ ಬಾರಿಸಿದ್ದು ಭಾರತದ ಜಯಕ್ಕೆ ಕಾರಣವಾಯಿತು.

ಅಮೆರಿಕ-ಇಸ್ರೇಲ್ ಜಂಟಿ ಕಾರ್ಯಾಚರಣೆಗೆ ಇರಾನ್‌ನ ಸರ್ವೋಚ್ಚ ನಾಯಕ ಅಯೋತೊಲ್ಲ ಅಲಿ ಖಮೇನಿ ಹತ್ಯೆ

ತನ್ನ ನಾಯಕನ ಹತ್ಯೆಯಿಂದ ಕೆರಳಿದ ಇರಾನ್‌ನಿಂದ ಇಸ್ರೇಲ್, ಗಲ್ಫ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಪ್ರತಿದಾಳಿ

ಇರಾನ್‌ನಾದ್ಯಂತ 40 ದಿನಗಳ ಶೋಕಾಚರಣೆಗೆ ಆದೇಶ, ಇರಾಕ್‌ನಲ್ಲೂ ಮೂರು ದಿನಗಳ ಶೋಕಾಚರಣೆ ಘೋಷಣೆ

ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಪ್ರತಿಜ್ಞೆ, ಹಿಂದೆಂದೂ ಕಂಡಿರದ ರೀತಿ ದಾಳಿ ಮಾಡುವುದಾಗಿ ಟ್ರಂಪ್ ಎಚ್ಚರಿಕೆ

ಮರುಭೂಮಿಯಲ್ಲಿ ಮಾರಣಹೋಮ

ಟೆಹರಾನ್: ಅಮೆರಿಕ ಮತ್ತು ಇಸ್ರೇಲ್ ಜಂಟಿ ಕಾರ್ಯಾಚರಣೆ ನಡೆಸಿ ಇರಾನ್‌ನ ಸರ್ವೋಚ್ಚ ನಾಯಕನಾಗಿದ್ದ ಅಯೊತೊಲ್ಲ ಅಲಿ ಖಮೇನಿ ಅವರನ್ನು ಹತ್ಯೆ ಮಾಡಿದ ಬಳಿಕ, ಮಧ್ಯಪ್ರಾಚ್ಯ ದೇಶಗಳ ನಡುವೆ ಯುದ್ಧದ ಉದ್ವಿಗ್ನತೆ ತೀವ್ರಗೊಂಡಿದೆ.

ಇಸ್ರೇಲ್-ಅಮೆರಿಕದ ಜಂಟಿ ದಾಳಿಯಿಂದ ಕೆರಳಿರುವ ಇರಾನ್, ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಮಧ್ಯಪ್ರಾಚ್ಯದ ತನ್ನ ಅನೇಕ ಶತ್ರು ರಾಷ್ಟ್ರಗಳ ಮೇಲೆ ದಾಳಿ ಮುಂದುವರಿಸಿದೆ. ಅಮೆರಿಕದ 27 ನೆಲೆಗಳು, ಇಸ್ರೇಲಿ ಟೆಲ್ ನೋಫ್ ವಾಯುನೆಲೆ, ಟೆಲ್ ಅವೀವ್‌ನ ಹಕಿರಿಯಾದಲ್ಲಿರುವ ಇಸ್ರೇಲಿ ಸೇನೆಯ ಕಮಾಂಡ್ ಪ್ರಧಾನ ಕಚೇರಿ ಮತ್ತು ಅದೇ ನಗರದಲ್ಲಿನ ದೊಡ್ಡ ರಕ್ಷಣಾ ಕೈಗಾರಿಕಾ ಸಂಕೀರ್ಣದ ಮೇಲೆ ಕ್ಷಿಪಣಿ ದಾಳಿ ಮಾಡಲಾಗಿದೆ.

ಭಾನುವಾರ ಬೆಳವಣಿಗೆ ಬೆನ್ನಲ್ಲೇ, ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. 'ಈ ಮಹಾಪಾರಾಧಕ್ಕೆ ಪ್ರತೀಕಾರ ತೀರಿಸಿಯೇ ಸಿದ್ಧ' ಎಂದು ಇರಾನ್ ಸಂಪುಟ ಹೇಳಿದ್ದರೆ, 'ಇಸ್ರೇಲ್ ಮತ್ತು ಅಮೆರಿಕದ ನೆಲೆಗಳನ್ನು ಗುರಿಯಾಗಿಸಿಕೊಂಡು ಕಂಡು ಕೇಳರಿಯದ ದಾಳಿ ನಡೆಸುತ್ತೇವೆ' ಎಂದು ರೆವಲ್ಯೂಷನರಿ ಗಾರ್ಡ್ ಎಚ್ಚರಿಕೆ ನೀಡಿದೆ. 'ನೀವು ಲಕ್ಷ್ಮಣ ರೇಖೆಯನ್ನು ದಾಟಿದ್ದೀರಿ ಮತ್ತು ಇದಕ್ಕೆ ಬೆಲೆ ತೆರಲೇಬೇಕು' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗೇರ್ ಕಾಲಿಬಾಫ್ ಭಾನುವಾರ ದೂರದರ್ಶನ ಭಾಷಣದಲ್ಲಿ ಗುಡುಗಿದ್ದಾರೆ. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಟ್ರಂಪ್, 'ಅವರು ಅದನ್ನು ಮಾಡದಿರುವುದು ಒಳಿತು. ಒಂದು ವೇಳೆ ಅವರು ದಾಳಿ ಮಾಡಿದರೆ, ನಾವು ಹಿಂದೆಂದೂ ಕಂಡಿರದ ಬಲದೊಂದಿಗೆ ಅವರ ಪ್ರತ್ಯುತ್ತರ ನೀಡುತ್ತೇವೆ' ಎಂದು ಸಾಮಾಜಿಕ ಜಾಲತಾಣ ಟ್ರೂಥ್‌ನಲ್ಲಿ ಬರೆದುಕೊಂಡಿದ್ದಾರೆ.

ಅಯಾತೊಲ್ಲಾ ಖಮೇನಿ ಇದ್ದ ಜಾಗದ ಮೇಲೆ ಇಸ್ರೇಲ್ ನಡೆಸಿದ ಭೀಕರ ದಾಳಿಯ ಚಿತ್ರ.

ಇರಾನ್‌ನ ಪರಮೋಚ್ಚ ನಾಯಕನಾಗಿದ್ದ ಖಮೇನಿ ಖತಂ

ಟೆಹರಾನ್: 1989ರಿಂದ ಇರಾನ್‌ನ ಪರಮೋಚ್ಚ ನಾಯಕನಾಗಿದ್ದ, ಪಾಶ್ಚಿಮಾತ್ಯ ರಾಷ್ಟ್ರಗಳ ಕಟು ವಿರೋಧಿಯಾಗಿದ್ದ ಅಯತೊಲ್ಲಾ ಅಲಿ ಖಮೇನಿ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾಗಿದ್ದಾರೆ. 86 ವರ್ಷದ ಧರ್ಮಗುರು ಖಮೇನಿ ಅವರ ಸಾವನ್ನು ಇರಾನ್ ಸರಕಾರಿ ದೂರದರ್ಶನ ಭಾನುವಾರ ಬೆಳಗ್ಗೆ ಖಚಿತಪಡಿಸಿದೆ. ಖಮೇನಿ ಅವರ ಉನ್ನತ ಸಲಹೆಗಾರ ಅಲಿ ಶಮ್ಖಾನಿ ಮತ್ತು ರೆವಲ್ಯೂಷನರಿ ಗಾರ್ಡ್ಸ್ ಮುಖ್ಯಸ್ಥ ಜನರಲ್ ಮೊಹಮ್ಮದ್ ಪಕ್ಪೂರ್, ಖಮೇನಿ ಮಗಳು, ಅಳಿಯ ಮತ್ತು ಮೊಮ್ಮಗಳು ಕೂಡ ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಅಯತೊಲ್ಲಾ ಅಲಿ ಖಮೇನಿ ಅವರು

1989ರಿಂದ ಇರಾನ್‌ನ ಸರ್ವೋಚ್ಚ ನಾಯಕರಾಗಿದ್ದರು. ಮಿಲಿಟರಿ ನಿರ್ಧಾರ, ಹಿರಿಯ ಅಧಿಕಾರಿಗಳ ನೇಮಕಾತಿ ಸೇರಿದಂತೆ ದೇಶದ ಪ್ರಮುಖ ನಿರ್ಧಾರಗಳ ಮೇಲೆ ಅವರು ಹಿಡಿತ ಹೊಂದಿದ್ದರು. ಈ ಬೆಳವಣಿಗೆ ಬೆನ್ನಲ್ಲೇ ಇರಾನ್ ಸ್ಥಳೀಯ ಆಡಳಿತ ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದು, ಇರಾನ್‌ನಾದ್ಯಂತ 40 ದಿನಗಳ ಶೋಕಾಚರಣೆಗೆ ಆದೇಶ ಹೊರಡಿಸಿದೆ. ಇರಾಕ್‌ನಲ್ಲೂ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದೆ

ಸಹಾಯವಾಣಿ

ದೆಹಲಿ: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿದ್ದು, ಇರಾನ್, ಇಸ್ರೇಲ್, ಸೌದಿ ಅರೇಬಿಯಾ, ಯುಎಇ ಸೇರಿದಂತೆ ಹಲವು ದೇಶಗಳಲ್ಲಿ ಭಾರತೀಯರು ಸಿಲುಕಿಕೊಂಡಿದ್ದಾರೆ. ಭಾರತೀಯ ನಾಗರಿಕರ ಸುರಕ್ಷತೆ ಮತ್ತು ರಕ್ಷಣೆಗಾಗಿ ಭಾರತೀಯ ರಾಯಭಾರ ಕಚೇರಿಯು ಸಹಾಯವಾಣಿಯನ್ನು ಆರಂಭಿಸಿದೆ.
ಇಸ್ರೇಲ್: **+972-54-7520711**
ಇರಾನ್: **+98 912 810 9115 +98 912 810 9109, +98 912 810 9102, +98 993 217 9359**
ಸೌದಿ ಅರೇಬಿಯಾ: **00-966-11-4884697** (ರಿಯಾದ್), **+966 536209704** (ಜೆಡ್ಡಾ),
ಯುಎಇ: **800-46342 +971 5430 90571.**

ಒಂದು ಕಡೆ ಶಾಂತಿಮಂತ್ರ ಹೇಳುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನೊಂದು ಕಡೆ ಯುದ್ಧ ಮಾಡುತ್ತಾರೆ. ಈ ರೀತಿಯ ತದ್ವಿರುದ್ಧ ನಿಲುವನ್ನು ತೀವ್ರವಾಗಿ ಖಂಡಿಸುತ್ತೇನೆ. ಇರಾನ್ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯಾಗಿದೆ ಎಂಬ ಸಂಗತಿ ಟಿವಿಯಲ್ಲಿ ಬರುತ್ತಿದೆ. ಅದು ಕೂಡ ಖಂಡನೀಯ. ಅವರ ಆತ್ಮಕ್ಕೆ ಚಿರಶಾಂತಿಯ ಕೋರುತ್ತೇನೆ.
-ಸಿದ್ದರಾಮಯ್ಯ ಸಿಎಂ

ಇರಾನ್‌ನಲ್ಲಿ ಈಗ ನಡೆಯುತ್ತಿರುವ ಯುದ್ಧ ಸರಿಯಿಲ್ಲ. ನಮ್ಮ ದೇಶ ಶಾಂತಿ ದೇಶ. ನಾವೆಲ್ಲಾ ಶಾಂತಿ, ನೆಮ್ಮದಿಯಿಂದ ಬಂದಿದ್ದೇವೆ. ಮಕ್ಕಳ ಶಾಲೆ ಮೇಲೆ ದಾಳಿ ಮಾಡಿದ್ದು ಖಂಡನೀಯ. ಇಸ್ರೇಲ್-ಇರಾನ್ ನಡುವಿನ ಯುದ್ಧದಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ದೆಹಲಿ ಕಮಿಷನರ್‌ಗೆ ಸಂಪರ್ಕದಲ್ಲಿರಿ ಎಂದು ಹೇಳಿದ್ದೇವೆ.
-ಡಿ.ಕೆ.ಶಿವಕುಮಾರ್ ಡಿಸಿಎಂ

ಅರಾಫಿಗೆ ಚುಕ್ಕಾಣಿ

ಖಮೇನಿ ಹತ್ಯೆ ಬೆನ್ನಲ್ಲೇ ಗಾರ್ಡಿಯನ್ ಕೌನ್ಸಿಲ್‌ನ ಧರ್ಮ ಗುರು ಅಯಾತೊಲ್ಲಾ



ಅಲಿರೆಜಾ ಅರಾಫಿ ಅವರನ್ನು ಇರಾನ್‌ನ ಮಧ್ಯಂತರ ಸರ್ವೋಚ್ಚ ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಇರಾನ್ ಅಧ್ಯಕ್ಷ ಮತ್ತು ಮುಖ್ಯ ನ್ಯಾಯಮೂರ್ತಿಗೆ ಸರಿಸಮನಾದ ಹುದ್ದೆಯನ್ನೇ ಅರಾಫಿಗೂ ನೀಡಲಾಗಿದೆ.

- ಖಮೇನಿ ಸಾವಿಗೆ ಇರಾನ್‌ನಲ್ಲಿ ಶೋಕ, ವಿವಿಧೆಡೆ ಪ್ರತಿಭಟನಾ ಮೆರವಣಿಗೆ
- ಪಾಕಿಸ್ತಾನದಲ್ಲಿ ಅಮೆರಿಕ ರಾಯಭಾರಿ ಕಚೇರಿಗೆ ಬೆಂಕಿ: 10 ಸಾವು
- ಖಮೇನಿ ಸಾವಿಗೆ ಇರಾನ್‌ನಲ್ಲಿ ವನಿತೆಯರಿಂದ ಸಂಭ್ರಮ
- 11 ದೇಶಗಳ ವಾಯು ಪ್ರದೇಶ ಬಳಸದಂತೆ ಡಿಜಿಸಿಎ ಸೂಚನೆ
- ಖಮೇನಿ ಹತ್ಯೆ ಖಂಡಿಸಿ ಜಮ್ಮು ಮತ್ತು ಕಾಶ್ಮೀರದಾದ್ಯಂತ ಬೃಹತ್ ಪ್ರತಿಭಟನೆ
- ಬುರ್ಜ್ ಖಲೀಫಾ ಬಳಿ ಬಿದ್ದ ಕ್ಷಿಪಣಿ, ಅಲ್ಲಿದ್ದ ಜನರ ಸ್ಥಳಾಂತರ
- ಭಾರತದ ವಿಮಾನಯಾನ ಸಂಸ್ಥೆಗಳ 350 ವಿಮಾನಗಳ ಹಾರಾಟ ರದ್ದು
- ಡ್ರೋನ್, ಕ್ಷಿಪಣಿ ದಾಳಿ ಬೆನ್ನಲ್ಲೇ ವಾಯುಪ್ರದೇಶ ಮುಚ್ಚಿದ ಯುಎಇ
- ಕಚ್ಚಾ ತೈಲ ಬೆಲೆ ಏರಿಕೆ ಭೀತಿ, ವ್ಯಾಪಾರ-ವಹಿವಾಟಿಕೆಗೆ ಧಕ್ಕೆ
- ಹೊರ್ಮುಜ್ ಜಲಸಂಧಿ ಮುಚ್ಚಿದ ಇರಾನ್, ಭಾರತದಲ್ಲಿದೆ 15 ದಿನಗಳಿಗಾಗುವಷ್ಟು ತೈಲ ಸಂಗ್ರಹ
- ಹೊರ್ಮುಜ್ ಜಲಸಂಧಿ ಬಳಿ ಭಾರತದ ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ, 15 ಭಾರತೀಯರಿಗೆ ಗಾಯ
- ಖಮೇನಿ ಹತ್ಯೆ ಖಂಡಿಸುವಂತೆ ಎಲ್ಲ ದೇಶಗಳನ್ನು ಒತ್ತಾಯಿಸಿದ ಇರಾನ್ ರಾಯಭಾರಿ ಕಚೇರಿ
- ಸರಕಾರದ ವಿರುದ್ಧ ಪ್ರತಿಭಟಿಸುವಂತೆ ಇರಾನ್ ಜನರಿಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕರೆ
- ಶಿಯಾ ಸಂಪ್ರದಾಯದಲ್ಲಿ ಹುತಾತ್ಮತೆಯ ಸಂಕೇತವೆಂದು ಪರಿಗಣಿಸಲಾದ ಮಸೀದಿಯ ಗುಮ್ಮಟದ ಮೇಲೆ ಕೆಂಪು ಧ್ವಜ ಹಾರಾಟ.

ಸೊಂಪಾದ ಪುಟಗಳು



ಯಡಿಯೂರಪ್ಪ ರೋತ್ಸವಕ್ಕೆ 114ರ ಟಾರ್ಗೆಟ್
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಒಲುಮೆ ಸಿಹಿಯ ಉಂಡು, ಬಯಕೆ ಸಿರಿಯ ಕಂಡು...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಜೀವನದಲ್ಲಿ ಯಾವತ್ತೂ ಬಿಜಿಯಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ನಿಮಗೆ ಬೇರೆ ಅನಗತ್ಯ ವಿಷಯಗಳತ್ತ ಗಮನಹರಿಸಲು ಪುರುಸೊತ್ತು ಸಿಗುವುದಿಲ್ಲ. ಟೀಕೆಗಳಿಗೆ ಉತ್ತರಿಸಲು, ತಲೆಕೆಡಿಸಿಕೊಳ್ಳಲು ಸಮಯ ಸಿಗುವುದಿಲ್ಲ. ನಿಮ್ಮ ಕೆಲಸವೇ ಮುಖ್ಯವಾಗುತ್ತದೆ.

ವಕ್ರತುಂಡೋಕ್ತಿ

ನಮಗೇ ಎಲ್ಲ ಗೊತ್ತಿದೆ ಎಂದು ನಟಿಸಬಾರದು. ಒಂದು ವೇಳೆ ನೀವು ಗೂಗಲ್ ಆಗಿದ್ದರೆ ಈ ಮಾತು ಅನ್ವಯಿಸಲಿಕ್ಕಿಲ್ಲ.

15 ನಕ್ಸಲರು ಶರಣು

ಮಹಾಸಮುಂದ್ (ಛತ್ತೀಸಗಢ): ಹಿರಿಯ ನಕ್ಸಲ್ ನಾಯಕ ವಿಕಾಸ್ ಸೇರಿ 15 ನಕ್ಸಲರು ಛತ್ತೀಸಗಢದ ಮಹಾಸಮುಂದ್ ಜಿಲ್ಲೆಯಲ್ಲಿ ಭಾನುವಾರ ಶರಣಾಗಿದ್ದಾರೆ. ಇವರ ಸುಳಿವು ನೀಡಿದರೆ ಒಟ್ಟು ₹73 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಈ ಶರಣಾಗತಿಯೊಂದಿಗೆ ಒಡಿಶಾದೊಂದಿಗೆ ಗಡಿ ಹಂಚಿಕೊಂಡಿರುವ ರಾಯ್ಪುರ- ಸಂಬಲ್ಪುರ ಪ್ರದೇಶದಲ್ಲಿ ನಕ್ಸಲ್ ಚಳವಳಿಯನ್ನು ಸಂಪೂರ್ಣವಾಗಿ ಕಿತ್ತುಹಾಕಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಪಸರಿಸುವ ಪ್ರಯತ್ನದಲ್ಲಿ ಪತ್ರಿಕೆ ಯಶಸ್ವಿಯಾಗಿದೆ. 12ನೇ ಆವೃತ್ತಿಯ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯನ್ನು ಕರುನಾಡಿನ 13 ಸಾಧಕರಿಗೆ ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಲಾಯಿತು. ಈ ವೇಳೆ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಸೌತ್ ಆಫ್ರಿಕನ್ ಟೂರಿಸಂ ರೀಜನಲ್ ಜನರಲ್ ಮ್ಯಾನೇಜರ್ ಕೊಬಾನಿ ಗಾಡ್ಸ್‌ವಿಲ್ ಮ್ಯಾಂಕೋಟ್ವಾ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಪರ್ವ ಗ್ರೂಪ್ ಸಂಸ್ಥಾಪಕ ಎಚ್.ಪಿ.ನಿಲೇಶ್ ಇದ್ದರು.

ರಾಜ್ಯದಲ್ಲಿ 20 ನಿಮಿಷ ಮಾತ್ರ ಗೋಚರ

ಇಂದು ಚಂದ್ರಗ್ರಹಣ

ಬೆಂಗಳೂರು: 2026ರ ಮೊದಲ ಚಂದ್ರಗ್ರಹಣವು ಫಾಲ್ಗುಣ ಮಾಸದ ಹುಣ್ಣಿಮೆಯ ದಿನ, ಅಂದರೆ ಇಂದು (ಮಾರ್ಚ್ 3) ಸಂಭವಿಸಲಿದೆ. ಇದು ಮಾರ್ಚ್ ತಿಂಗಳಲ್ಲಿ ಆಗಸದಲ್ಲಿ ನಡೆಯಲಿರುವ ಅಪರೂಪದ ವಿದ್ಯಮಾನ ಮತ್ತು ಖಗೋಳದ ಬಗ್ಗೆ ಆಸಕ್ತಿ ಹೊಂದಿರುವವರಿಗೆ ಒಂದು ರಸದೌತಣದ ಕ್ಷಣ ಎಂದೇ ಹೇಳಬಹುದು.

ಈ ಚಂದ್ರಗ್ರಹಣ ಮಧ್ಯಾಹ್ನ 3:23ಕ್ಕೆ ಆರಂಭವಾಗಿ ಸಂಜೆ 6:47ರವರೆಗೆ ಇರಲಿದೆ. ಗ್ರಹಣದ ಮಧ್ಯಕಾಲ ಸಂಜೆ 5:04 ಆಗಿರುತ್ತದೆ. ಅಂದರೆ, ಈ ಗ್ರಹಣದ ಒಟ್ಟು ಅವಧಿ 3 ಗಂಟೆ 24 ನಿಮಿಷಗಳು. ಈ ಗ್ರಹಣವು ಭಾರತದಲ್ಲಿ ಗರಿಷ್ಠ 52 ನಿಮಿಷಗಳ ಕಾಲ ಗ್ರಸ್ತೋದಯ ರೂಪದಲ್ಲಿ ಕಾಣಿಸಿಕೊಳ್ಳಲಿದೆ. ನಮ್ಮ ರಾಜ್ಯದಲ್ಲಿ ಸಂಜೆ 6:28 ರಿಂದ 6:48 ರವರೆಗೆ ಮಾತ್ರ (ಅಂದರೆ ಕೇವಲ 20 ನಿಮಿಷಗಳು) ಈ ಗ್ರಹಣ ಭಾಗಶಃ ಗೋಚರಿಸುತ್ತದೆ.

ಈ ಅವಧಿಯಲ್ಲಿ ಪ್ರಮುಖ ದೇವಾಲಯಗಳ ಬಾಗಿಲುಗಳು ಮುಚ್ಚಿರುತ್ತವೆ. ಮಂಗಳ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ಧರ್ಮಸ್ಥಳ ಮಂಜುನಾಥ ದೇವಾಲಯ, ಕುಕ್ಕೆ ಸುಬ್ರಮಣ್ಯ ದೇವಾಲಯ, ತಿರುಪತಿ ಸೇರಿದಂತೆ ಪ್ರಮುಖ ದೇವಾಲಯಗಳು ಗ್ರಹಣ ಸಮಯದಲ್ಲಿ ಬಂದ್ ಆಗಲಿವೆ. ರಕ್ತ ಚಂದ್ರಗ್ರಹಣದ ಅವಧಿ ಮುಗಿದ ನಂತರ ರಾತ್ರಿ 7:30ರಿಂದ ಪುನಃ ದೇವರ ದರ್ಶನವನ್ನು ಪ್ರಾರಂಭವಾಗಲಿದೆ.

ಏನಿದು ಗ್ರಸ್ತೋದಯ ಚಂದ್ರಗ್ರಹಣ?

ಸಾಮಾನ್ಯವಾಗಿ ಹುಣ್ಣಿಮೆಯಂದು ಪೂರ್ಣ ಚಂದ್ರ ಬೆಳಗುತ್ತಾನೆ. ಆದರೆ ಈ ಬಾರಿ ಚಂದ್ರ ನಮ್ಮ ಕಣ್ಣಿಗೆ ಕಾಣುವ ಮುನ್ನವೇ (ಪೂರ್ವ ದಿಕ್ಕಿನಲ್ಲಿ ಉದಯಿಸುವ ಮುನ್ನ) ಆತನಿಗೆ ಗ್ರಹಣ ಹಿಡಿದಿರುತ್ತದೆ. ಅಂದರೆ ಗ್ರಹಣ ಹಿಡಿದಿರುವ ಚಂದ್ರನೇ ಉದಯಿಸುತ್ತಾನೆ. ಇದನ್ನೇ ಶಾಸ್ತ್ರಗಳಲ್ಲಿ ಗ್ರಸ್ತೋದಯ ಚಂದ್ರಗ್ರಹಣ ಎಂದು ಕರೆಯುತ್ತಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್ ದರ ಇಳಿಕೆ

ದೆಹಲಿ: ಇರಾನ್-ಇಸ್ರೇಲ್-ಅಮೆರಿಕ ಯುದ್ಧ ನಡುವೆಯೇ ಭಾರತದಲ್ಲಿ ಅಚ್ಚರಿ ಬೆಳವಣಿಗೆಯಲ್ಲಿ ಗ್ಯಾಸ್ ಸಿಲಿಂಡರ್ ದರ ಇಳಿಕೆ ಕಂಡುಬಂದಿದೆ.

ತೈಲ ಕಂಪನಿಗಳು ವಾಣಿಜ್ಯ ಬಳಕೆಯ 19 ಕೆಜಿ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಇಳಿಕೆ ಮಾಡಿದ್ದು, ದೆಹಲಿ, ಕೋಲ್ಕತ್ತಾ, ಮುಂಬೈ ಮತ್ತು ಚೆನ್ನೈನಂತಹ ಪ್ರಮುಖ ನಗರಗಳಲ್ಲಿ ದರಗಳು ಕಡಿಮೆಯಾಗಿದ್ದು, ಹೊಸ ದರಗಳು ಭಾನುವಾರದಿಂದಲೇ ಜಾರಿಗೆ ಬಂದಿವೆ. ವಾಣಿಜ್ಯ ಬಳಕೆಯ 19 ಕೆಜಿಯ ಸಿಲಿಂಡರ್ ಬೆಲೆಯಲ್ಲಿ 28 ರಿಂದ 31 ರು.ಗಳಷ್ಟು ಕಡಿಮೆಯಾಗಿದ್ದು, ಈ ಬೆಲೆಗಳು ನಗರದಿಂದ ನಗರಕ್ಕೆ ವ್ಯತ್ಯಾಸವಾಗಿರುತ್ತದೆ. ಗೃಹ ಬಳಕೆ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ.

ದೆಹಲಿಯಲ್ಲಿ 19 ಕೆಜಿ ಸಿಲಿಂಡರ್ ಬೆಲೆಯಲ್ಲಿ 28 ರು.ಗಳಷ್ಟು ಕಡಿಮೆಯಾಗಿದೆ. ಫೆಬ್ರವರಿಯಲ್ಲಿ 1768.5 ರು.ಗಳಷ್ಟಿದ್ದ ಕಮರ್ಷಿಯಲ್ ಸಿಲಿಂಡರ್ ಬೆಲೆ ಈ ತಿಂಗಳು 1740.5 ರು.ಗಳಿಗೆ ಇಳಿಕೆಯಾಗಿದೆ. ಕೋಲ್ಕತ್ತಾದಲ್ಲಿ 19 ಕೆಜಿ ಸಿಲಿಂಡರ್ ಬೆಲೆಯಲ್ಲಿ 31 ರು.ಗಳಷ್ಟು ಇಳಿಕೆಯಾಗಿದೆ. 1875.5 ರು.ಗಳಿಗೆ ಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್ 1844.5 ರು.ಗೆ ಲಭ್ಯವಾಗಲಿದೆ. ಮುಂಬೈ ಮತ್ತು ಚೆನ್ನೈನಲ್ಲಿ ಕ್ರಮವಾಗಿ 28.5 ಮತ್ತು 29.5 ರು.ಗಳಷ್ಟು ಕುಸಿತವಾಗಿದೆ. ಬೆಂಗಳೂರಿನಲ್ಲೂ ಎಲ್‌ಪಿಜಿ ಸಿಲಿಂಡರ್ ಬೆಲೆ ಕಡಿಮೆಯಾಗಿದ್ದು, ಗೃಹ ಬಳಕೆಯ 14.2 ಕೆಜಿ ಸಿಲಿಂಡರ್ ಬೆಲೆ 855 ರುಪಾಯಿಗಳಷ್ಟಿದ್ದರೆ, ವಾಣಿಜ್ಯ ಬಳಕೆಯ 19 ಕೆಜಿ ಸಿಲಿಂಡರ್ ಬೆಲೆ 1841 ರುಪಾಯಿಗೆ ಕುಸಿದಿದೆ.

ಗೌರಿಬಿದನೂರು ತಾಲೂಕಿನ ಅಲೀಪುರ ಜನರಿಗೆ ಇರಾನ್ ಮೆಚ್ಚಿನ ತಾಣ
ಗ್ರಾಮದ ಬಹುತೇಕ ಜನರಿಂದ ಜಗತ್ತಿನ ವಿವಿಧ ದೇಶಗಳ ಜತೆ ವ್ಯಾಪಾರ

ಅಲೀಪುರಕ್ಕೂ ಖಮೇನಿಗೂ ನಂಟೇನು?

ಚಿಕ್ಕಬಳ್ಳಾಪುರ: ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧದಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಅಲೀಪುರ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದ್ದು, ಇರಾನ್‌ನಲ್ಲಿರುವ ತಮ್ಮವರ ಸುರಕ್ಷತೆ ಬಗ್ಗೆ ಕಳವಳಗೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣ, ಧಾರ್ಮಿಕ ಶಿಕ್ಷಣದ ಕಾರಣಕ್ಕೆ ಅಲೀಪುರದ ಶಿಯಾ ಮುಸ್ಲಿಮರಿಗೆ ಇರಾನ್ ಅಚ್ಚುಮೆಚ್ಚಿನ ತಾಣ. 20 ಸಾವಿರ ಜನಸಂಖ್ಯೆಯ ಅಲೀಪುರದಲ್ಲಿ ಶಿಯಾ ಮುಸ್ಲಿಮರದ್ದೇ ಪ್ರಾಬಲ್ಯ. ಇರಾನ್ ತಮ್ಮ ಪವಿತ್ರ ಧಾರ್ಮಿಕ ಭೂಮಿ ಎನ್ನುವ ಪೂಜ್ಯ ಭಾವನೆ ಇಲ್ಲಿನ ಜನರದ್ದು. ಅಯಾತೊಲ್ಲಾ ಖಮೇನಿ ಧಾರ್ಮಿಕ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುವ ದೊಡ್ಡ ವರ್ಗವೇ ಇಲ್ಲಿದೆ. ಅಲೀಪುರದಲ್ಲಿ 25 ಸಾವಿರ ಮತ್ತು ಪಕ್ಕದ ಪೋತೇನಹಳ್ಳಿಯಲ್ಲಿ ಒಂದು ಸಾವಿರ ಶಿಯಾ ಮುಸ್ಲಿಮರು ಇದ್ದಾರೆ.

ಗೌರಿಬಿದನೂರು ತಾಲೂಕಿನ ಅಲೀಪುರಕ್ಕೆ ಅಯಾತೊಲ್ಲಾ ಅಲಿ ಖಮೇನಿ ಅವರು ಭೇಟಿ ನೀಡಿದ ಸಂದರ್ಭದಲ್ಲಿ ತೆಗೆದ ಚಿತ್ರ.

1986ರಲ್ಲಿ ಅಲೀಪುರಕ್ಕೆ ಭೇಟಿ ನೀಡಿದ್ದ ಖಮೇನಿ: ಅಯಾತೊಲ್ಲಾ ಖಮೇನಿ 1986ರಲ್ಲಿ ಅಲೀಪುರಕ್ಕೆ ಭೇಟಿ ನೀಡಿದ್ದರು. ಇದು ಇರಾನ್ ಮತ್ತು ಅಲೀಪುರದ ಬಾಂಧವ್ಯಕ್ಕೆ ಸಾಕ್ಷಿ. ಖಮೇನಿ ಗುರು ಇರಾನ್ ಧಾರ್ಮಿಕ ನಾಯಕ ಅಯಾತೊಲ್ಲಾ ಇಮಾಮ್ ಖಮೇನಿ ಹೆಸರಲ್ಲಿ ಅಲೀಪುರದಲ್ಲಿ ಆಸ್ಪತ್ರೆ ಇದೆ. ಇದರ ಉದ್ಘಾಟನೆಗಾಗಿಯೇ ಖಮೇನಿ ಗ್ರಾಮಕ್ಕೆ ಬಂದಿದ್ದರು.

ಅಲೀಪುರದ ವರ್ತಕರು ಚಿನ್ನಾಭರಣ ವಜ್ರ ಹರಳು ವ್ಯಾಪಾರ ಮಾಡುತ್ತಾರೆ. ಆದರೆ ಇರಾನ್ ಜತೆ ವ್ಯಾಪಾರಕ್ಕಿಂತ ಧಾರ್ಮಿಕ ಸಂಬಂಧ ಗಾಢವಾಗಿ ಬೆಸೆದುಕೊಂಡಿದೆ. ಏಕೆಂದರೆ ಶಿಯಾ ಮುಸ್ಲಿಮರ ಪ್ರಮುಖ ಧಾರ್ಮಿಕ ಸ್ಥಳ ಮಶದ್ ಇರಾನ್‌ನಲ್ಲಿದೆ ಎಂದು ಸ್ಥಳೀಯರು ಹೇಳಿದ್ದಾರೆ. ಧಾರ್ಮಿಕ ಅಧ್ಯಯನಕ್ಕಾಗಿ ಗ್ರಾಮದ 50ಕ್ಕೂ ಹೆಚ್ಚು ಮಂದಿ ಇರಾನ್‌ನಲ್ಲಿ ನೆಲೆಸಿದ್ದಾರೆ. →12

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಪಸರಿಸುವ ಪ್ರಯತ್ನದಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ಕಳೆದ ಎರಡು ವರ್ಷದ ಅವಧಿಯಲ್ಲಿ 11 ದೇಶಗಳಲ್ಲಿ ನಡೆದ ಯಶಸ್ವಿ ಕಾರ್ಯಕ್ರಮದ ಬಳಿಕ ಇದೀಗ ಕರುನಾಡಿನ 13 ಸಾಧಕರಿಗೆ ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಾಧಕರಿಗೆ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಸೌತ್ ಆಫ್ರಿಕನ್ ಟೂರಿಸಂ ರೀಜನಲ್ ಜನರಲ್ ಮ್ಯಾನೇಜರ್ ಕೊಬಾನಿ ಗಾಡ್ಸ್ ವಿಲ್ ಮ್ಯಾಂಕೋಟ್ವ್ಯಾ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಪರ್ವ ಗ್ರೂಪ್ ಸಂಸ್ಥಾಪಕ ಎಚ್.ಪಿ.ನಿಲೇಶ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಕರುನಾಡಿನ ಸಾಧಕರಿಗೆ ಸನ್ಮಾನ

ಎಸ್.ಎಲ್.ಭೋಜೇಗೌಡ, ವಿಧಾನ ಪರಿಷತ್ ಸದಸ್ಯರು

ಭಾರತಿ ಶೆಟ್ಟಿ, ವಿಧಾನಪರಿಷತ್ ಸದಸ್ಯರು

ಡಾ.ಯು.ಟಿ.ಇಫ್ತಿಕಾರ್ ಅಲಿ, ಶಿಕ್ಷಣ ತಜ್ಞ

ಮಲ್ಲಾಜಮ್ಮ, ಮಾಜಿ ಶಾಸಕಿ

ಮಂಜುನಾಥ.ಬಿ, ಉದ್ಯಮಿ

ಬಿ.ವಾಮದೇವಪ್ಪ ತೊಗಲೇರಿ, ಜಿಲ್ಲಾಧ್ಯಕ್ಷ,ಕನ್ನಡ ಸಾಹಿತ್ಯ ಪರಿಷತ್ ದಾವಣಗೆರೆ

ಆರ್. ರವಿ, ಶ್ರೀ ರಾಜರಾಜೇಶ್ವರಿ ಕನ್‌ಸ್ಟ್ರಕ್ಷನ್ ಸ್ಮೃತಿ ಅಕಾಡೆಮಿ, ಸಹ ಸಂಸ್ಥಾಪಕರು

ಹೇಗಿರಲಿದೆ ಪ್ರಶಸ್ತಿ ಆಯ್ಕೆ?

ವಿಶ್ವವಾಣಿ ಗ್ಲೋಬಲ್ ಫೋರಂ ನೀಡುವ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆ ಬಗ್ಗೆ ವಿವರಣೆ ನೀಡಿದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು, ರಾಜ್ಯದ ಸಾಧಕರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲು ಮೂರು ಜನರ ಆಯ್ಕೆದಾರರ ಸಮಿತಿಯಿರುತ್ತದೆ. ಆ ಸಮಿತಿಯ ಶಿಫಾರಸ್ಸಿನ ಆಧಾರದಲ್ಲಿ ಸಾಧಕರನ್ನು ಗುರುತಿಸಲಾಗುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ 12ನೇ ಆವೃತ್ತಿಗೆ 60 ಜನರ ಪಟ್ಟಿಯನ್ನು ಆಯ್ಕೆದಾರರ ಸಮಿತಿ ನೀಡಿತ್ತು. ಆದರೆ 40ಕ್ಕಿಂತ ಹೆಚ್ಚು ಜನರ ತಂಡವಾದರೆ ಪ್ರತ್ಯೇಕವಾಗಿ ತೆರಳಬೇಕಾಗುತ್ತದೆ. ಆದ್ದರಿಂದ ಭಾವನಾತ್ಮಕವಾಗಿ ಒಂದು ತಂಡವಾಗಿ ಇರಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ನಿಯೋಗದ ಮಿತಿಯನ್ನು 40ಕ್ಕೆ ತಗ್ಗಿಸಲಾಗಿದೆ. ಕಳೆದ 11 ಕಾರ್ಯಕ್ರಮದಲ್ಲಿ ಸುಮಾರು 220ಕ್ಕೂ ಹೆಚ್ಚು ಸಾಧಕರನ್ನು ವಿಶ್ವವಾಣಿ ಗುರುತಿಸಿದೆ. ಸಾಮಾನ್ಯವಾಗಿ ಬೆಂಗಳೂರು ಅಥವಾ ಮುಂಬೈನಲ್ಲಿ ಕಾರ್ಯಕ್ರಮವನ್ನು ನಡೆಸುವ ಪ್ರತೀತಿ ನಡೆದುಕೊಂಡು ಬಂದಿತ್ತು. ಆದರೆ ರಾಜ್ಯದ ಸಾಧಕರನ್ನು ವಿದೇಶಿ ನೆಲದಲ್ಲಿ ಗುರುತಿಸಿ, ಸನ್ಮಾನಿಸಬೇಕು ಎನ್ನುವ ಉದ್ದೇಶದಿಂದ ವಿದೇಶದಲ್ಲಿ ನೆಲದಲ್ಲಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯನ್ನು ಆರಂಭಿಸಲಾಗಿದೆ ಎನ್ನುವುದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ಅಭಿಪ್ರಾಯ.

ಬಿ. ಅಜಯ್ ಪೂಜಾರ, ಸಾಧನಾ ಪಬ್ಲಿಕ್ ಶಾಲೆ ಸಂಸ್ಥಾಪಕರು

ಪವನ್ ಕುಮಾರ್ ಎನ್.ಪಾಟೀಲ್, (ಸರ್ಜನ್) ಅನುಪಮಾ ಕೆ.ಪಾಟೀಲ್, ಖ್ಯಾತ ವೈದ್ಯೆ

ನಂದೀಶ ಜಿ.ಎಚ್, ಚಾರ್ಟರ್ಡ್ ಅಕೌಂಟೆಂಟ್

ಬಸವರಾಜ ಎನ್.ಕನ್ನಾಳೆ, ಉದ್ಯಮಿ

ಲಾವಣ್ಯ ಲೀಲಾ ಮೋಹನ್ , ಚಲನಚಿತ್ರ ನಿರ್ಮಾಪಕಿ

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಫಲಕಗಳು

ಕೊಬಾನಿ ಗಾಡ್ಸ್‌ವಿಲ್ ಮ್ಯಾಂಕೋಟ್ವ್ಯಾ ಅವರೊಂದಿಗೆ ವಿಶ್ವವಾಣಿ ನಿಯೋಗ

ಭಾರತ
ಸೌತ್ ಆಫ್ರಿಕಾ

12

ಕನ್ನಡಿಗರ ಜಾಗತಿಕ ಸಮಾವೇಶ

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಹಾಗೂ ದಕ್ಷಿಣ ಆಫ್ರಿಕಾ ವಿಶೇಷ ನಿಯೋಗದ ಸಮ್ಮುಖದಲ್ಲಿ ಕರ್ನಾಟಕ ಹಾಗೂ ದಕ್ಷಿಣ ಆಫ್ರಿಕಾದ ಸಾಂಸ್ಕೃತಿಕ ಸಮ್ಮಿಲನ ಮತ್ತು ಜಾಗತಿಕ ಸಾಧನೆಗೈದ

ಕರ್ನಾಟಕದ ಅಪರೂಪದ ಸಾಧಕರಿಗೆ

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಸಂಭ್ರಮ

ವಿವಿಧ ಕ್ಷೇತ್ರದ 13 ಸಾಧಕರನ್ನು ಗೌರವಿಸಿದ ವಿಶ್ವವಾಣಿ । ದಕ್ಷಿಣ ಆಫ್ರಿಕಾದಲ್ಲಿ ಯಶಸ್ವಿಯಾಗಿ ನೆರವೇರಿದ 12ನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್

ವಿಶ್ವವಿಖ್ಯಾತ ಸನ್‌ಸಿಟಿಯಲ್ಲಿ ನಾಡಿನ ಸಾಧಕರಿಗೆ ಸನ್ಮಾನ

ಸನ್‌ಸಿಟಿ ವೈಶಿಷ್ಟ್ಯವೇನು?

ವಿಶ್ವವಾಣಿ ಗ್ಲೋಬಲ್ ಫೋರಂ ದಕ್ಷಿಣ ಆಫ್ರಿಕಾದಲ್ಲಿ ಹಮ್ಮಿಕೊಂಡಿದ್ದ 12ನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಇನ್ನುಳಿದ ಕಾರ್ಯಕ್ರಮಗಳಿಗಿಂತ ಭಿನ್ನವಾಗಿತ್ತು. ಏಕೆಂದರೆ, ಈ ಬಾರಿ ಕಾರ್ಯಕ್ರಮ ನಡೆದ ಸನ್‌ಸಿಟಿ ರೆಸಾರ್ಟ್ ಕೇವಲ ಐಷಾರಾಮಿ ರೆಸಾರ್ಟ್ ಮಾತ್ರವಾಗಿರದೇ, ಐತಿಹಾಸಿಕ ಮಹತ್ವ ಹೊಂದಿರುವ ರೆಸಾರ್ಟ್ ಸಹ ಆಗಿದೆ. ದಕ್ಷಿಣ ಆಫ್ರಿಕಾದ ನಾರ್ತ್ ವೆಸ್ಟ್ ಪ್ರಾಂತ್ಯದಲ್ಲಿರುವ ಸನ್ ಸಿಟಿ ರೆಸಾರ್ಟ್ ವಿಶ್ವಪ್ರಸಿದ್ಧ ಪ್ರವಾಸೋದ್ಯಮ ಕೇಂದ್ರವಾಗಿ ಗುರುತಿಸಿಕೊಂಡಿದೆ. ಜೋಹಾನ್ಸ್‌ಬರ್ಗ್‌ನಿಂದ ಸುಮಾರು ಎರಡು ಗಂಟೆ ದೂರದಲ್ಲಿರುವ ಈ ಐಷಾರಾಮಿ ಹೋಟೆಲ್‌ನಲ್ಲಿ, ಕ್ಯಾಸಿನೊ, ಗಾಲ್ಫ್ ಮೈದಾನಗಳು ಹಾಗೂ ವ್ಯಾಲಿ ಆಫ್ ವೇವ್ಸ್ ಎನ್ನುವ ಜಲಕ್ರೀಡಾ ಉದ್ಯಾನವನವನ್ನು ಕಾಣಬಹುದಾಗಿದೆ ಸಮುಚ್ಛಯವಾಗಿದೆ. ಈ ಹೋಟೆಲ್ ತನ್ನ ವಿಶಿಷ್ಟ ಆಫ್ರಿಕನ್ ಶೈಲಿಯ ವಾಸ್ತುಶಿಲ್ಪದಿಂದ ಪ್ರವಾಸಿಗರನ್ನು ಸೆಳೆಯುತ್ತದೆ. 1995ರಲ್ಲಿ ಇಲ್ಲಿ ಮಿಸ್ ಯುನಿವರ್ಸ್ ಸ್ಪರ್ಧೆ ಆಯೋಜನೆಯಾಗಿ ಜಾಗತಿಕ ಗಮನ ಸೆಳೆದಿತ್ತು. ಅಂತಾರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳು ಮತ್ತು ಕ್ರೀಡಾ ಸ್ಪರ್ಧೆಗಳು ನಡೆಯುವ ಮೂಲಕ ಸನ್ ಸಿಟಿ ಜಾಗತಿಕ ಈವೆಂಟ್‌ಗಳ ತಾಣವಾಗಿ ಬೆಳೆದಿದೆ. ಪ್ರವಾಸೋದ್ಯಮ ಹಾಗೂ ಆತಿಥ್ಯ ವಲಯಕ್ಕೆ ಮಹತ್ವದ ಆದಾಯ ಒದಗಿಸುವ ಈ ರೆಸಾರ್ಟ್ ಪ್ರತಿ ವರ್ಷ ಸಾವಿರಾರು ದೇಶಿ-ವಿದೇಶಿ ಪ್ರವಾಸಿಗರನ್ನು ಆಕರ್ಷಿಸು ತ್ತಿದೆ. ಸೌಲಭ್ಯಗಳು, ಭದ್ರತೆ ಮತ್ತು ವೈಭವದಿಂದ ಸನ್ ಸಿಟಿ ಆಫ್ರಿಕಾದ ಹೆಮ್ಮೆಯ ಪ್ರವಾಸೀ ತಾಣವಾಗಿದೆ.

ವಿಶ್ವವಾಣಿ ಸುದ್ದಿಮನೆ ಸನ್‌ಸಿಟಿ

ಕರುನಾಡಿನ ಸಾಧಕರನ್ನು ವಿಶ್ವ ಮಟ್ಟದಲ್ಲಿ ಗೌರವಿಸುವ ವಿಭಿನ್ನ ಆಲೋಚನೆಯಾಗಿರುವ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ, ಪ್ರಕೃತಿಯ ಮುಗ್ಧತೆಯೊಂದಿಗೆ ಆಧುನಿಕಯ ಗಾಂಭೀರ್ಯವನ್ನು ಮೈಗೂಡಿಸಿಕೊಂಡು, ಆಫ್ರಿಕಾ ಖಂಡದ 'ಆರ್ಥಿಕ ಶಕ್ತಿ'ಯಾಗಿ ಹೊರಹೊಮ್ಮಿರುವ ದಕ್ಷಿಣ ಆಫ್ರಿಕಾದಲ್ಲಿ ಯಶಸ್ವಿಯಾಗಿ ಜರುಗಿತು.

ವಿಶ್ವದ ಬಹುಪಾಲು ಪ್ರವಾಸಿಗರಿಗೆ ಬಕೆಟ್ ಲಿಸ್ಟ್ ನಲ್ಲಿರುವ ದಕ್ಷಿಣ ಆಫ್ರಿಕಾದಲ್ಲಿ ವಿಶ್ವವಾಣಿ ಗ್ಲೋಬಲ್ ಫೋರಂ ಆಯೋಜಿಸಿರುವ 12ನೇ ಆವೃತ್ತಿಯ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಅದರಲ್ಲಿಯೂ ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳು ನಡೆಯುವ ಜೋಹಾನ್ಸ್‌ಬರ್ಗ್‌ನಿಂದ ಎರಡು ಗಂಟೆ ಪ್ರಯಾಣದ ದೂರದಲ್ಲಿರುವ ಸನ್‌ಸಿಟಿಯಲ್ಲಿ ಕನ್ನಡ ಡಿಂಡಿಮ ಮೊಳಗಿದ್ದು, ಕನ್ನಡ ಪತ್ರಿಕೋದ್ಯಮದ ಮತ್ತೊಂದು ಮೈಲುಗಲ್ಲು. ಸನ್‌ಸಿಟಿಯಲ್ಲಿ ನಡೆದ ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 13 ಸಾಧಕರನ್ನು ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಅಸಾಮಾನ್ಯ ಸಾಧಕರಿಗೆ 'ಗ್ಲೋಬಲ್ ಅಚೀವರ್ಸ್' ಪ್ರಶಸ್ತಿ ನೀಡುವ ಜತೆಜತೆಗೆ ಎಂಟು ದಿನಗಳ ಪ್ರವಾಸದಲ್ಲಿ ದಕ್ಷಿಣ ಆಫ್ರಿಕಾದ ವಿಶ್ವಪ್ರಸಿದ್ಧ ಐತಿಹಾಸಿಕ, ಪಾರಂಪರಿಕ ಸ್ಥಳಗಳಿಗೆ ವಿಶ್ವವಾಣಿ ಸಮೂಹದ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ನೇತೃತ್ವದ ನಿಯೋಗ ಭೇಟಿ ನೀಡಲಿದೆ. ಈ ನಿಯೋಗದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ವಿಧಾನಪರಿಷತ್ ಸದಸ್ಯರಾದ ಭೋಜೇಗೌಡ, ಮಾರುತಿರಾವ್ ಮುಳೆ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 40ಕ್ಕೂ ಹೆಚ್ಚು ಗಣ್ಯರಿದ್ದಾರೆ.

ಕಾಂಬೋಡಿಯಾ, ಫ್ರಾನ್ಸ್ ಸೇರಿದಂತೆ 11 ದೇಶಗಳಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಿದ ಬಳಿಕ ಬುಧವಾರದಂದು ದಕ್ಷಿಣ ಆಫ್ರಿಕಾದ ಸನ್‌ಸಿಟಿಯಲ್ಲಿ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ದಕ್ಷಿಣ ಆಫ್ರಿಕಾ ಪ್ರವಾಸೋದ್ಯಮದ ರೀಜನಲ್ ಜನರಲ್ ಮ್ಯಾನೇಜರ್ ಕೊಬಾನಿ ಗಾಡ್ಸ್‌ವಿಲ್ ಮ್ಯಾಂಕೋಟ್ವ್ಯಾ, ದುಬೈನ ಪರ್ವ ಗ್ರೂಪ್‌ನ ಸಂಸ್ಥಾಪಕ ಎಚ್.ಪಿ. ನಿಲೇಶ್ ಭಾಗವಹಿಸಿದ್ದರು.

ಐತಿಹಾಸಿಕ ಮಹತ್ವವಿರುವ ಸನ್ ಸಿಟಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 13 ಮಂದಿ ಸಾಧಕರನ್ನು ಗುರುತಿಸಿ ಸನ್ಮಾನಿಸಲಾಯಿತು. ಕಾರ್ಯ ಕ್ರಮದಲ್ಲಿ ಭಾರತದ ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿತ್ತು. ಎಂಎಸ್ ಐಎಲ್, ಸಿರಿ, ಪರ್ವ ಗ್ರೂಪ್, ಡಿಯಾಗೋ ಫೈನಾನ್ಸ್, ಅಮೃತ್ ನೋನಿ ಹಾಗೂ ಎಂಆರ್‌ಜಿ ಗ್ರೂಪ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ವಿಶ್ವವಾಣಿ ನಿಯೋಗದಲ್ಲಿದ್ದ ಗಣ್ಯರು

ವಿಶ್ವೇಶ್ವರ ಭಟ್ ಅವರ ನೇತೃತ್ವದ ನಿಯೋಗದಲ್ಲಿ 40 ಮಂದಿ ಇದ್ದರು. ವಿಶ್ವವಾಣಿ ಪುಸ್ತಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ವಿಶ್ವೇಶ್ವರ ಭಟ್ ಅವರ ಪತ್ನಿ ಸುಷ್ಮಾ ಭಟ್, ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ, ವಿಶ್ವವಾಣಿ ಮ್ಯಾನೇಜರ್ ನಾಗಾರ್ಜುನ್ ಮೋತಿಲಾಲ್, ಮಾರುತಿರಾವ್ ಮುಳೆ, ಆರ್ಯಾ ವಿಶಾಲ್, ವಿಶಾಲ್, ಗಂಗಾಧರ್ ಸಜ್ಜನ್, ನಾಗರಾಜ್ ಅಡಿಗ, ಸುಕುಮಾರ್ ಶೆಟ್ಟಿ, ಎಚ್.ಪಿ. ನೀಲೇಶ್, ದಿವ್ಯ, ಸಿದ್ದೇಶ್, ಲೀಲಾ ಮೋಹನ್, ಲಾವಣ್ಯ, ರಾಘವೇಂದ್ರ, ಅಚಲ ಭೋಜೇಗೌಡ, ನೀತಾ, ಬಸವರಾಜ ಉಪ್ಪಾರ್, ಅಕ್ಷತಾ, ನಾಗರಾಜ್, ಅರುಣಾ ಮಂಜುನಾಥ್, ರೇಖಾ ಇದ್ದರು.

ಪ್ರಶಸ್ತಿ ಪುರಸ್ಕೃತರು

- ಎಸ್.ಎಲ್. ಭೋಜೇಗೌಡ
- ಭಾರತಿ ಶೆಟ್ಟಿ
- ಡಾ.ಯು.ಟಿ. ಇಫ್ತಿಕರ್ ಆಲಿ
- ಮಲ್ಲಾಜಮ್ಮ
- ಮಂಜುನಾಥ್ ಬಿ
- ಬಿ. ವಾಮದೇವಪ್ಪ
- ರಾಮಚಂದ್ರ ರವಿ
- ಅಜಯ್ ಬಿ ಪೂಜಾರ
- ಡಾ.ಪವನ್‌ಕುಮಾರ್ ಪಾಟೀಲ್
- ನಂದೀಶ್ ಜಿ.ಎಚ್.
- ಬಸವರಾಜ್ ಎನ್. ಕನ್ನಾಳೆ
- ಲಾವಣ್ಯ ಗದೆ
- ಅನುಪಮಾ ಕೆ. ಪಾಟೀಲ್

MSIL ಎಂಎಸ್ಐಎಲ್
SiRi
MRG group Redefining Lifestyle & Hospitality
PARVA GROUP
AMRITH NONI
DIAGO FINANCE BUILD YOUR FUTURE

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಪಸರಿಸುವ ಪ್ರಯತ್ನದಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ ನಡೆದ ಕಾರ್ಯಕ್ರಮದ ಝಲಕ್ ಇಲ್ಲಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿದ ಗಣ್ಯರು.

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಕಾರ್ಯಕ್ರಮದಲ್ಲಿ ವಿಶ್ವವಾಣಿ ಪುಸ್ತಕದ ಎಂ.ಡಿ ಸುಷ್ಮಾ ಭಟ್ ಹಾಗೂ ಇತರರು.

ಕೊಬಾನಿ ಗಾಡ್ಸ್‌ವಿಲ್ ಮ್ಯಾಂಕೋಟ್ವಾ ್ಯ ಅವರಿಗೆ ಸನ್ಮಾನ

ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವರಿಗೆ ಸನ್ಮಾನ

ಪರ್ವ ಗ್ರೂಪ್ ಸಂಸ್ಥಾಪಕ ನೀಲೇಶ್ ಎಚ್.ಪಿ ಅವರಿಗೆ ಸನ್ಮಾನ

ಮಾಜಿ ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಅವರಿಗೆ ಸನ್ಮಾನ

ವಿಧಾನಪರಿಷತ್ ಸದಸ್ಯ ಡಾ.ಮಾರುತಿ ರಾವ್ ಮುಳೆ ಅವರಿಗೆ ಸನ್ಮಾನ

ಅಡಿಗಾಸ್ ಯಾತ್ರಾ ಸಂಸ್ಥಾಪಕ ನಾಗರಾಜ ಅಡಿಗ ಅವರಿಗೆ ಸನ್ಮಾನ

ದಿವ್ಯಾ ನೀಲೇಶ್ ಅವರಿಗೆ ಸನ್ಮಾನ

ಸಿದ್ದೇಶ್ ಹಾರನಹಳ್ಳಿ ಅವರಿಗೆ ಸನ್ಮಾನ

ಅಕ್ಷಿತಾ ಅವರಿಗೆ ಸನ್ಮಾನ

ಡಾ.ಗಂಗಾಧರ ಸಜ್ಜನ್ ಅವರಿಗೆ ಸನ್ಮಾನ.

ಡಾ.ಲೀಲಾಮೋಹನ್ ಅವರಿಗೆ ಸನ್ಮಾನ

ರಾಘವೇಂದ್ರ ಡಿ.ನಾಯಕ ಅವರಿಗೆ ಸನ್ಮಾನ

ವಿಶಾಲ ಶಾನಭಾಗ್, ಆರ್ಯ ವಿಶಾಲ್ ಶಾನಭಾಗ್ ದಂಪತಿಗೆ ಸನ್ಮಾನ

ಬಸವರಾಜ ಉಪ್ಪಾರ ಅವರಿಗೆ ಸನ್ಮಾನ

ಉದ್ಯಮಿ ನಾಗರಾಜ್ ಅವರಿಗೆ ಸನ್ಮಾನ

ವಿಧಾನಪರಿಷತ್ ಸದಸ್ಯರಾದ ಭೋಜೇಗೌಡ,
ಡಾ.ಮಾರುತಿ ರಾವ್ ಮುಳೆ

ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ, ಸಿದ್ದೇಶ್ ಹಾರನಹಳ್ಳಿ

ಕಾರ್ಯಕ್ರಮ ನಿರೂಪಣೆ ನಾಗಾರ್ಜುನ ಮೋತಿಲಾಲ್

ಎಂಟು ದಿನ ಒಟ್ಟಿಗೆ ಕಾಲ ಕಳೆಯುವುದರಿಂದ ಮಾನವೀಯ ಸಂಬಂಧ ಗಟ್ಟಿಯಾಗುತ್ತವೆ । ವಿಶ್ವವಾಣಿ ಇಂದು ಸಮೂಹವಾಗಿ ಬೆಳೆದು ನಿಂತಿದೆ

ಗ್ಲೋಬಲ್ ಅಚೀವರ್ಸ್ ವಿಭಿನ್ನ ಕಾರ್ಯಕ್ರಮ

ಕನ್ನಡ ಪತ್ರಿಕೋದ್ಯಮದಲ್ಲಿ ವಿಭಿನ್ನ ಆಲೋಚನೆಯೊಂದಿಗೆ ಗ್ಲೋಬಲ್ ಅಚೀವರ್ಸ್ ಕಾರ್ಯಕ್ರಮ ಆರಂಭಗೊಂಡು, ಇಂದು 12ನೇ ಆವೃತ್ತಿ ಪೂರೈಸಿದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಶ್ವವಾಣಿ ಗ್ಲೋಬಲ್ ಫೋರಂ' ಆಯೋಜಿಸುತ್ತಿರುವ ಗ್ಲೋಬಲ್ ಅಚೀವರ್ಸ್' ಕಾರ್ಯಕ್ರಮ ವಿಭಿನ್ನತೆಯಿಂದ ಗಮನ ಸೆಳೆಯುತ್ತಿದೆ. ಬೆಂಗಳೂರು ಅಥವಾ ಇತರ ನಗರದಲ್ಲಿ ಎರಡು ಗಂಟೆಗಳ ಕಾರ್ಯಕ್ರಮ ನಡೆಸಿ ಎಲ್ಲರೂ ತಮ್ಮ ತಮ್ಮ ದಾರಿಗೆ ಹೊರಟು ಹೋಗುತ್ತಾರೆ. ಆದರೆ ವಿದೇಶದಲ್ಲಿ ಎಂಟು ದಿನಗಳ ಕಾಲ ಒಟ್ಟಿಗೆ ಕಾಲ ಕಳೆಯುವುದರಿಂದ ಸಾಧಕರು ಪರಸ್ಪರ ಅರಿವು ಬೆಳೆಸಿಕೊಳ್ಳುತ್ತಾರೆ, ಅನುಭವ ಹಂಚಿಕೊಳ್ಳುತ್ತಾರೆ, ಮಾನವೀಯ ಸಂಬಂಧಗಳು ಗಟ್ಟಿಯಾಗುತ್ತವೆ. ಈ ಕಾರಣಕ್ಕೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಯನ್ನು ವಿದೇಶದಲ್ಲಿ ನಡೆಸುತ್ತಾ ಬಂದಿದೆ. ಈ ಬಾರಿ ಭಾಗವಹಿಸಿದ 38 ಜನ ಒಂದು ತಂಡವಾಗಿ, ಕುಟುಂಬ ಸದಸ್ಯರಂತೆ ಉಳಿಯುವ ನಂಬಿಕೆ ನಮಗಿದೆ ಎಂದರು.

ವಿಶ್ವವಾಣಿ ಪತ್ರಿಕೆ 1958ರಲ್ಲಿ ಹುಬ್ಬಳ್ಳಿಯಲ್ಲಿ ಡಾ. ಪಾಟೀಲ್ ಪುಟ್ಟಪ್ಪ ಅವರು ಆರಂಭಿಸಿದರು. ಪ್ರಾರಂಭದಲ್ಲಿ ಹುಬ್ಬಳ್ಳಿ-ಧಾರವಾಡಕ್ಕೆ ಮಾತ್ರ ಸೀಮಿತವಾಗಿತ್ತು. ಸುಮಾರು ಐವತ್ತೆಂಟು ವರ್ಷಗಳ ಕಾಲ ಅವರು ಏಕಾಂಗಿಯಾಗಿ ಪತ್ರಿಕೆಯನ್ನು ಮುನ್ನಡೆಸಿದರು. ಅವರ ಮಾರ್ಗದರ್ಶನದಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆಯನ್ನು 2016ರಲ್ಲಿ ಹೊಸ ಉತ್ಸಾಹದೊಂದಿಗೆ ಸ್ವೀಕರಿಸಿ ರಾಜ್ಯಮಟ್ಟದ ಪತ್ರಿಕೆಯಾಗಿಸಿ ಪರಿವರ್ತಿಸಲಾಯಿತು. ಇಂದು ವಿಶ್ವವಾಣಿ ಕರ್ನಾಟಕದ ಆರು ಆವೃತ್ತಿಗಳೊಂದಿಗೆ ರಾಜ್ಯಾದ್ಯಂತ ಪ್ರಸಾರವಾಗುತ್ತಿದೆ. ರಾಜ್ಯದ ಒಂಬತ್ತು ಪ್ರಮುಖ ಪತ್ರಿಕೆಗಳಲ್ಲಿ ಪತ್ರಕರ್ತನೊಬ್ಬನೇ ಸಂಪಾದಕ ಹಾಗೂ ಮಾಲೀಕನಾಗಿ ಮುನ್ನಡೆಸುತ್ತಿರುವ ಪತ್ರಿಕೆ ವಿಶ್ವವಾಣಿ ಮಾತ್ರ. ಇದು ವಿಶ್ವವಾಣಿಯ ವಿಶೇಷತೆ ಎಂದರು.

> **ಕೋವಿಡ್ ನಂತರ ಪತ್ರಿಕೆ ಪ್ರಾರಂಭಿಸುವುದು ದೊಡ್ಡ ಸಾಹಸವೇ ಸರಿ ಎಂದು ಅನೇಕರು ಅನುಮಾನ ವ್ಯಕ್ತಪಡಿಸಿದ್ದರು. ಆದರೆ ನಾವು ದಿನಪತ್ರಿಕೆಗಳಿಗೆ ಪೈಪೋಟಿ ನೀಡುವ ಮಟ್ಟದಲ್ಲಿ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದೇವೆ. ಆನ್‌ಲೈನ್ ಓದುಗರ ವಲಯವೂ ವೇಗವಾಗಿ ವಿಸ್ತರಿಸಿದೆ. ಒಂದು ಲೇಖನ ಪ್ರಕಟವಾದ ಕೂಡಲೇ ಅದು ವೆಬ್ ಸೈಟ್, ಡಿಜಿಟಲ್ ವೇದಿಕೆಗಳು ಮತ್ತು ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಲಭ್ಯವಾಗುತ್ತದೆ. ಕನ್ನಡದಲ್ಲಿ ಈ ರೀತಿಯ ಸಮಗ್ರ ಪ್ರಸಾರ ಮಾದರಿ ವಿರಳ.**
>
> -ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕರು, ವಿಶ್ವವಾಣಿ ಸಮೂಹ

ವಿಶ್ವವಾಣಿಯನ್ನು ರಾಜ್ಯಮಟ್ಟದ ಪತ್ರಿಕೆಯನ್ನಾಗಿ ಮಾಡುವುದಷ್ಟೇ ಅಲ್ಲದೇ, ಉತ್ತರ ಕನ್ನಡದ ಮೊದಲ, 43 ವರ್ಷದ ಇತಿಹಾಸವಿರುವ ಲೋಕಧ್ವನಿ ಪತ್ರಿಕೆಯನ್ನು ವಿಶ್ವವಾಣಿ ಸಮೂಹಕ್ಕೆ ಸೇರಿಸಿಕೊಳ್ಳಲಾಗಿದೆ. 'ವಿಶ್ವ' ಹಾಗೂ 'ಲೋಕ' ಎರಡೂ ಒಂದೇ ಅರ್ಥ. ಇದೇ ರೀತಿ 'ವಾಣಿ' ಹಾಗೂ 'ಧ್ವನಿ' ಒಂದೇ ಆಗಿದೆ. ಹೀಗಾಗಿ ವಿಶ್ವವಾಣಿ ಬೇರೆಯಲ್ಲ ಲೋಕಧ್ವನಿ ಬೇರೆಯಲ್ಲ. ಎರಡು ಬೇರೆ ಬೇರೆ ಪತ್ರಿಕೆಗಳು ಅದರ ಅರ್ಥ ಒಂದೇ ಎಂದರು.

ಪ್ರವಾಸಿ ಪ್ರಪಂಚ - ಹೊಸ ಪ್ರಯೋಗ

ದೇಶದ ಪತ್ರಿಕೋದ್ಯಮದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಪ್ರವಾಸ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಪತ್ರಿಕೆ ಎಂದರೆ ಪ್ರವಾಸಿ ಪ್ರಪಂಚ.

ಸಾಮಾನ್ಯವಾಗಿ ಪತ್ರಿಕೆಯಲ್ಲಿ ರಾಜಕೀಯ ಇರಬೇಕು, ಸಿನಿಮಾ ಇರಬೇಕು, ಅಪರಾಧ, ಕ್ರೀಡೆ ಇರಬೇಕು ಎನ್ನುವ ಕೆಲವೊಂದಷ್ಟು ಅಲಿಖಿತ ನಿಯಮಗಳಿವೆ. ಆದರೆ ಈ ಎಲ್ಲ ವಿಷಯಗಳನ್ನು ಹೊರತುಪಡಿಸಿ ಕೇವಲ ಪ್ರವಾಸ ಮತ್ತು ಪ್ರವಾಸೋದ್ಯಮಕ್ಕೆ ಅನ್ವಯವಾಗುವಂತಹ ಅಂತಾರಾಷ್ಟ್ರೀಯ ಗುಣಮಟ್ಟದ 24 ಪುಟಗಳ ಬ್ರಾಡ್ ಶೀಟ್ ಪತ್ರಿಕೆ ದೇಶದಲ್ಲಿ ಇಲ್ಲವೇ ಇಲ್ಲ. ನಿಮಗೆ ಪ್ರವಾಸಕ್ಕೆ ಸಂಬಂಧಿಸಿದ ಮ್ಯಾಗಜಿನ್‌ಗಳಿವೆ. ಆದರೆ ಪ್ರವಾಸಕ್ಕೆ ಸಂಬಂಧಪಟ್ಟ ದಿನಪತ್ರಿಕೆ ಅಂದರೆ ಅದು ಬ್ರಾಡ್ ಶೀಟ್ ಮಾದರಿಯ ದಿನಪತ್ರಿಕೆ ಇರುವಂತದ್ದು ಪ್ರವಾಸಿ ಪ್ರಪಂಚದಲ್ಲಿ ಮಾತ್ರ ಸಾಧ್ಯ ಎಂದರು.

ಪ್ರಶಸ್ತಿ ಪುರಸ್ಕೃತರ ಸಂಖ್ಯೆ ನೂರಕ್ಕೆ ಏರಲಿ

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಸಾಕಷ್ಟು ಪ್ರತಿಷ್ಠಿತವಾಗಿದ್ದು, ಇದರಲ್ಲಿ ಭಾಗವಹಿಸುತ್ತಿರುವುದಕ್ಕೆ ನನಗೆ ಹೆಮ್ಮೆ ಅನಿಸುತ್ತಿದೆ. ಅದರಲ್ಲೂ ದಕ್ಷಿಣ ಆಫ್ರಿಕಾದಂಥ ದೇಶಕ್ಕೆ ನಮ್ಮನ್ನು ಕರೆತಂದು ಪ್ರಶಸ್ತಿ ನೀಡುತ್ತಿರುವುದು ಇನ್ನಷ್ಟು ಖುಷಿ. ಈ ಕಾರ್ಯಕ್ರಮ, ಸಂಘಟನಾ ಶಕ್ತಿ ಏನು ಎಂಬುದನ್ನು ರುಜುವಾತುಪಡಿಸುವ ಸುಂದರ ದೃಷ್ಟಾಂತ. ಇಲ್ಲಿ ಮಾಜಿ ಮುಖ್ಯಮಂತ್ರಿ, ಮಾಜಿ ಸಚಿವರು, ಶಾಸಕರು, ನನ್ನ ಸಹೋದ್ಯೋಗಿಗಳು, ನನ್ನ ತಂದೆಯ ಸಹೋದ್ಯೋಗಿಗಳು ಹೀಗೆ ಎಲ್ಲ ಬಗೆಯ ಎಲ್ಲ ಕ್ಷೇತ್ರದ ವ್ಯಕ್ತಿಗಳು ಇದ್ದಾರೆ. ಕರಾವಳಿ, ಉತ್ತರ ಕರ್ನಾಟಕ, ಮೈಸೂರು, ಬೆಂಗಳೂರು ಹೀಗೆ ಎಲ್ಲ ಕಡೆಯ ವ್ಯಕ್ತಿಗಳಿದ್ದಾರೆ. ವಿಶ್ವವಾಣಿ ಟೀಮ್ ಜತೆಗೆ ಬಂದಾಗ ಒಂದು ಕುಟುಂಬದ ಜತೆಗೆ ಇದ್ದಂತೆ ಭಾಸವಾಗುತ್ತದೆ. ಗೌರವಿಸುವ ರೀತಿ, ಆತಿಥ್ಯ ಎಲ್ಲವೂ ಮಾದರಿಯಾಗಿದೆ. ಮುಂದಿನ ವರ್ಷ ಈ ಪ್ರಶಸ್ತಿ ಪುರಸ್ಕೃತರ ಸಂಖ್ಯೆ ನೂರಕ್ಕೆ ಏರಲಿ ಎಂದು ವೈದ್ಯಕೀಯ ತಜ್ಞರಾದ ಡಾ.ಯು.ಟಿ ಇಫ್ತಿಕಾರ್ ಆಲಿ ಅಹಮದ್ ಅವರು ಹೇಳಿದರು.

ವಿವಿಧತೆಯಲ್ಲಿ ವಿಶೇಷತೆ ನೀಡಿದ ವಿಶ್ವವಾಣಿ

ವಿಶ್ವವಾಣಿ ಪ್ರಶಸ್ತಿ ಪಡೆಯಲು ಬಹಳ ಸಂತೋಷವಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಕೈಯಿಂದ ಅದನ್ನು ಪಡೆದದ್ದು ಕೂಡ ಇನ್ನಷ್ಟು ಸಂತೋಷವಾಗಿದೆ. ಇದರೊಂದಿಗೆ ಇಂಡಿಯಾ ಈಸ್ ಮೈ ಸೆಕೆಂಡ್ ಹೋಮ್ ಎಂದೂ ಇಲ್ಲಿಯ ಮುಖಂಡರು ಹೇಳಿರುವುದು. ವಿವಿಧ ತೆಯಲ್ಲಿ ಏಕತೆಯನ್ನು ಕಂಡ ದೇಶ ಭಾರತ. ಆದರೆ ವಿವಿಧತೆಯಲ್ಲಿ ಒಂದು ವಿಶೇಷತೆಯನ್ನು ಕೊಟ್ಟ ಪತ್ರಿಕೆ ವಿಶ್ವವಾಣಿ ಎಂದು ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ 52 ವರ್ಷದ ಸಾಮಾಜಿಕ ಸೇವಾ ಬದುಕಿನಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದೇನೆ. ಸಾವಿರಾರು ಜನರ ಮುಂದೆ ಪಡೆದಿದ್ದೇನೆ. ಆದರೆ ಹೊರದೇಶಕ್ಕೆ ಬಂದು ಇಲ್ಲಿಯ ಸಂಸ್ಕೃತಿಯನ್ನು ಪರಿಚಯಿಸಿಕೊಳ್ಳುತ್ತಾ ವಿಶ್ವವಾಣಿ ಅವಾರ್ಡ್ ಪಡೆದಿರುವುದು ತುಂಬಾ ವಿಶೇಷವಾಗಿದೆ. ನಾವು ಸಾಯುವವರೆಗೂ ಪ್ರಶಸ್ತಿಗಳನ್ನು ಪಡೆಯುವುದಿರುತ್ತದೆ. ಅಂದರೆ ಸಾಧನೆ ಎಷ್ಟು ಮಾಡಿದರೂ ಮುಗಿಯದು ಎಂದರ್ಥ. ಇನ್ನಷ್ಟು ಸಾಧನೆ ಮಾಡುವ ಪ್ರೋತ್ಸಾಹ, ಸೂಚನೆಯನ್ನು ಈ ಪುರಸ್ಕಾರದ ಮೂಲಕ ನೀಡಿದ್ದೀರಿ ಎಂದು ಭಾವಿಸುತ್ತೇನೆ ಎಂದರು. ಪ್ರಪಂಚದ ಬೇರೆ ಬೇರೆ ದೇಶಗಳನ್ನು ನಾನು ಸುತ್ತಿದ್ದೇನೆ. ಆದರೆ ಎಲ್ಲೂ ಕೂಡ ನಮ್ಮ ರಾಷ್ಟ್ರಗೀತೆಗೆ ಎದ್ದು ನಿಂತು ಗೌರವ ಕೊಡುವ ಸೌಭಾಗ್ಯ ಸಿಕ್ಕಿಲ್ಲ. ಇಲ್ಲಿ ಅದೂ ಸಿಕ್ಕಿದೆ. ಯಾರ ಹಣೆಬರಹವನ್ನು ಬದಲಾಯಿಸಲಾರೆವು. ಆದರೆ ಉತ್ತಮ ಮಾರ್ಗದರ್ಶನ ಕೊಡಬಲ್ಲೆವು. ಅವಕಾಶ ಸಿಕ್ಕಿದಾಗ ಸ್ವಾರ್ಥಿಯಾಗಬೇಡ, ಸಾರಥಿಯಾಗು ಎಂದು ಭಗವಂತ ಹೇಳುತ್ತಾನೆ. ವಿಶ್ವೇಶ್ವರ ಭಟ್ಟರಿಗೆ ಪತ್ರಿಕೋದ್ಯಮದಲ್ಲಿ ಇಂಥ ಬಹಳ ದೊಡ್ಡ ಮಾರ್ಗದರ್ಶನದ ಅವಕಾಶ ಸಿಕ್ಕಿದೆ. ಸಾರಥಿಯಾಗಿ ನೀವು ಎಲ್ಲ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಒಟ್ಟುಗೂಡಿಸಿದ್ದೀರಿ. ಇದು ಇನ್ನಷ್ಟು ಬೆಳೆಯಲಿ. ಅವಾರ್ಡ್ ತಗೊಂಡು ಹೋಗಲು ಬಂದವಳು ವಿಶ್ವವಾಣಿ ಕುಟುಂಬದ ಸದಸ್ಯೆಯಾಗಿದ್ದೇನೆ. ನೂರಾರು ಜನರನ್ನು ಸೇರಿಸುವ ಇಂಥ ಕಾರ್ಯಕ್ರಮಗಳು ವಿಶ್ವವಾಣಿಯಿಂದ ಇನ್ನಷ್ಟು ಆಗಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು.

ವಿದೇಶಿ ನೆಲದಲ್ಲಿ ಕನ್ನಡದ ಕಾರ್ಯಕ್ರಮ: ಶೆಟ್ಟರ್

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಾತನಾಡಿ, ಈ ಕಾರ್ಯಕ್ರಮವನ್ನು ಬೆಂಗಳೂರು ಅಥವಾ ಹುಬ್ಬಳ್ಳಿಯಲ್ಲೂ ನಡೆಸಬಹುದಾಗಿತ್ತು. ಆದರೆ ವಿದೇಶದಲ್ಲಿ, ವಿಶೇಷವಾಗಿ ದಕ್ಷಿಣ ಆಫ್ರಿಕಾದಂತಹ ಐತಿಹಾಸಿಕ ಹಾಗೂ ಸುಂದರ ದೇಶದಲ್ಲಿ ನಡೆಸಿರುವುದು ವಿಶೇಷ. ಇದು ಕೇವಲ ಪ್ರಶಸ್ತಿ ಪ್ರದಾನವಲ್ಲ, ಎರಡು ದೇಶಗಳ ನಡುವಿನ ಸಂಸ್ಕೃತಿ, ಪರಂಪರೆ ಹಾಗೂ ವ್ಯಾಪಾರಿಕ ಸಂಬಂಧಗಳ ವಿನಿಮಯಕ್ಕೆ ಅವಕಾಶ ನೀಡುವ ವೇದಿಕೆ ಎಂದರು.

ನಾನು ಇದೇ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾಗೆ ಭೇಟಿ ನೀಡಿದ್ದು, ಹೊಸ ದೇಶ, ಹೊಸ ಅನುಭವ ನೀಡಿದೆ. ಅಮೆರಿಕ, ಯುರೋಪ್, ಚೀನಾ, ಸಿಂಗಾಪುರ, ಮಲೇಷ್ಯಾ ದೇಶಗಳಿಗೆ ಹಲವಾರು ಬಾರಿ ಹೋಗಿದ್ದೇನೆ. ಆದರೆ ದಕ್ಷಿಣ ಆಫ್ರಿಕಾ ಭೇಟಿ ಸಾಧ್ಯವಾಗಿರಲಿಲ್ಲ. ಇದನ್ನು ವಿಶ್ವವಾಣಿ ಮತ್ತು ವಿಶ್ವೇಶ್ವರ ಭಟ್ ಅವರಿಂದ ನೋಡಲು ಸಾಧ್ಯವಾಯಿತು. ಅಮೆರಿಕ, ಯುರೋಪ್ ದೇಶಗಳಿಗೆ ಭಾರತೀಯರು ಸಾಮಾನ್ಯವಾಗಿ ಭೇಟಿ ನೀಡುತ್ತಾರೆ. ಆದರೆ ದಕ್ಷಿಣ ಆಫ್ರಿಕಾದಂತಹ ದೇಶಗಳ ಸಂಸ್ಕೃತಿ, ಪರಂಪರೆ ಮತ್ತು ಜನಜೀವನವನ್ನು ಅರಿಯಲು ಇಂತಹ ಕಾರ್ಯಕ್ರಮಗಳು ಅಗತ್ಯ. ಪ್ರಶಸ್ತಿ ಎನ್ನುವುದು ಕೇವಲ ಒಂದು ನಿಮಿತ್ತ ಮಾತ್ರ. ಆ ಮೂಲಕ ಹೊಸ ದೇಶ, ಹೊಸ ವ್ಯವಸ್ಥೆ ಮತ್ತು ಹೊಸ ಸಂಪರ್ಕಗಳನ್ನು ಪರಿಚಯಿಸಿಕೊಳ್ಳುವ ಅವಕಾಶ ಸಿಗುತ್ತದೆ ಎಂದರು.

> **ಕಾರ್ಯಕ್ರಮವೂ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಸ್ನೇಹ ಮತ್ತು ಸಹಕಾರವನ್ನು ಮತ್ತಷ್ಟು ಬಲಪಡಿಸುವ ವೇದಿಕೆಯಾಗಲಿದೆ. ಇದು ಕೇವಲ ಸಾಧಕರ ಗೌರವ ಸಮಾರಂಭವಲ್ಲ, ಇದು ಹೊಸ ಅಂತಾರಾಷ್ಟ್ರೀಯ ಸಂಕುಲದ ಆರಂಭ. ವ್ಯಾಪಾರ, ಹೂಡಿಕೆ, ಶಿಕ್ಷಣ ಹಾಗೂ ಸಾಂಸ್ಕೃತಿಕ ವಿನಿಮಯಗಳಿಗೆ ಹೊಸ ದಾರಿಯನ್ನು ತೋರಿಸುತ್ತದೆ. ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಸಮ್ಮೇಳನವು ಭಾರತೀಯ ಸಾಧಕರಿಗೆ ಜಾಗತಿಕ ವೇದಿಕೆಯಲ್ಲಿ ಗುರುತಿನ ಜತೆಗೆ, ಹೊಸ ಸಂಪರ್ಕಗಳು ಮತ್ತು ಸಹಕಾರದ ಅವಕಾಶಗಳನ್ನು ಒದಗಿಸಿರುವುದು ಭಾಗವಹಿಸಿದ ಸಂತೋಷವಿದೆ.**
>
> - ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿ

ಹೊಸ ಪ್ರಯೋಗಗಳಲ್ಲಿ ಮುಂಚೂಣಿ

ಗ್ಲೋಬಲ್ ಅಚೀವರ್ಸ್ ಮಾದರಿಯ ಕಾರ್ಯಕ್ರಮವನ್ನು ವಿಶ್ವವಾಣಿ ಪ್ರಾರಂಭಿಸಿದ ಬಳಿಕ ಇತರ ಪತ್ರಿಕೆಗಳೂ ಇಂತಹ ಪ್ರಯತ್ನಗಳನ್ನು ಕೈಗೊಂಡಿರುವುದು ಗಮನಾರ್ಹ. ಹೊಸ ಪ್ರಯೋಗಗಳನ್ನು ಮೊದಲು ಪ್ರಾರಂಭಿಸುವ ಪರಂಪರೆ ವಿಶ್ವವಾಣಿ ಮತ್ತು ವಿಶ್ವೇಶ್ವರ ಭಟ್ ಅವರಲ್ಲಿದೆ

ಅವರ ಕಾರ್ಯ ಶ್ಲಾಘನೀಯ. 19 ಶತಮಾನದಲ್ಲಿದ್ದ ಹಿರಿಯ ಹೋರಾಟಗಾರ ಪಾಟೀಲ್ ಪುಟ್ಟಪ್ಪ ಅವರಿಂದ 2016ರಲ್ಲಿ ವಿಶ್ವೇಶ್ವರ ಭಟ್ ಪತ್ರಿಕೆಯ ನೇತೃತ್ವ ವಹಿಸಿಕೊಂಡು ಪ್ರಸ್ತುತ ರಾಜ್ಯಮಟ್ಟದ ಪತ್ರಿಕೆಯಾಗಿ ಪರಿವರ್ತನೆ ಮಾಡಿದ ಕಾರ್ಯ ಪ್ರಸಂಶನೀಯ. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪಾಟೀಲ್ ಪುಟ್ಟಪ್ಪ ಅವರ ಪಾತ್ರ ಅಪಾರ. ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖಾಂತರ ಉತ್ತರ ಕರ್ನಾಟಕದ ಹೋರಾಟಕ್ಕೆ ಅವರು ನೀಡಿದ ಕೊಡುಗೆ ಅನನ್ಯವಾದದ್ದು ಎಂದರು.

1977ರಲ್ಲಿ ನಾನು ಎಲ್‌ಎಲ್‌ಬಿ ಓದುತ್ತಿದ್ದಾಗ ವಿಶ್ವವಾಣಿಯಲ್ಲಿ ಪತ್ರಕರ್ತನಾಗಿ ಸೇರಿದ್ದೆ. ವಿಶ್ವವಾಣಿಯಲ್ಲಿ ಸುದ್ದಿ ಬರೆಯುವವರ ಅಗತ್ಯವಿದೆ ಎಂಬ ಜಾಹೀರಾತು ನೋಡಿ ನೇರವಾಗಿ ಪಾಟೀಲ್ ಪುಟ್ಟಪ್ಪ ಅವರನ್ನು ಭೇಟಿಯಾದೆ. ಅಂದೇ ಸಂದರ್ಶನ, ಅಂದೇ ನೇಮಕ. ನನ್ನ ಮೊದಲ ವೇತನ ತಿಂಗಳಿಗೆ 300 ರುಪಾಯಿ. ಅದು ನನ್ನ ಜೀವನದ ಮೊದಲ ಸಂಬಳ. ಆ ಸಮಯದಲ್ಲಿ ಇಂಗ್ಲಿಷ್ ಸುದ್ದಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಜವಾಬ್ದಾರಿ ವಹಿಸಿದ್ದಾಗಿ, ಹಿರಿಯ ಲೇಖಕ ಎಂ. ಜೀವನ್ ಅವರ ಮಾರ್ಗದರ್ಶನ ತಮ್ಮ ಬರವಣಿಗೆಯ ಜೀವನಕ್ಕೆ ದಿಕ್ಕು ನೀಡಿತು. ಪತ್ರಿಕೋದ್ಯಮ ನನಗೆ ಜೀವನಪಾಠ ಕಲಿಸಿತು. ವಿದ್ಯಾರ್ಥಿಗಳು ತಂದೆ-ತಾಯಿಯ ಮೇಲೆಯೇ ಅವಲಂಬಿತರಾಗದೆ ಸ್ವತಃ ದುಡಿಯಬೇಕು ಎಂಬ ಸಂದೇಶವನ್ನು ನಾನು ಅಂದೇ ಅರ್ಥ ಮಾಡಿಕೊಂಡೆ ಎಂದರು.

ವಿವಿಧ ಕ್ಷೇತ್ರದವರನ್ನೂ ಒಂದೆಡೆ ಸೇರಿಸುವುದು ಸುಲಭ ಅಲ್ಲ

ವಿವಿಧ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಒಂದೇ ವೇದಿಕೆಯಲ್ಲಿ ಸೇರಿಸುವುದು ಸುಲಭದ ವಿಷಯವಲ್ಲ. ಆದರೆ ಈ ವಿಷಯದಲ್ಲಿ ವಿಶ್ವೇಶ್ವರ ಭಟ್ ಹಾಗೂ ವಿಶ್ವವಾಣಿ ಕುಟುಂಬ ಯಶಸ್ವಿಯಾಗಿದೆ ಎಂದು ಪರ್ವ ಗ್ರೂಪ್ ಸಂಸ್ಥಾಪಕ ಎಚ್.ಪಿ. ನೀಲೇಶ್ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿವಿಧ ಕ್ಷೇತ್ರಗಳ 300ಕ್ಕೂ ಹೆಚ್ಚು ಮಂದಿ ಒಂದೇ ವೇದಿಕೆಯಲ್ಲಿ ಸೇರುವುದು ಅಪರೂಪದ ಸಂಗತಿಯಾಗಿದೆ. 12 ಆವೃತ್ತಿಗಳ ಮೂಲಕ ನಡೆದ ಈ ಸಮ್ಮೇಳನದಲ್ಲಿ ರಿಯಲ್ ಎಸ್ಟೇಟ್, ಹಣಕಾಸು, ವೈದ್ಯಕೀಯ, ರಾಜಕೀಯ, ಉದ್ಯಮ, ಸೇವಾ ಕ್ಷೇತ್ರ ಸೇರಿದಂತೆ ವಿವಿಧ ವಲಯಗಳ ಸುಮಾರು 300-350 ಮಂದಿ ಭಾಗಿಯಾಗಿದ್ದಾರೆ. ನಾವೆಲ್ಲರೂ ಒಂದೇ ಉದ್ಯಮದಿಂದ ಬಂದವರಲ್ಲ. ಪ್ರತಿಯೊಬ್ಬರೂ ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದೇವೆ. ಆದರೆ ಇಲ್ಲಿ ನಾವು ಒಂದೇ ಕುಟುಂಬ ಎಂಬ ಭಾವನೆಯೊಂದಿಗೆ ಒಂದಾಗಿದ್ದೇವೆ ಎಂದರು.

ಈ ವೇದಿಕೆ ಕೇವಲ ಪರಿಚಯದ ಮಟ್ಟದಲ್ಲಿಲ್ಲ, ಪರಸ್ಪರ ಸಹಕಾರ, ಮಾರ್ಗದರ್ಶನ, ವ್ಯವಹಾರಿಕ ಬೆಳವಣಿಗೆ ಮತ್ತು ಮಾನಸಿಕ ಬೆಂಬಲ ನೀಡುವ ವೇದಿಕೆಯಾಗಿದೆ. ನಾಳೆ ಯಾರಿಗಾದರೂ ವ್ಯವಹಾರಿಕ ಸಹಾಯ ಬೇಕಾದರೂ, ಸಲಹೆ ಬೇಕಾದರೂ, ಸಾಂತ್ವನ ಬೇಕಾದರೂ ನೇರವಾಗಿ ಸಂಪರ್ಕಿಸಬಹುದಾದ ಬಾಂಧವ್ಯ ಇಲ್ಲಿ ರೂಪುಗೊಂಡಿದೆ ಎಂದರು.

ಈ ಕುಟುಂಬಕ್ಕೆ ಮೊದಲ ಆದ್ಯತೆ

ಪ್ಯಾರಿಸ್‌ನಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಹಾಗೂ ದುಬೈ ಕಾರ್ಯಕ್ರಮಗಳ ನಡುವೆಯೂ ಕುಟುಂಬದೊಂದಿಗೆ ಸಮಯ ಕಳೆಯಲು ಮಾಡಿದ ತ್ಯಾಗವನ್ನು ನೆನಪಿಸಿಕೊಂಡ ಅವರು, ವಿಶ್ವವಾಣಿ ಕುಟುಂಬದೊಂದಿಗೆ ಇರಲು ಲಕ್ಷಾಂತರ ರುಪಾಯಿ ವೆಚ್ಚ ಮಾಡಿ ಟಿಕೆಟ್ ರದ್ದುಪಡಿಸಿದ್ದೇನೆ. ಈ ಕುಟುಂಬವೇ ನನಗೆ ಮೊದಲ ಆದ್ಯತೆ. ಇದೇ ರೀತಿ, ದುಬೈಯಲ್ಲಿ ಆಯೋಜಿಸಲಾದ ದೊಡ್ಡ ಕಾರ್ಯಕ್ರಮವನ್ನೂ ಬಿಟ್ಟು, ಮೂರು ದಿನಗಳ ಈ ಸಮ್ಮೇಳನದಲ್ಲಿ ಸಂಪೂರ್ಣವಾಗಿ ಭಾಗವಹಿಸಲು ತೀರ್ಮಾನಿಸಿದ್ದೇನೆ ಎಂದರು. ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರನ್ನು ಒಳಗೊಂಡ ಪುನರ್ಮಿಲನ ಸಮ್ಮೇಳನವನ್ನು ಕ್ರೂಸ್‌ನಲ್ಲಿ ನಾಲ್ಕೈದು ದಿನಗಳ ಕಾಲ ಆಯೋಜಿಸುವ ಯೋಚನೆ ಇದೆ. ಶಾಲೆಯ ರಿಯೂನಿಯನ್ನಂತೆ ಮತ್ತೆ ಒಂದಾಗುವ ಅವಕಾಶ ಇದರಿಂದ ಸಿಗುತ್ತದೆ. ಇದು ನಮ್ಮ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂದರು. ಈ ಸಮ್ಮೇಳನವು ಕೇವಲ ವ್ಯವಹಾರಿಕ ನೆಟ್‌ವರ್ಕಿಂಗ್ ವೇದಿಕೆಯಾಗಿ ಮಾತ್ರವಲ್ಲ, ಬಾಂಧವ್ಯ, ಪರಸ್ಪರ ವಿಶ್ವಾಸ ಮತ್ತು ಸಾಮಾಜಿಕ ಜವಾಬ್ದಾರಿಯ ಸಂಕೇತವಾಗಿ ಮೂಡಿಬಂದಿದೆ. ಕುಟುಂಬವೇ ಶಕ್ತಿ, ಸಂಪರ್ಕವೇ ಸಂಪತ್ತು ಯಾವುದೇ ಸಹಾಯ ಬೇಕಿದ್ದರೂ ನನ್ನನ್ನು ಸಂಪರ್ಕಿಸಿ. ನಮ್ಮ ಮನೆ ಬಾಗಿಲು ಸದಾ ತೆರೆದಿರುತ್ತದೆ ಎಂದರು.

ಇದೊಂದು ಸಾಂಸ್ಕೃತಿಕ ವಿನಿಮಯ

ಭಾರತ ದೇಶದ ಕರ್ನಾಟಕದ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಅನ್ನು ದಕ್ಷಿಣ ಆಫ್ರಿಕಾದಲ್ಲಿ ನೀಡಲು ಉದ್ದೇಶಿಸಿ, ಇಷ್ಟೊಂದು ಪ್ರಶಸ್ತಿ ಪುರಸ್ಕೃತರನ್ನು ಒಟ್ಟುಗೂಡಿಸಿ ಕರೆತಂದಿರುವುದು ನಮ್ಮ ಪಾಲಿಗೆ ವಿಶೇಷ ಗೌರವದ ಕ್ಷಣ. ದಕ್ಷಿಣ ಆಫ್ರಿಕಾ ಹಾಗೂ ಭಾರತದ ಬಾಂಧವ್ಯ ಇಂದು ನಿನ್ನೆಯದ್ದಲ್ಲ. ಭಾರತದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧಿ ಅವರನ್ನು ಸ್ವಾತಂತ್ರ್ಯ ಹೋರಾಟಗಾರನಾಗಿ ರೂಪಿಸಿ ನೀಡಿದ ದೇಶ ನಮ್ಮದು ಎಂಬುದು ನಮ್ಮ ಹೆಮ್ಮೆ ಎಂದು ಸೌತ್ ಆಫ್ರಿಕನ್ ಟೂರಿಸಂನ ರೀಜನಲ್ ಜನರಲ್ ಮ್ಯಾನೇಜರ್ ಶ್ರೀ ಕೊಬಾನಿ ಗಾಡ್ಸ್‌ವಿಲ್ ಮ್ಯಾಂಕೋಟ್ವಾ ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ, ನಿಮ್ಮ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ನಮ್ಮ ಕೊಡುಕೊಳ್ಳುವಿಕೆಗಳು ಮಾನವೀಯ ನೆಲೆಯಲ್ಲಿ ಹಾಗೂ ವ್ಯಾವಹಾರಿಕ ನೆಲೆಯಲ್ಲಿ ವ್ಯಾಪಕವಾಗಿ ವಿಸ್ತರಿಸಿವೆ. ಉಭಯ ದೇಶಗಳೂ ಇದರಿಂದ ಲಾಭ ಪಡೆದಿವೆ. ಭಾರತದ ಅನೇಕ ಕಡೆಗಳಿಗೆ ನಮ್ಮ ದೇಶದ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸ ಮಾಡುತ್ತಿದ್ದಾರೆ. ಹಾಗೇ ಭಾರತದ ಸಾವಿರಾರು ಮಂದಿ ನಮ್ಮಲ್ಲಿಗೆ ಪ್ರತಿವರ್ಷ ವನ್ಯಜೀವಿ ಪ್ರವಾಸೋದ್ಯಮಕ್ಕಾಗಿ ಬರುತ್ತಾರೆ. ಉಭಯ ದೇಶಗಳ ಜನಪ್ರಿಯ ನಾಯಕರ ಬಾಂಧವ್ಯ ಉತ್ತಮವಾಗಿದೆ. ವಿಶ್ವವಾಣಿ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮದ ಮೂಲಕ ಈ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ ಕಾರ್ಯ ಆಗುತ್ತಿದೆ. ಇದೊಂದು ಸಾಂಸ್ಕೃತಿಕ ವಿನಿಮಯವೂ ಆಗಿದೆ. ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರದಲ್ಲಿ ನಿಮ್ಮ ಸಹಭಾಗಿತ್ವವನ್ನು ಇನ್ನಷ್ಟು ಅಪೇಕ್ಷಿಸುತ್ತೇವೆ ಹಾಗೂ ನಾವೂ ಅದರಲ್ಲಿ ಕೈಜೋಡಿಸುತ್ತೇವೆ. ಮುಂದಿನ ವರ್ಷವೂ ವಿಶ್ವವಾಣಿ ಕಾರ್ಯಕ್ರಮ ಇಲ್ಲೇ ಆಗಲಿ ಎಂದು ಹೇಳಿದರು.

ಸಮಾಜವನ್ನು ಪುನರ್‌ಮಿಲನ ಮಾಡುವ ಪ್ರಯತ್ನ

ವಿಶ್ವೇಶ್ವರ ಭಟ್ಟರು ಪೂರ್ವಜನ್ಮದ ಸುಕೃತ ಮಾಡಿದ್ದಾರೆ. ಮನುಷ್ಯ ಎಷ್ಟು ಹಣ ಮಾಡಿದರೂ ಸಮಾಜ ನೆನೆಯುವುದಿಲ್ಲ. ಸಮಾಜ ಒಪ್ಪುವಂಥ ಕೆಲಸ ಮಾಡಿದರೆ ಮಾತ್ರ ಸಮಾಜ ಆತನನ್ನು ನೆನೆಯುತ್ತದೆ. ನಾವು ಹಳ್ಳಿಯಲ್ಲಿ ಭಾವನಾತ್ಮಕ ಬೆಸುಗೆಯಿಂದ ಕೂಡಿದ ಜೀವನ ಕಂಡವರು. ಇತ್ತೀಚಿನ ದಿನಗಳಲ್ಲಿ ಅದೆಲ್ಲವೂ ಬದಲಾಗಿ ಗಂಡ, ಹೆಂಡತಿ, ಮಕ್ಕಳು ಇಷ್ಟಕ್ಕೆ ಬಂದು ನಿಂತಿದೆ. ಇಂಥ ಸಮಾಜವನ್ನು ಪುನರ್‌ಮಿಲನ ಮಾಡಲು ಭಟ್ಟರು ಪ್ರಯತ್ನ ಮಾಡುತ್ತಿದ್ದಾರೆ. ಬೇರೆ ದೇಶಕ್ಕೂ ತಮ್ಮ ಯತ್ನವನ್ನು ವಿಸ್ತರಿಸಿದ್ದಾರೆ ಎಂದು ಮಾಜಿ ಶಾಸಕರು, ಶಿಕ್ಷಣೋದ್ಯಮಿ ಬಿ.ಎಂ. ಸುಕುಮಾರ ಶೆಟ್ಟಿ ಅವರು ಹೇಳಿದರು.

ಭಟ್ಟರ ಕುಟುಂಬ ಕೊಲ್ಲೂರು ಮೂಕಾಂಬಿಕಾ ದೇವಿಯ ಪರಮಭಕ್ತರು. ಅವರ ಈ ಕಾರ್ಯಕ್ರಮಗಳಿಂದ ಎಷ್ಟೋ ಜನರಿಗೆ ಹೊಸ ಅನುಭವ ಉಂಟಾಗಿದೆ. ಹತ್ತು ಜನರ ಒಡನಾಟ, ಬೇರೆ ದೇಶದ ಜನಜೀವನ ಸಂಸ್ಕೃತಿಯ ಪರಿಚಯ ಆಗುತ್ತಿದೆ. ನಾವು ಅಲ್ಲಿ ಹೇಗಿರಬೇಕು ಎಂಬುದನ್ನೂ ಅವರು ಕಲಿಸಿಕೊಡುತ್ತಿದ್ದಾರೆ. ಪತ್ರಿಕೋದ್ಯಮದಲ್ಲಿ ಅವರೇ ಮುಂಚೂಣಿ. ಹಣಕಾಸಿನ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟು, ಸ್ವಂತ ಬರಹ, ಸ್ವಶಕ್ತಿ, ಸಮಾಜದ ತಪ್ಪನ್ನು ಎತ್ತಿ ಹಿಡಿಯುವ ವಿಮರ್ಶೆಗಳಿಂದ ಬೆಳೆದಿದ್ದು, ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.

> **ಕೊಲ್ಲೂರಿಗೆ ಎಲ್ಲರೂ ಭೇಟಿ ಕೊಟ್ಟು ದೇವಿಯ ಆಶೀರ್ವಾದ ಪಡೆಯುವಂತಾಗಲಿ. ಅದು ದೇವಿಯ ನೈಜ ಸಾನ್ನಿಧ್ಯ, ವಿಶೇಷ ಶಕ್ತಿ ಇರುವ ಕ್ಷೇತ್ರ. ಶಾಸಕನಾಗುವುದು ದೊಡ್ಡ ವಿಷಯವಲ್ಲ. ಆದರೆ ದೇವಸ್ಥಾನದ ಮಂಡಳಿಯಲ್ಲಿ ಹತ್ತು ವರ್ಷ ನಾನಿದ್ದು, ಇಂದು ಸುಕುಮಾರ ಶೆಟ್ಟಿ ಎಂದರೆ ಕೊಲ್ಲೂರು ದೇವಾಲಯ ಎಂದು ಗುರುತಿಸ್ತಾರೆ. ಅದೇ ದೊಡ್ಡ ಸಾರ್ಥಕ್ಯ. ಕೊಲ್ಲೂರಿನಲ್ಲಿ ಇಳಯರಾಜ, ಯೇಸುದಾಸ್ ಮುಂತಾದವರು ದೇವರ ಆಶೀರ್ವಾದ ಪಡೆದಿದ್ದಾರೆ. ಅಲ್ಲಿ ಬಂದವರ ಕಷ್ಟಕಾರ್ಪಣ್ಯ ದೂರವಾಗುತ್ತದೆ.**
>
> -ಬಿ.ಎಂ.ಸುಕುಮಾರ ಶೆಟ್ಟಿ, ಮಾಜಿ ಶಾಸಕರು, ಶಿಕ್ಷಣೋದ್ಯಮಿ

ಪ್ರತಿದಿನವೂ ನಾನು ಮುಂಜಾನೆ ನಾಲ್ಕೂವರೆ ಗಂಟೆಗೆ ಕೊಲ್ಲೂರು ದೇವಾಲಯಕ್ಕೆ ಹೋಗಿ ಒಂದು ಗಂಟೆ ದೇವಿಯ ಸಾನಿಧ್ಯದಲ್ಲಿರುತ್ತೇನೆ, ಅಷ್ಟು ಹೊತ್ತಿಗೆ ದೇವಿ ಪ್ರಫುಲ್ಲಳಾಗಿರುತ್ತಾಳೆ. ಆಕೆಯ ಆಶೀರ್ವಾದ ಸಂಪೂರ್ಣ ಶಕ್ತಿಯುತವಾಗಿರುತ್ತದೆ. ಪ್ರತಿ ಮಂಗಳವಾರ ಆನೆಗುಡ್ಡೆ ದೇವಾಲಯಕ್ಕೆ ಹೋಗುತ್ತೇನೆ. ಪ್ರತಿ ಶನಿವಾರ ಸಾಲಿಗ್ರಾಮ ನರಸಿಂಹ ದೇವಸ್ಥಾನಕ್ಕೆ ಹೋಗುತ್ತೇನೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿವರ್ಷ ಕಾಶಿಗೆ ಹೋಗಿ ಅಲ್ಲಿ ನನ್ನ ಜನ್ಮದಿನ ಆಚರಿಸಿಕೊಳ್ಳೇನೆ. ಈ ವರ್ಷ ಇಪ್ಪತ್ತೊಂದನೇ ಬಾರಿ ಕಾಶಿಗೆ ಹೋಗಿದ್ದೇನೆ. ಕೇದಾರನಾಥ, ಬದರಿನಾಥಕ್ಕೂ ಹೋಗಿದ್ದೇನೆ. ನಾನು ನಿಮಿತ್ತ ಮಾತ್ರ, ಎಲ್ಲವೂ ಪರಮಾತ್ಮನ ಆಶೀರ್ವಾದ. ದೇವರ ಅನುಗ್ರಹ ಇದ್ದರೆ ಏನು ಬೇಕಾದರೂ ನಡೆಯಬಹುದು. ಭಟ್ಟರ ಮೇಲೂ ದೇವರ ಆಶೀರ್ವಾದವಿದೆ ಎಂದು ಹೇಳಿದರು.

ಭಟ್ಟರಿಂದ ಸಮಾಜ ಕಟ್ಟುವ ಕಾರ್ಯ

ವಿಶ್ವೇಶ್ವರ ಭಟ್ಟರನ್ನು ನಾವು ಕೇವಲ ಸಂಪಾದಕರಾಗಿ ನೋಡುತ್ತೇವೆ. ಆದರೆ ಅವರು ವಿಶ್ವಕೋಶ ಎಂದು ವಿಧಾನಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗದೀಶ್ ಶೆಟ್ಟರ್ ಅವರು ತಮ್ಮ ಭಾಷಣದಲ್ಲಿ, ವಿಶ್ವೇಶ್ವರ ಭಟ್ ಅವರೊಂದಿಗೆ ಯಾವ ರೀತಿ ಬಾಂಧವ್ಯ ಆರಂಭವಾಯಿತು, ಈ ಸಂಬಂಧ ಹೇಗೆ ಗಟ್ಟಿಯಾಯಿತು ಎನ್ನುವ ಬಗ್ಗೆ ಮನದಾಳದ ಮಾತು ಹೇಳಿದರು. ಹೃದಯ ಹೃದಯಗಳ ವಾತ್ಸಲ್ಯಕ್ಕೆ ಕೊಂಡಿಯ ಆವಶ್ಯಕತೆ ಇದೆಯೇ? ಇದೆ ಅದು ಯಾವಾಗ ಎಂದರೆ ಒಬ್ಬರನ್ನೊಬ್ಬರು ಅರಿತಾಗ ಮಾತ್ರ ಎನ್ನುವ ನಾಣ್ಣುಡಿ ಇದೆ. ಇದಕ್ಕೆ ಈಗ ವಿಶ್ವೇಶ್ವರ ಭಟ್ ಸಾಕ್ಷಿಯಾಗಿದ್ದಾರೆ. ವಿಶ್ವೇಶ್ವರ ಭಟ್ ಅವರನ್ನು ನಾವು ಸಂಪಾದಕರಾಗಿ ನೋಡುತ್ತೇವೆ. ಅವರು ವಿಶ್ವಕೋಶ ಎನ್ನುವುದು ನನ್ನ ಅಭಿಪ್ರಾಯ. ಭಿವಿಶ್ವವಾಣಿಭಿ ಪತ್ರಿಕೆ ವಿಶ್ವಕೋಶ. ಅವರು ನಾಡಿಗೇ ಮಾರ್ಗದರ್ಶಕರು ಎಂದು ಹೇಳಿದರು.

ಪ್ರತಿಕೋದ್ಯಮದಲ್ಲಿ ಯಾವ ರೀತಿ ಸ್ವಾರ್ಥ ಇದೆ, ಸಂಬಂಧಗಳೆಲ್ಲ ಯಾವ ರೀತಿ ಕಳಚಿ ಬಿದ್ದಿದೆ, ನಮ್ಮ ಮಕ್ಕಳನ್ನು ಮುಂದೆ ಯಾವ ರೀತಿ ಕಾಪಾಡಬೇಕು. ಈ ವಿಚಾರದಲ್ಲಿ ಎಷ್ಟು ಚಿಂತನೆ ನಡೆಸಿದರೂ ಕಡಿಮೆಯೇ. ನಾವು ಸ್ವಸ್ಥ ಸಮಾಜವನ್ನು ಕಟ್ಟಬೇಕಿದೆ. ನಮ್ಮೆಲ್ಲ ಹಿರಿಯರು ಅಕ್ಷರ ಕಲಿಯಲಿಲ್ಲ, ಓದಲಿಲ್ಲ, ಬರೆಯಲಿಲ್ಲ. ಆದರೆ ಉತ್ತಮ ಸಮಾಜವನ್ನು ಕಟ್ಟಿದರು. ಹಣ ಮಾಡುವುದೊಂದೇ ಮುಖ್ಯವಲ್ಲ. ನಾವೆಲ್ಲ ಉತ್ತಮವಾಗಿ ಬದುಕಿದ್ದೇವೆ. ಮುಂದೆ ನಮ್ಮ ಮಕ್ಕಳ ಪೀಳಿಗೆಯೂ ಉತ್ತಮ ಸಮಾಜದಲ್ಲಿ ಬದುಕಬೇಕಿದೆ. ಈ ನಿಟ್ಟಿನಲ್ಲಿ ವಿಶ್ವೇಶ್ವರ ಭಟ್ಟರು ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಸಮಾಜವನ್ನು ಎಚ್ಚರಿಸಲು ಮುಂದಾಗಿದ್ದಾರೆ. ಬಂಧುತ್ವವನ್ನು ಉಳಿಸಿಕೊಂಡು ಹೋಗ ಬೇಕು ಎನ್ನುವ ಕಾಳಜಿ ವಹಿಸಿದ್ದಾರೆ ಎಂದರು.

'ಏನಾದರೂ ಆಗು, ನೀ ಬಯಸಿದಂತಾಗು
ಏನಾದರೂ ಆಗು, ನೀ ಇಚ್ಛಿಸಿದಂತಾಗು
ಏನಾದರೂ ಸರಿ ಮೊದಲು ಮಾನವನಾಗು'

ಎನ್ನುವ ಕವನ ಉಲ್ಲೇಖಿಸಿದ ಭೋಜೇಗೌಡ, ಮಾನವೀಯತೆಯ ಮೌಲ್ಯಗಳನ್ನು ಕಳೆದುಕೊಂಡಿದ್ದೇವೆ. ಅಕ್ಕ-ತಂಗಿಯರ ಸಂಬಂಧ ಕಳೆದುಕೊಂಡಿದ್ದೇವೆ. ಅಣ್ಣ- ತಮ್ಮಂದಿರ ಸಂಬಂಧ ಕಳೆದುಕೊಂಡಿದ್ದೇವೆ. ಗುರು-ಶಿಷ್ಯರ ಸಂಬಂಧ ಕಳೆದುಕೊಂಡಿದ್ದೇವೆ. ಸ್ನೇಹಿತರ ಸಂಬಂಧ ಕಳೆದುಕೊಂಡಿದ್ದೇವೆ. ಈ ಸಂಬಂಧ ಉಳಿಯಬೇಕು ಎಂದರೆ ವಿಶ್ವೇಶ್ವರ ಭಟ್ ನಡೆಸುತ್ತಿರುವ ಕಾರ್ಯಕ್ರಮ ನಿತ್ಯ ನಿರಂತರವಾಗಬೇಕು. ಇಂತಹ ಕೆಲಸ ಇನ್ನಷ್ಟು ಆಗಬೇಕು. ಜಿ.ಎಸ್. ಶಿವರುದ್ರಪ್ಪ ಒಂದು ಕಡೆ ಹೇಳುತ್ತಾರೆ,

**'ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ'**

ಅಂದರೆ ಎಲ್ಲ ಇದೆ ನಮ್ಮೊಳಗೆ. ನಾನು ಎಂಬ ಸ್ವಾರ್ಥದಿಂದ ಎಲ್ಲರೂ ದೂರವಾಗುತ್ತಾರೆ. ಇದೇ ಕಾರಣಕ್ಕೆ ವಿಶ್ವವಾಣಿಯ ಈ ಕಾರ್ಯಕ್ರಮ ಪ್ರಸ್ತುತವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಕುವೆಂಪು ಅವರ ಆಶಯದಂತೆ ವಿಶ್ವವಾಣಿ ಕಾರ್ಯ ನಿರ್ವಹಿಸುತ್ತಿದೆ. ಉತ್ತಮವಾದ ನಾಡನ್ನು ಕಟ್ಟಲು ಇಂತಹ ಕಾರ್ಯಕ್ರಮ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ವಿಶ್ವೇಶ್ವರ ಭಟ್ ಅವರದ್ದು ಅತ್ಯುತ್ತಮ ಲೇಖನಗಳು. ಅವರ ತಮ್ಮ ಬರಹಗಳ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ಮಾನವ ಜನ್ಮ ದೊಡ್ಡದು. ಹೀಗಾಗಿ ನಾವು ಏನಾದರೂ ಸಾಧನೆ ಮಾಡಬೇಕು. ಸಮಾಜಕ್ಕೆ ಒಳಿತು ಮಾಡಬೇಕು. ನಾವೆಲ್ಲ ನಮ್ಮ ಕಾರ್ಯ ಕ್ಷೇತ್ರದಲ್ಲಿ ಕಾಯ, ವಾಚ, ನಿಷ್ಠೆ, ಪ್ರಾಮಾಣಿಕತೆ ಯಿಂದ ಈ ನಾಡಿನ ದಾಸಾನುದಾಸರಾಗಿ ವಿಶ್ವೇಶ್ವರ ಭಟ್, ಜಗದೀಶ್ ಶೆಟ್ಟರ್, ಸುಕುಮಾರ್ ಶೆಟ್ಟಿ ಅವರಂತಹವರ ಜತೆ ಕೆಲಸ ಮಾಡಿದರೆ ಉತ್ತಮ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಅದಕ್ಕಾಗಿ ಭಿವಿಶ್ವವಾಣಿಭಿ ಕೆಲಸ ಇಂದು ಬಹಳ ಪ್ರಸ್ತುತ ಎನಿಸಿಕೊಂಡಿದೆ. ಅದು ನಿರಂತರವಾಗಿರಲಿ. ಪತ್ರಿಕೆ ಓದುವವರ ಸಂಖ್ಯೆ ಕೋವಿಡ್ ಬಳಿಕ ಸ್ವಲ್ಪ ಕಡಿಮೆಯಾಗಿದೆ. ಆದರೂ ಇಂದಿಗೂ ಓದುಗರಿದ್ದಾರೆ ಎಂದರೆ ಅದಕ್ಕೆ ಕಾರಣ ವಿಶ್ವೇಶ್ವರ ಭಟ್ ಅವರಂತಹ ಲೇಖಕರು. ಈಗಲೂ ಅವರ ಲೇಖನಗಳನ್ನು ಕಾದು ಓದುವವರಿದ್ದಾರೆ.

ಸಂಬಂಧ ಉಳಿಯದಿದ್ದರೆ ಸಮಾಜ ಕಟ್ಟಲು ಸಾಧ್ಯವಿಲ್ಲ. ಅಂತಹ ಸಂಬಂಧ ಉಳಿಯಲು ಇಂತಹ ಕಾರ್ಯಕ್ರಮ ನಡೆಯಲಿ. 'ವಿಶ್ವವಾಣಿ' ಕುಟುಂಬದ ಜತೆ ನಾನು ಯಾವತ್ತೂ ಇರುತ್ತೇನೆ. ಹಿಂದೆ ನನಗೆ ಸುಪ್ರೀಂ ಕೋರ್ಟ್‌ನ ಚೀಫ್ ಜಸ್ಟಿಸ್ ಜತೆ ಸನ್ಮಾನ ಮಾಡಿದ್ದರು. ಅದಕ್ಕಿಂತ ಹೆಚ್ಚಿನ ಸಂತೋಷ ಈ ಅವಾರ್ಡ್ ಸಿಕ್ಕಾಗ ನನಗೆ ಆಗಿದೆ ಎಂದರು.

ದಕ್ಷಿಣ ಆಫ್ರಿಕಾದ ಸಾಂಸ್ಕೃತಿಕ ಕಲೆ ಪ್ರದರ್ಶನವನ್ನು ಕೊಬಾನಿ ಗಾಡ್ಸ್ ವಿಲ್ ಮ್ಯಾಂಕೋಟ್ವಾ ಜತೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ವೀಕ್ಷಿಸಿದರು.

ಸಂಪಾದಕೀಯ

ಯುದ್ಧೋನ್ಮಾದದ ಸರಣಿ

ರಷ್ಯಾ ಮತ್ತು ಉಕ್ರೇನ್ ನಡುವೆ ಹೊತ್ತಿಕೊಂಡ ಸಂಘರ್ಷದ ಜ್ವಾಲೆ ಇನ್ನೂ ಆರಿಲ್ಲ. ಹಮಾಸ್ ಉಗ್ರರು ಮತ್ತು ಇಸ್ರೇಲ್ ನಡುವೆ ನಡೆದ ಹಣಾಹಣಿಯಿಂದಾಗಿ ಎಷ್ಟೆಲ್ಲಾ ಸ್ವತ್ತುನಷ್ಟ ಮತ್ತು ಜೀವನಷ್ಟಗಳಾದವು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಇದು ಸಾಲದೆಂಬಂತೆ ಈಗ ಇಸ್ರೇಲ್ ಮತ್ತು ಅಮೆರಿಕ ದೇಶಗಳು ಜಂಟಿಯಾಗಿ ಇರಾನಿನ ಮೇಲೆ ದಾಳಿ ನಡೆಸಿವೆ, 400ಕ್ಕೂ ಹೆಚ್ಚು ಕ್ಷಿಪಣಿಗಳ ಮಳೆಯೇ ಸುರಿದುಬಿಟ್ಟಿದೆ. ಈ ದಾಳಿಯ ಪರಿಣಾಮವಾಗಿ ಮಿನಾಬ್ ನಗರದ ಶಾಲೆಯೊಂದರಲ್ಲಿ ಅಧ್ಯಯನನಿರತರಾಗಿದ್ದ 36 ಮಂದಿ ವಿದ್ಯಾರ್ಥಿನಿಯರು ಅಸುನೀಗಿದ ಸುದ್ದಿ ಬಂದಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಮತ್ತು ಅಮೆರಿಕದ ಸೇನಾನೆಲೆಗಳ ಮೇಲೆ ಇರಾನ್ ಪ್ರತಿದಾಳಿ ನಡೆಸಿದೆ. ಮಾತ್ರವಲ್ಲದೆ ಸೌದಿ ಅರೇಬಿಯಾ, ಬಹ್ರೈನ್, ಜೋರ್ಡಾನ್, ಯುಎಇ, ಕುವೈತ್, ಕತಾರ್ ದೇಶಗಳ ಮೇಲೂ ಇರಾನ್ ಏಕಕಾಲದಲ್ಲಿ ದಾಳಿ ನಡೆಸಿದೆ. ಒಟ್ಟಿನಲ್ಲಿ, ಒಂದೆಡೆ ಪರಸ್ಪರ ಕಲೆತು ಸಮಾಧಾನಚಿತ್ತರಾಗಿ ಮಾತಾಡುವ, ತನ್ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಉಮೇದು ಯಾರಲ್ಲೂ, ಈ ಯಾವ ದೇಶದ ನಾಯಕರಲ್ಲೂ ಇದ್ದಂತಿಲ್ಲ. 'ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ, ನಿನ್ನ ಎರಡೂ ಕಣ್ಣುಗಳನ್ನು ಕಿತ್ತೆಸೆಯುವವರೆಗೆ ನನಗೆ ಸಮಾಧಾನವಿಲ್ಲ' ಎಂಬ ಉನ್ಮಾದವೇ ಇಂಥ ಸಂಘರ್ಷಗಳ ಸಹಭಾಗಿಗಳಲ್ಲಿ ಮಡುಗಟ್ಟಿದಂತಿದೆ. ಯುದ್ಧವೆಂಬುದು ಎಷ್ಟು ಭೀಕರವೋ, ಅದರ ತರುವಾಯದ ಪರಿಣಾಮವು ಅದಕ್ಕಿಂತಲೂ ಭೀಕರವಾಗಿರುತ್ತದೆ ಮತ್ತು ಅದರಿಂದ ಚೇತರಿಸಿಕೊಳ್ಳುವುದಕ್ಕೆ ದಶಕಗಳೇ ಹಿಡಿಯುತ್ತವೆ ಎಂಬುದಕ್ಕೆ ಜಪಾನ್‌ನಂಥ 'ಯುದ್ಧ ಸಂತ್ರಸ್ತ' ದೇಶವನ್ನು ಇತಿಹಾಸವು ಸಾಕ್ಷಿಯಾಗಿ ಮುಂದಿಟ್ಟಿದೆ; ಇಷ್ಟಾಗಿಯೂ ಜಗತ್ತಿನ ಕೆಲ ರಾಷ್ಟ್ರಗಳಿಗೆ ಇನ್ನಿಲ್ಲದ ಯುದ್ಧೋನ್ಮಾದ ಮತ್ತು ತನ್ಮೂಲಕ ಭೂರಾಜಕೀಯದ ಸಿಂಹಾಸನವನ್ನು ಬಿಗಿದಪ್ಪುವ ಭ್ರಮೆ. ಈ ಭ್ರಮೆಯ ಪೊರೆಯನ್ನು ಕಳಚಲು ಅದಿನ್ಯಾವ ಪ್ರವಾದಿ ಅವತರಿಸಬೇಕೋ ತಿಳಿಯುತ್ತಿಲ್ಲ...!

ಸೊಂಪಾದಕೀಯ

ಕೇಸೊಂದ ಹಾಕಲೇ?

ಕೋರ್ಟ್‌ನಲ್ಲಿ ಕೇಸು ಹಾಕೋದು ಅಂದ್ರೆ, ಮೊದಲೆಲ್ಲ, ಕಳ್ಳತನ, ಕೊಲೆ, ಅತ್ಯಾಚಾರ, ಹಣಕಾಸಿನ ಮೋಸ ಎಂಬ ಒಂದಷ್ಟು ಕಾರಣಗಳಿದ್ದವು. ಆದರೆ ಈಗೀಗ ಜನಕ್ಕೆ ಕೇಸು ಹಾಕೋದು ಅಂದ್ರೆ ನೀರು ಕುಡಿದಷ್ಟೇ ಸಲೀಸು. ಅದರಲ್ಲೂ ಈ ಗ್ರಾಹಕರ ವೇದಿಕೆ ಅಂತ ಬಂದಮೇಲೆ ಸಿಕ್ಕ ಸಿಕ್ಕ ಕಾರಣಗಳಿಗೆ ಕಾಮನ್ ಮ್ಯಾನ್‌ಗಳು ಕೇಸು ಹಾಕೋದು ಕಾಮನ್ ಆಗಿಹೋಗಿದೆ. ನಮ್ಮ ಭಾವನೆಗಳಿಗೆ ಧಕ್ಕೆ ಆಯ್ತು,

ನನಗೆ ಮಾನಸಿಕ ಹಿಂಸೆ ಆಯ್ತು ಅಂತ ಅದಕ್ಕೆ ನಾನಾ ಕಾರಣಗಳನ್ನು ನೀಡಿ ಕೇಸು ಹಾಕುವುದಲ್ಲದೆ ಅದಕ್ಕೆ ಲೆಕ್ಕವಿಲ್ಲದಷ್ಟು ಅಂದರೆ ಕೋಟ್ಯಂತರ ರುಪಾಯಿ ಹಣದ ಪರಿಹಾರ ಕೇಳೋದು ಸಾಮಾನ್ಯ ಆಗಿಬಿಟ್ಟಿದೆ. ಸುಮಾರು ಒಂದು ವರ್ಷದ ಹಿಂದೆ ನಡೆದ ಪ್ರಕರಣವೊಂದನ್ನು ಈ ನಿಟ್ಟಿನಲ್ಲಿ ಉಲ್ಲೇಖಿಸಬೇಕು. ಮ್ಯಾಕ್ ಡೊನಾಲ್ಡ್ ಕಂಪನಿಯ ಮೇಲೆ ಗ್ರಾಹಕನೊಬ್ಬ ಇಂಥದ್ದೇ ಕೇಸು ಹಾಕಿ ಹಣ ಎಣಿಸುವ ಹುನ್ನಾರ ಮಾಡಿದ್ದ; ಆದರೆ ಕೋರ್ಟು ಮಾತ್ರ ಆತನ ಈ ದುರಾಸೆಗೆ ತಣ್ಣೀರು ಎರಚಿತು ಎನ್ನಿ. ಈ ಮಹಾನುಭಾವ ಮ್ಯಾಕ್ ಡೊನಾಲ್ಡ್ ರೆಸ್ಟೋರೆಂಟ್‌ನಿಂದ ಫ್ರೆಂಚ್ ಫ್ರೈಸ್ ಆರ್ಡರ್ ಮಾಡಿದ್ದನಂತೆ. ಅದಕ್ಕೆ ತಕ್ಕ ಹಾಗೆ ಕಂಪನಿ ಆತನಿಗೆ ಫ್ರೆಂಚ್ ಫ್ರೈಗಳನ್ನೇ ಕಳಿಸಿತ್ತಂತೆ. ಅವುಗಳನ್ನು ತಿಂದು ತೇಗಿದ ಮೇಲೆ ಆತನಿಗೆ ಕಂಪನಿ ಕಳಿಸಿದ ಬಿಲ್‌ನತ್ತ ಕಣ್ಣು ಹರಿಯಿತು. ಅದರ ಮೇಲೆ ಮೊತ್ತ ಸರಿ ಇದ್ದರೂ ಅದರ ಪ್ರೈಸ್ ಪಟ್ಟಿಯಲ್ಲಿ ಮಾತ್ರ 'ಫ್ರೈಸ್' ಬದಲು ಚಿಕನ್ ಬರ್ಗರ್ ಎಂದು ನಮೂದಿಸಲಾಗಿತ್ತು. ಅದನ್ನು ನೋಡಿದ ಈ ಗ್ರಾಹಕನಿಗೆ ಕಣ್ಣು ಕುಕ್ಕಿ, ಫ್ರೆಂಚ್ ಫ್ರೈಸ್ ತಿಂದ ಮೇಲೂ ಬಾಯಲ್ಲಿ ನೀರು ಬಂತು ಅದಕ್ಕೆ ಕಾರಣ ಕಂಪನಿ ಮೇಲೆ ಕೇಸು ಹಾಕಬಹುದಲ್ಲ ಅಂತ. ಆತ ಅಲ್ಲಿನ ಮ್ಯಾನೇಜ್‌ಮೆಂಟ್ ಜತೆ ತಕರಾರು ತೆಗೆದ. ಆದ ಪ್ರಮಾದಕ್ಕೆ ಕ್ಷಮೆ ಕೇಳಿ 100 ರುಪಾಯಿಗಳ ಫ್ರೀ ಐಟಂ ಕೊಡಲು ರೆಸ್ಟೋರೆಂಟ್ ಆಫರ್ ಮಾಡಿತು. ಆದರೆ ಅಷ್ಟಕ್ಕೆ ಸಂತುಷ್ಟನಾಗದ ಈ ಗ್ರಾಹಕ ಕೋರ್ಟ್‌ನಲ್ಲಿ ಅವರ ಮೇಲೆ ಕೇಸು ಹಾಕಿ 2 ಕೋಟಿ ರುಪಾಯಿ ಪರಿಹಾರ ಕೇಳಿದನಂತೆ. ಪುಣ್ಯಕ್ಕೆ ಈ ಕೇಸು ಆಲಿಸಿದ ಜಡ್ಜ್, 'ಬಿಲ್‌ನಲ್ಲಿ ತಪ್ಪಾಗಿದೆ. ಆದರೆ, ಅವರೇನೂ ವೆಜ್ ಬದಲು ನಿಮಗೆ ನಾನ್ ವೆಜ್ ತಿನ್ನಿಸಿ ನಿಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡಿಲ್ಲ' ಅಂತ ಹೇಳಿ ಕೇಸನ್ನು ಕಸದ ಬುಟ್ಟಿಗೆ ಎಸೆಯುವ ಮೂಲಕ ಗ್ರಾಹಕನಿಗೆ ಬಿಸಿ ಮುಟ್ಟಿಸಿದರಂತೆ!

ಸಂಪಾದಕರ ಸದ್ಯಶೋಧನೆ

ಚಕಾರ ಮತ್ತು ಟೆಮರಿಂಡ್

ಕನ್ನಡದಲ್ಲಿ ಚಕಾರ ಎಂಬ ಪದವಿದೆ. ನಾವು ಅದನ್ನು ನಿತ್ಯಜೀವನದಲ್ಲಿ ಧಾರಾಳವಾಗಿ ಬಳಸುತ್ತೇವೆ. 'ಆತನಿಗೆ ಬಾಯಿಗೆ ಬಂದಂತೆ ಬೈದೆ. ಸುಮ್ಮನೆ ಇದ್ದ. ಚಕಾರ ಎತ್ತಲಿಲ್ಲ' ಎಂದು ಹೇಳುತ್ತೇವೆ. ಅಂದರೆ ಅಷ್ಟು ಬೈದರೂ ತಿರುಗಿ ಮಾತಾಡಲಿಲ್ಲ ಅಥವಾ ಒಂದು ಪದವನ್ನೂ ಹೇಳಲಿಲ್ಲ ಎಂಬುದು ತಾತ್ಪರ್ಯ. ಈ 'ಚಕಾರ' ಎಂಬ ಪದ ಹೇಗೆ ಬಂತು ಎಂದು ಪಾ.ವೆಂ.ಆಚಾರ್ಯರ 'ಪದಾರ್ಥ ಚಿಂತಾಮಣಿ' ಗ್ರಂಥದ ಪುಟಗಳನ್ನೂ ತಿರುವಿದೆ. ಆಚಾರ್ಯರು ಹೀಗೆ ಬರೆದಿದ್ದರು: ನಾವು ಸಾಮಾನ್ಯವಾಗಿ ಚಕಾರ ಶಬ್ದ ಎತ್ತಲಿಲ್ಲ ಅಥವಾ ಚಕಾರವೆತ್ತಲಿಲ್ಲ ಎನ್ನುತ್ತೇವೆ. ತನ್ನ ಮುಂದೆಯೇ ಚರ್ಚೆ ಎಷ್ಟು ನಡೆದರೂ ಅದು ತನ್ನನ್ನೇ ಕುರಿತಿದ್ದರೂ ಏನೊಂದೂ ಮಾತಾಡಲಿಲ್ಲ, ಉತ್ತರ ಕೊಡಲಿಲ್ಲ ಎನ್ನುವುದು ತಾತ್ಪರ್ಯ. ಈ ಮಾತಿನ ಮೂಲ ಕುತೂಹಲಕರವಾಗಿದೆ. ಸಂಸ್ಕೃತದಲ್ಲಿ 'ಚ' ಎಂಬೊಂದು ಅವ್ಯಯವಿದೆ. ಅದರ ಸಾಮಾನ್ಯ ಅರ್ಥ 'ಮತ್ತು' ಎಂದು. 'ಅಹಂ ಚ ತ್ವಂ ಚ' ಎಂದರೆ 'ನಾನು ಮತ್ತು ನೀನು'. ಆದರೆ ಅದನ್ನು ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾದ ಅರ್ಥಗಳಲ್ಲಿ, ಕೆಲವೊಮ್ಮೆ ಏನೂ ಅರ್ಥವಿಲ್ಲದೆ ಶ್ಲೋಕಗಳಲ್ಲಿ ಕಡಿಮೆ ಬಿದ್ದ ಮಾತ್ರೆಗಳನ್ನು ಭರ್ತಿ ಮಾಡುವುದಕ್ಕೂ ಧಾರಾಳವಾಗಿ ಪ್ರಯೋಗಿಸಿರುವುದು ಕಾಣಸುತ್ತದೆ. ಅದು ಪಡೆದ ಅನೇಕಾರ್ಥಗಳಲ್ಲಿ ಯಾರಾದರೊಬ್ಬರ ಹೇಳಿಕೆಯನ್ನು ಆಕ್ಷೇಪಿಸುವುದು ಅಥವಾ ತಿದ್ದುಪಡಿ ಮಾಡುವುದು ಕೂಡ ಸೇರಿದೆ. 'ಅಪಿ ಚ', 'ಕಿಂ ಚ' (ಆದರೆ, ಆದರೂ) ಇತ್ಯಾದಿಗಳನ್ನು ಉದಾಹರಿಸಬಹುದು. ಹೀಗೆ 'ಚಕಾರ' ಎಂದರೆ 'ಚ' ಎಂಬ ಅಕ್ಷರ ಎಂದೂ, ಸೌಮ್ಯ ವಿರೋಧ ಎಂದೂ ಅರ್ಥವಾಗುತ್ತದೆ. ಚಕಾರವೆತ್ತಲಿಲ್ಲ ಎಂದರೆ ಒಂದೇ ಅಕ್ಷರದಲ್ಲಿ ಕೂಡ ಅಲ್ಲಗಳೆಯಲಿಲ್ಲ. 'ಚಾಚೂ ತಪ್ಪದೇ ಎಲ್ಲವನ್ನೂ ಹೇಳಿಬಿಟ್ಟ' ಎನ್ನುವುದೂ ಸಂಸ್ಕೃತದ ಅಪಭ್ರಂಶವೆಂದೇ ತೋರುತ್ತದೆ. ಸಂಸ್ಕೃತದಲ್ಲಿ 'ಚ'ದ ಹಾಗೆ 'ತು' ಎಂಬ ಅವ್ಯಯವೂ ಇದೆ. ಅದಕ್ಕೆ ಸಾಮಾನ್ಯ ಅರ್ಥ 'ಅಂತೂ' (ಅಹಂತು = ನಾನಂತೂ) ಆದರೆ ವಿಶೇಷವಾಗಿ ಯಾವ ನಿಶ್ಚಿತಾರ್ಥವನ್ನೂ ದ್ಯೋತಿಸದೆ ಅಕ್ಷರ ಭರ್ತಿಗೂ ಅದನ್ನು ಬಳಸಿದ್ದು ಹೆಚ್ಚಾಗಿ ಪುರಾಣ ಸಾಹಿತ್ಯದಲ್ಲಿ ಕಾಣಸುತ್ತದೆ (ಹೀಗೆ ಬಳಸುವ ಇತರ ಅವ್ಯಯಗಳಲ್ಲಿ 'ವೈ' = ನಿಜಕ್ಕೂ, 'ಓ', 'ಹ' = ಅಂತೆ ಇವನ್ನೂ ಉಲ್ಲೇಖಿಸಬೇಕು). ಒಟ್ಟಿನಲ್ಲಿ ಚ, ವೈ, ತು, ಹಿ, ಹ ಇತ್ಯಾದಿ ಅವ್ಯಯಗಳು ಅರ್ಥವನ್ನು ವ್ಯತ್ಯಾಸಪಡಿಸುವುದಿಲ್ಲ. ಅವುಗಳಿಗೆ ಮಹತ್ವವಿಲ್ಲ. ಆದ್ದರಿಂದ 'ಚ-ತು ತಪ್ಪದೆ ಎಲ್ಲವನ್ನು ಹೇಳಿದ' ಎಂದರೆ ಮುಖ್ಯ ಅಮುಖ್ಯ ಎಣಿಸದೆ ಇದ್ದಕ್ಕಿದ್ದಂತೆ ಹೇಳಿದನೆಂದು ಅರ್ಥ. ಸಂಸ್ಕೃತದ 'ಚ-ತು' ಎಂಬವು ಸಾಮಾನ್ಯರ ಬಾಯಲ್ಲಿ 'ಚ-ಚು' ಮತ್ತು ಅನಂತರ 'ಚಾ-ಚೂ' ಆಗಿರಬೇಕು ಮತ್ತು ಮೂಲ ಮರೆತುಹೋಗಿರಬೇಕು. 'ಚರಖಾ ಚಲಾಚಲಾ ಕೇ ಲೇಂಗೇ ಸ್ವರಾಜ್ಯ ಲೇಂಗೇ' ಎಂದೋ ಚರಖಾದ ಸ್ಥಾನದಲ್ಲಿ ತಕಲಿ ಪದವನಿ ಹಾಡುತ್ತ ನಮ್ಮ ಸ್ವರಾಜ್ಯ ಚಳವಳಿಯಲ್ಲಿ ಪ್ರಭಾತ ಫೇರಿ ತೆಗೆಯುತ್ತಿದ್ದುದುಂಟು. ಈ ಚರಕಾ, ಚರಖಾ ಪದಗಳು ಮಾತ್ರ ಪಾರಸಿ ಭಾಷೆಯಿಂದ ತಂದವು. ಅವು ಸಂಸ್ಕೃತದ ಚಕ್ರ, ಗ್ರೀಕಿನ kuklos ಇತ್ಯಾದಿ ಆರ್ಯ ಭಾಷಾ ಶಬ್ದಗಳ ಸಂಬಂಧಿಯಾಗಿವೆಯೆಂಬುದು ನಿಜವಾದರೂ ನೂಲು ತೆಗೆಯುವ ರಾಟೆಯೆಂಬರ್ಥದಲ್ಲಿ ವಿದೇಶೀಯವೇ. 'ತಕಲಿ' (ನೂಲು ತೆಗೆಯುವ ಇನ್ನೊಂದು ಸಾಧನ) ಇದಾದರೆ ಶುದ್ಧ ಭಾರತೀಯ ಪದ. ತರ್ಕು ಎಂಬ ಸಂಸ್ಕೃತ ಪದಕ್ಕೆ ನೂಲು ತೆಗೆಯುವ ಸಾಧನ-ಕನ್ನಡದಲ್ಲಿ ಕದಿರು ಎಂದರ್ಥ. ಒಮ್ಮೆ ಆಚಾರ್ಯರಿಗೆ, 'ನಮ್ಮ ಹುಣಸೆಹಣ್ಣು ಇಂಗ್ಲಿಷಿನಲ್ಲಿ Tamarind ಹೇಗಾಯಿತು?' ಎಂದು ಕೇಳಿದರಂತೆ. ಅದಕ್ಕೆ ಅವರು ಕೊಟ್ಟ ಉತ್ತರ- ''ಹುಣಸೇಹಣ್ಣು ಈ ದೇಶದಿಂದಲೇ ಪಶ್ಚಿಮಕ್ಕೆ ಹೋದದ್ದು. ಒಯ್ದವರೂ ಅರಬರೇ. ಆದರೆ ಹುಣಸೇಹಣ್ಣು ನೋಡುವುದಕ್ಕೆ ಅವರ ದೇಶದ ಖರ್ಜೂರದ ಹಣ್ಣಿನ ಹಾಗೇ ಇದೆ. ಖರ್ಜೂರಕ್ಕೆ ಅರಬ್ಬಿ ಭಾಷೆಯಲ್ಲಿ 'ತರ್ಮ' ಎಂದು ಹೆಸರು. ಅವರು ಹುಣಸೇ ಹಣ್ಣನ್ನು ತರ್ಮಹಿಂದ್- ಹಿಂದುಸ್ತಾನದ ಖರ್ಜೂರ ಎಂದು ಕರೆದರು. ಅದು ಇಂಗ್ಲಿಷರ ಭಾಷೆಯಲ್ಲಿ ಟೆಮರಿಂಡ್ (tamarind) ಆಯಿತು''.

ಯಡಿಯೂರೋತ್ಸವಕ್ಕೆ 114ರ ಟಾರ್ಗೆಟ್

ದಶಕಗಳ ಕಾಲದ ಹೋರಾಟದಿಂದಾಗಿ ಕರ್ನಾಟಕದಲ್ಲಿ ಪಕ್ಷವು ಅಧಿಕಾರ ಹಿಡಿಯಲು ಕಾರಣರಾದ ಯಡಿಯೂರಪ್ಪ ಅವರ ಹೆಸರಿಗೆ ಈಗಲೂ ಪವರ್ ಇದೆ. ಹೀಗಾಗಿ ಅ ಹೆಸರಿನ ಪವರ್ ಬಳಸಿಕೊಳ್ಳಲು ಸಜ್ಜಾಗಿರುವ ಬಿಜೆಪಿ ನಾಯಕರು ಮೇ ತಿಂಗಳ ಹೊತ್ತಿಗೆ ಚಿತ್ರದುರ್ಗದಲ್ಲಿ 'ಯಡಿಯೂರೋತ್ಸವ' ನಡೆಸಲು ತೀರ್ಮಾನಿಸಿದ್ದಾರೆ.

ಮೂರ್ತಿಪೂಜೆ
ಅರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್‌ನ ಜತೆಗೂಡಿ ಅಧಿಕಾರ ಹಿಡಿಯುವುದು ಗ್ಯಾರಂಟಿ ಎಂಬ ಲೆಕ್ಕಾಚಾರದಲ್ಲಿರುವ ರಾಜ್ಯ ಬಿಜೆಪಿ ನಾಯಕರು ಇದೀಗ 114ರ ಟಾರ್ಗೆಟ್ ಮೇಲೆ ಕಣ್ಣಿಟ್ಟು 'ಯಡಿಯೂರೋತ್ಸವ'ಕ್ಕೆ ಸಜ್ಜಾಗುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜಕಾರಣಕ್ಕೆ ಬಂದು ಐವತ್ತು ವರ್ಷವಾಗಿರುವ ಹಿನ್ನೆಲೆಯಲ್ಲಿ ಇಂಥ ಉತ್ಸವ ನಡೆಸಲು ಸಜ್ಜಾಗಿರುವ ಬಿಜೆಪಿ ನಾಯಕರಿಗೆ ಈಗ ಇದ್ದಕ್ಕಿದ್ದಂತೆ ಒಗ್ಗಟ್ಟಿನ ಅನಿವಾರ್ಯತೆ ಕಾಣತೊಡಗಿದೆ.

ಕಳೆದ ವಿಧಾನಸಭಾ ಚುನಾವಣೆಯ ನಂತರ ಪ್ರತಿಪಕ್ಷದ ಸಾಲಿಗೆ ಬಂದು ಕುಳಿತರೂ ರಾಜ್ಯ ಬಿಜೆಪಿಯಲ್ಲಿ ಬಣ ಬಡಿದಾಟ ಎಂಬುದು ಕಾಯಂ ಆಗಿಯೇ ನಡೆದುಕೊಂಡು ಬಂತು. ಇಂಥ ಬಣ ಬಡಿದಾಟ ಜೀವಂತವಾಗಿರುವಾಗಲೇ ಬಿಜೆಪಿಯ ಬಹುತೇಕ ನಾಯಕರಿಗೆ ಒಗ್ಗಟ್ಟಿನ ಅನಿವಾರ್ಯತೆ ಅರ್ಥವಾಗತೊಡಗಿದೆ. ಕಾರಣ? ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಬಿಜೆಪಿಯ ಬಗ್ಗೆ ಅಷ್ಟು ಉತ್ಸುಕತೆ ತೋರುತ್ತಿಲ್ಲ. 'ಅಲ್ಲಿ ದಿನ ಬೆಳಗಾದರೆ ಪಕ್ಷಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನಿಳಿಸಿ ಅಂತಲೋ, ವಿಜಯೇಂದ್ರ ಅವರನ್ನು ಮುಂದುವರಿಸಿ ಅಂತಲೋ ಬೇಡಿಕೆ ಮುಂದಿಟ್ಟುಕೊಂಡು ಬರುತ್ತಿರುವ ನಾಯಕರು ಹೆಚ್ಚಿದ್ದಾರೆಯೇ ವಿನಾ, ಕರ್ನಾಟಕದಲ್ಲಿ ಅಡಳಿತಾರೂಢ ಕಾಂಗ್ರೆಸ್ ಅನ್ನು ದುರ್ಬಲಗೊಳಿಸುವ, ಮುಂಬರುವ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯುವ ಕಾರ್ಯತಂತ್ರಗಳೊಂದಿಗೆ ಬರುವವರೇ ಇಲ್ಲ' ಎಂಬುದು ನರೇಂದ್ರಮೋದಿ ಮತ್ತು ಅಮಿತ್ ಶಾ ಅವರ ಅಸಮಾಧಾನ. ಹೀಗಾಗಿ ರಾಜ್ಯ ಬಿಜೆಪಿಯಲ್ಲಿ ಏನೇ ಗೊಂದಲ ಕಾಣಿಸಿಕೊಂಡರೂ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್ ಅವರನ್ನು ಕರ್ನಾಟಕಕ್ಕೆ ಕಳಿಸುವ, ತೇಪೆ ಹಚ್ಚುವ ಕೆಲಸ ಮಾಡುತ್ತಿರುವ ಮೋದಿ-ಅಮಿತ್ ಶಾ ಜೋಡಿ ಕರ್ನಾಟಕದಲ್ಲಿ ಮರಳಿ ಅಧಿಕಾರ ಹಿಡಿಯುವ ವಿಷಯಕ್ಕೆ ಸಂಬಂಧಿಸಿದಂತೆ, ಜೆಡಿಎಸ್ ನಾಯಕ, ಕೇಂದ್ರದ ಉಕ್ಕು ಮತ್ತು ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಹೆಚ್ಚು ನಂಬಿಕೊಂಡಿದೆ.

ಅಂದ ಹಾಗೆ, ಬಿಜೆಪಿ ಜತೆಗಿನ ಮೈತ್ರಿ ವಿಷಯದಲ್ಲಿ ಲಾಯಲ್ಟಿ ತೋರಿಸುತ್ತಾ, ಕರ್ನಾಟಕದಲ್ಲಿ ಮರಳಿ ಅಧಿಕಾರ ಹಿಡಿಯಲು ಏನೇನು ಮಾಡಬಹುದು ಎಂಬುದನ್ನು ಬ್ಲೂ ಪ್ರಿಂಟ್ ಸಮೇತ ವಿವರಿಸುತ್ತಿರುವ ಕುಮಾರಸ್ವಾಮಿ ಅವರು, ಮುಂಬರುವ ಚುನಾವಣೆಯಲ್ಲಿ ಮಿತ್ರಕೂಟವು ನೂರೈವತ್ತಕ್ಕೂ ಹೆಚ್ಚು ಸ್ಥಾನಗಳನ್ನು ಹೇಗೆ ಗೆಲ್ಲಬಹುದು ಎಂಬುದನ್ನು ಅಂಕಿ-ಅಂಶಗಳ ಸಮೇತ ಮೋದಿ-ಅಮಿತ್ ಶಾ ಅವರಿಗೆ ವಿವರಿಸಿದ್ದಾರೆ. ಹೀಗೆ ಭವಿಷ್ಯದ ಗೆಲುವಿನ ಮೇಲೆ ಕಣ್ಣಿಟ್ಟು, ರೂಪಿಸಬೇಕಾದ ರಣತಂತ್ರಗಳ ಬಗ್ಗೆ ಮಾತ್ರ ಮಾತನಾಡುವ ಕುಮಾರಸ್ವಾಮಿ ಅವರು ಸಹಜವಾಗಿಯೇ ಮೋದಿ-ಅಮಿತ್ ಶಾ ಅವರಿಗೆ ಇಷ್ಟವಾಗಿದ್ದಾರೆ.

ಹೀಗೆ ದಿಲ್ಲಿ ಲೆವೆಲ್ಲಿನಲ್ಲಿ ಕುಮಾರಸ್ವಾಮಿ ಪವರ್ರು ಹೆಚ್ಚಿಸಿಕೊಳ್ಳುತ್ತಾ ನಡೆದಿರುವ ಕಾಲದಲ್ಲಿ ತಾವು ಮೈ ಮರೆತರೆ ಕಷ್ಟದ ಸ್ಥಿತಿ ಎದುರಾಗಬಹುದು ಎಂಬ ಆತಂಕದಲ್ಲಿರುವ ರಾಜ್ಯ ಬಿಜೆಪಿ ನಾಯಕರು, ಈಗ ಮೈ ಕೊಡವಿಕೊಂಡು ಏಳಲು ಸಜ್ಜಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಅವರಿಗೆ ಐಕಾನ್ ಆಗಿ ಕಾಣುತ್ತಿರುವುದು ಈ ಕಾರಣಕ್ಕಾಗಿ. ದಶಕಗಳ ಕಾಲದ ಹೋರಾಟದಿಂದಾಗಿ ಕರ್ನಾಟಕದಲ್ಲಿ ಪಕ್ಷವು ಅಧಿಕಾರ ಹಿಡಿಯಲು ಕಾರಣರಾದ ಯಡಿಯೂರಪ್ಪ ಅವರ ಹೆಸರಿಗೆ ಈಗಲೂ ಪವರ್ ಇದೆ. ಹೀಗಾಗಿ ಅ ಹೆಸರಿನ ಪವರ್ ಬಳಸಿಕೊಳ್ಳಲು ಸಜ್ಜಾಗಿರುವ ಬಿಜೆಪಿ ನಾಯಕರು ಮೇ ತಿಂಗಳ ಹೊತ್ತಿಗೆ ಚಿತ್ರದುರ್ಗದಲ್ಲಿ 'ಯಡಿಯೂರೋತ್ಸವ' ನಡೆಸಲು ತೀರ್ಮಾನಿಸಿದ್ದಾರೆ.

ಅಂದ ಹಾಗೆ, ಒಬ್ಬ ಜನನಾಯಕನ ಹೆಸರಿನಲ್ಲಿ ಉತ್ಸವ ನಡೆಸಿದರೆ ಎಷ್ಟು ಶಕ್ತಿ ಸಿಗುತ್ತದೆ ಎಂಬುದಕ್ಕೆ ಈ ಹಿಂದೆ

ದಾವಣಗೆರೆಯಲ್ಲಿ ನಡೆದ 'ಸಿದ್ದರಾಮೋತ್ಸವ'ವೇ ಸಾಕ್ಷಿ. ಅವತ್ತು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತಿದ್ದ ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಅವರ ಹೆಸರೇ ಟಾನಿಕ್ ಆಗಿ ಕಾಣಿಸಿತ್ತು. ಹೀಗಾಗಿ ಅವತ್ತು ಕಾಂಗ್ರೆಸ್ ಪಕ್ಷವು ದಾವಣಗೆರೆಯಲ್ಲಿ ನಡೆಸಿದ ಸಿದ್ದರಾಮೋತ್ಸವ 2023ರ ಚುನಾವಣೆಗೆ ಪೂರ್ವಭಾವಿ ತಯಾರಿಯಾಗಿದ್ದಲ್ಲದೆ, ಅದರ ಗೆಲುವಿಗೆ ರಹದಾರಿಯೂ ಆಯಿತು. ಇವತ್ತು ಬಿಜೆಪಿಯ ನಾಯಕರು ಒಗ್ಗೂಡಿ ಯಡಿಯೂರೋತ್ಸವ ನಡೆಸಲು ಕೈಗೊಂಡಿರುವ ತೀರ್ಮಾನಕ್ಕಿರುವುದೂ ಇದೇ ಲೆಕ್ಕಾಚಾರ.

ಎಲ್ಲಕ್ಕಿಂತ ಮುಖ್ಯವಾಗಿ ಬಿಜೆಪಿ-ಜೆಡಿಎಸ್ ಮಿತ್ರಕೂಟ ನೂರೈವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಕನಸಿಟ್ಟುಕೊಳ್ಳುವುದು ಬೇರೆ. ಆದರೆ ಇಂಥ ಗೆಲುವು ಸಾಧ್ಯವಾಗುವ ಕಾಲಕ್ಕೆ ಪಕ್ಷವು ಏಕಾಂಗಿಯಾಗಿ 114 ಕ್ಷೇತ್ರಗಳಲ್ಲಿ ಗೆಲ್ಲುವುದು ಅನಿವಾರ್ಯ ಎಂಬುದು ಇದರ ಹಿಂದಿರುವ ಮುಖ್ಯ ಉದ್ದೇಶ. ಹಾಗೊಂದು ವೇಳೆ ಮುಂದಿನ ಚುನಾವಣೆಯಲ್ಲಿ 114 ಎಂಬ ಮ್ಯಾಜಿಕ್ ನಂಬರಿಗೆ ತಲುಪದಿದ್ದರೆ ಯಥಾಪ್ರಕಾರ ಮಿತ್ರಪಕ್ಷದ ಕೈ ಮೇಲಾಗುತ್ತದೆ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರ. ಈಗಿರುವ ಮಾಹಿತಿಯ ಪ್ರಕಾರ, ಮೋದಿ-ಅಮಿತ್ ಶಾ ಜೋಡಿಯು ಮಿತ್ರಪಕ್ಷ ಜೆಡಿಎಸ್‌ಗೆ ಹೆಚ್ಚು ಆದ್ಯತೆ ನೀಡುವುದು ಗ್ಯಾರಂಟಿ. ಆದರೆ ಅದೇ ಕಾಲಕ್ಕೆ ರಾಜ್ಯ ಬಿಜೆಪಿಯ ಶಕ್ತಿ ಟಾಪ್ ಲೆವೆಲ್ಲಿನಲ್ಲಿದೆ ಎಂದು ತೋರಿಸುವುದು ಈ ನಾಯಕರ ಉದ್ದೇಶ. ಅದೇನೇ ಇದ್ದರೂ ಕಳೆದ 33 ತಿಂಗಳುಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿದ್ದ ರಾಜ್ಯ ಬಿಜೆಪಿಯ ಬಣ ಬಡಿದಾಟಕ್ಕೆ 'ಯಡಿಯೂರೋತ್ಸವ' ಬ್ರೇಕ್ ಹಾಕಿರುವುದು ಮಾತ್ರ ನಿಜ.

ಮೇಡಂ ಒಪ್ತಿಲ್ಲ ಅಂದ್ರಾ ಖರ್ಗೆ?

ಈ ಮಧ್ಯೆ 'ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಆಗುವುದೇ ಆದರೆ ಸಿದ್ದರಾಮಯ್ಯ ಅವರ ಜಾಗಕ್ಕೆ ನೀವೇ ಬನ್ನಿ' ಅಂತ ರಾಜ್ಯ ಕಾಂಗ್ರೆಸ್‌ನ ಕೆಲ ನಾಯಕರು ನೀಡಿದ ಸಂದೇಶಕ್ಕೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು 'ಅದು ಕಷ್ಟ' ಎಂದಿದ್ದಾರಂತೆ. ಅಂದ ಹಾಗೆ, ಮಲ್ಲಿಕಾರ್ಜುನ ಖರ್ಗೆಯವರಿಗೆ ಇಂಥ ಸಂದೇಶವನ್ನು ತಲುಪಿಸಿದವರು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಿದ್ದು ಬ್ರಿಗೇಡ್‌ನ ಕಮಾಂಡರ್ ಕೆ.ಎನ್.ರಾಜಣ್ಣ. ''ಸರ್, ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಇಳಿಸಬಾರದು. ಹಾಗೊಂದು ವೇಳೆ ಅವರನ್ನು ಕೆಳಗಿಳಿಸುವುದು ಹೈಕಮಾಂಡ್ ಆಯ್ಕೆಯಾದರೆ ಆ ಜಾಗಕ್ಕೆ ಡಿ.ಕೆ.ಶಿವಕುಮಾರ್ ಬರುವುದು ನಮಗೆ ಇಷ್ಟವಿಲ್ಲ. ಬದಲಿಗೆ ನೀವೇ ಕರ್ನಾಟಕದ ಮುಖ್ಯಮಂತ್ರಿ ಹುದ್ದೆಗೆ ಬನ್ನಿ. ನೀವು ಸಿಎಂ ಆದರೆ ನಾವು ಸಂತೋಷಪಡುತ್ತೇವೆ'' ಎಂದಿದ್ದಾರಂತೆ ಅವರು. ಆದರೆ ಸತೀಶ್ ಜಾರಕಿಹೊಳಿ ಮತ್ತು ರಾಜಣ್ಣ ಅವರಾಡಿದ ಮಾತನ್ನು ಕೇಳಿದ ಮಲ್ಲಿಕಾರ್ಜುನ ಖರ್ಗೆಯವರು, ''ನೋ, ನೋ, ಈ ಪ್ರಪೋಸಲ್ಲನ್ನು ಸೋನಿಯಾ ಮೇಡಂ ಅವರು ಒಪ್ಪುತ್ತಿಲ್ಲ'' ಎಂದರಂತೆ.

ಅಂದ ಹಾಗೆ, ಒಂದು ಬಾರಿ ಕರ್ನಾಟಕದ ಮುಖ್ಯಮಂತ್ರಿ ಹುದ್ದೆಗೇರುವ ಆಕಾಂಕ್ಷೆ ಮಲ್ಲಿಕಾರ್ಜುನ ಖರ್ಗೆ ಅವರಲ್ಲೂ ಇದೆ. ಆದರೆ ಅವರನ್ನು ಎಐಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಕರ್ನಾಟಕಕ್ಕೆ ಕಳಿಸುವ ಇಚ್ಛೆ ಸೋನಿಯಾ ಗಾಂಧಿ ಅವರಲ್ಲಿಲ್ಲ. ಕಾರಣ? ಮೊದಲನೆಯದಾಗಿ ದಲಿತ ನಾಯಕರೊಬ್ಬರನ್ನು ಅವಧಿಗೂ ಮುಂಚೆ ಎಐಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರೆ ದೇಶಕ್ಕೆ ರಾಂಗ್ ಮೆಸೇಜು ಹೋಗುತ್ತದೆ ಎಂಬುದು ಸೋನಿಯಾ ಗಾಂಧಿ ಅವರ ಆತಂಕ. ಅವರ ಈ ಆತಂಕಕ್ಕೆ ಮತ್ತೊಂದು ಟ್ವಿಸ್ಟೂ ಇದೆ. ಅದೆಂದರೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಳಗಿಳಿಸಿದ ಕೂಡಲೇ ಅವರ ಜಾಗಕ್ಕೆ ಪ್ರಿಯಾಂಕಾ ಗಾಂಧಿ ಅವರನ್ನು ತಂದು ಕೂರಿಸಬೇಕು ಎಂಬ ಕೂಗು ಶುರುವಾಗುತ್ತದೆ.

ವಾಸ್ತವವಾಗಿ ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮರುಚೈತನ್ಯ ನೀಡಲು ಗಾಂಧಿ ಕುಟುಂಬದವರೇ ಎಐಸಿಸಿ ಅಧ್ಯಕ್ಷರಾಗಬೇಕು ಎಂಬ ಕೂಗು ಹಲವು ಮೂಲಗಳಿಂದ ಕೇಳಿ ಬರುತ್ತಲೇ ಇದೆ. ಮತ್ತಿದೇ ಕಾರಣಕ್ಕಾಗಿ ಮಲ್ಲಿಕಾರ್ಜುನ ಖರ್ಗೆಯವರನ್ನು ಕರ್ನಾಟಕದ ರಾಜಕಾರಣಕ್ಕೆ ಕಳಿಸಿ ಮುಖ್ಯಮಂತ್ರಿ ಪಟ್ಟ ನೀಡಬೇಕು, ಆ ಮೂಲಕ ಏಕಕಾಲಕ್ಕೆ ಎರಡು ಗುರಿಗಳನ್ನು ಸಾಧಿಸಿಕೊಳ್ಳಬೇಕು ಎಂಬುದು ದಿಲ್ಲಿಯ ಹಲ ನಾಯಕರ ಅಭಿಪ್ರಾಯ. ಅವರ ಪ್ರಕಾರ, ಕರ್ನಾಟಕದಲ್ಲಿ ನಡೆಯುತ್ತಿರುವ ಕುರ್ಚಿ ಕಾಳಗಕ್ಕೆ ಸುಖಾಂತ್ಯ ಹಾಡಬೇಕು ಎಂದರೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಹುದ್ದೆಗೆ ತರಬೇಕು. ಹೀಗೆ ತಮ್ಮನ್ನಿಳಿಸಿ ಆ ಜಾಗಕ್ಕೆ ಮಲ್ಲಿಕಾರ್ಜುನ ಖರ್ಗೆಯವರನ್ನು ತಂದರೆ ಸಿದ್ದರಾಮಯ್ಯ ಅವರಾಗಲೀ, ಅವರ ಜತೆಗಿರುವವರಾಗಲೀ ತಕರಾರು ಮಾಡುವುದಿಲ್ಲ. ಇದೇ ರೀತಿ ಖರ್ಗೆಯವರು ಸಿಎಂ ಹುದ್ದೆಗೆ ಬಂದರೆ ಅವರ ನೇತೃತ್ವದ ಸರಕಾರವನ್ನು ದಿಲ್ಲಿಯ ಬಿಜೆಪಿ ನಾಯಕರೂ ಮುಟ್ಟುವುದಿಲ್ಲ. ರಾಜ್ಯ ಕಾಂಗ್ರೆಸ್‌ನಲ್ಲೂ ಭಿನ್ನರ ಪಡೆ ಮೇಲೇಳುವುದಿಲ್ಲ. ಇದು ಒಂದು ಗುರಿಯಾದರೆ ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕದ ರಾಜಕಾರಣಕ್ಕೆ ವಾಪಸಾದ ನಂತರ ಎಐಸಿಸಿ ಪಟ್ಟಕ್ಕೆ ಪ್ರಿಯಾಂಕಾ ಗಾಂಧಿ ಬಂದು ಕುಳಿತರೂ ದೇಶದ ದಲಿತ ಸಮುದಾಯಕ್ಕೆ ರಾಂಗ್ ಮೆಸೇಜು ಹೋಗುವುದಿಲ್ಲ ಎಂಬುದು ಎರಡನೆಯದು.

ಹಾಗಂತ ಇಂಥವರು ಹೇಳುತ್ತಿದ್ದರೂ ಸೋನಿಯಾ ಗಾಂಧಿ ಅವರಿಗೆ ಖರ್ಗೆ ಅವರು ಎಐಸಿಸಿ ಅಧ್ಯಕ್ಷ ಪಟ್ಟದಿಂದ ಕೆಳಗಿಳಿಯುವುದು ಬೇಕಿಲ್ಲ. ಯಾಕೆಂದರೆ ಈ ಪಟ್ಟದಿಂದ ಕೆಳಗೆ ಇಳಿಯುವ ಖರ್ಗೆಯವರೇನೋ ಕರ್ನಾಟಕಕ್ಕೆ ಹೋಗಬಹುದು. ಅದರೆ ಒಂದು ಕಡೆಯಿಂದ ದಲಿತರಿಗೆ ಹೋಗುವ ಸಂದೇಶ, ಮತ್ತೊಂದು ಕಡೆಯಿಂದ ಪುನಃ ತಮಗೆ ಅಂಟಿಕೊಳ್ಳುವ ವಂಶಪಾರಂಪರ್ಯ ರಾಜಕಾರಣದ ಹಣೆಪಟ್ಟಿ ಸೋನಿಯಾ ಗಾಂಧಿ ಅವರಿಗೆ ಬೇಕಿಲ್ಲ. ಇದೇ ಕಾರಣಕ್ಕಾಗಿ ಅವರು ಇಂಥ ಪ್ರಪೋಸಲ್ಲಿಗೆ ಒಪ್ಪಿಗೆ ಕೊಡುತ್ತಿಲ್ಲ. ಹೀಗಾಗಿ ಖರ್ಗೆಯವರ ಮುಂದೆ ಪ್ರಪೋಸಲ್ಲು ಇಟ್ಟು ಬಂದಿರುವ ಸತೀಶ್ ಜಾರಕಿಹೊಳಿ ಮತ್ತು ಕೆ.ಎನ್.ರಾಜಣ್ಣ ಈ ಕುರಿತು ಸಿದ್ದರಾಮಯ್ಯ ಅವರಿಗೆ ವಿವರಿಸಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ

ಫೀಲ್ಡಿಗೆ ಪರಂ, ಇಲ್ಲವೇ ಮಹದೇವಪ್ಪ?

ಅಂದ ಹಾಗೆ, ಸತೀಶ್ ಜಾರಕಿಹೊಳಿ ಮತ್ತು ಕೆಎನ್.ರಾಜಣ್ಣ ಅವರು ಕೊಟ್ಟ ಪ್ರಪೋಸಲ್ಲಿಗೆ ಮಲ್ಲಿಕಾರ್ಜುನ ಖರ್ಗೆ ಅಸಹಾಯಕತೆ ವ್ಯಕ್ತಪಡಿಸಿದ ನಂತರ ಮುಂದಿನ ದಿನಗಳ ಹೋರಾಟಕ್ಕೆ ಸಿದ್ದು ಬಣದ ನೇತೃತ್ವವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಲ್ಲವೇ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ವಹಿಸುವುದು ಬಹುತೇಕ ಖಚಿತವಾಗಿದೆ. ಯಥಾಪ್ರಕಾರ ಈ ನಾಯಕರು ಕೂಡಾ ಸಿದ್ದರಾಮಯ್ಯ ಅವರು ಸಿಎಂ ಹುದ್ದೆಯಿಂದ ಇಳಿಯಬಾರದು ಎಂದೇ ಪಟ್ಟು ಹಿಡಿಯುತ್ತಾರೆ. ಆದರೆ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ನಂತರ ಸನ್ನಿವೇಶ ಎಮರ್ಜ್ ಆದರೆ, ಸಿದ್ದರಾಮಯ್ಯ ಇಳಿಯುವ ಅನಿವಾರ್ಯತೆ ಸೃಷ್ಟಿಯಾದರೆ, ಪರಮೇಶ್ವರ್ ಅಥವಾ ಮಹದೇವಪ್ಪ ಪರ್ಯಾಯ ನಾಯಕತ್ವದ ರೇಸಿನಲ್ಲಿ ಕಾಣಿಸಿಕೊಳ್ಳುತ್ತಾರೆ.

ಈ ಪೈಕಿ ಪರಮೇಶ್ವರ್ ಅವರು ಉಪಮುಖ್ಯಮಂತ್ರಿಯಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಸಹಜವಾಗಿಯೇ ಅವರ ಹಿರಿತನ ಕೆಲಸ ಮಾಡುತ್ತದೆ. ಇನ್ನು ಮಹದೇವಪ್ಪ ಅವರು ಕಾಂಗ್ರೆಸ್ ಬಯಸುವ ಸಾಮಾಜಿಕ ನ್ಯಾಯದ ವಿಷಯದಲ್ಲಿ ಪವರ್‌ಫುಲ್ ಆಗಿರುವವರು. ಸಾಮಾಜಿಕ ನ್ಯಾಯದ ರಥವನ್ನು ಸಿದ್ದರಾಮಯ್ಯ ಅವರ ನಂತರ ಎಳೆಯಬಲ್ಲ ಸಮರ್ಥ ನಾಯಕ ಎಂಬ ಹಣೆಪಟ್ಟಿ ಅವರಿಗಿದೆ. ಅದರೆ ಇದೆಲ್ಲವೂ ನಿಕ್ಕಿಯಾಗಲು ಇನ್ನೂ ಕೆಲ ಕಾಲ ಬೇಕು.

ಫೈನಾನ್ಸು ಬಿಲ್ಲಿಗೆ ಡಿಕೆ ಗುದ್ದು?

ಅಂದ ಹಾಗೆ, ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆಶಿ ಪಾಳಯದಿಂದ ಕೇಳಿಬರುತ್ತಿರುವ ಸುದ್ದಿಗಳು ಇಂಟರೆಸ್ಟಿಂಗ್ ಅಗಿವೆ. ಸಿಎಂ ಪಾಳಯದ ಪ್ರಕಾರ, ಬಜೆಟ್ ಅಧಿವೇಶನ ಮುಗಿದ ತಕ್ಷಣ ಸಿದ್ದರಾಮಯ್ಯ ದಿಲ್ಲಿಗೆ ಧಾವಿಸಲಿದ್ದಾರಲ್ಲದೆ, 'ಒಂದೋ ಸಂಪುಟ ಪುನಾರಚನೆಗೆ ಅನುಮತಿ ಕೊಡಿ, ಇಲ್ಲವೇ ನಾನು ಕೆಳಗಿಳಿಯಲು ಬಿಡಿ' ಎಂದು ರಾಹುಲ್ ಗಾಂಧಿಯವರಿಗೆ ಹೇಳಲಿದ್ದಾರೆ. ಇನ್ನು ಡಿಕೆಶಿ ಪಾಳಯದ ಪ್ರಕಾರ, ಬಜೆಟ್ ಅಧಿವೇಶನ ಪೂರ್ಣಗೊಳ್ಳುವ ಮುನ್ನವೇ ತಮಗೆ ಖಚಿತ ಭರವಸೆ ದೊರೆಯದಿದ್ದರೆ, ಅಧಿವೇಶನದಲ್ಲಿ ಫೈನಾನ್ಸ್ ಬಿಲ್ಲು ಬಿದ್ದುಹೋಗುವಂತೆ, ಆ ಮೂಲಕ ಸರಕಾರ ಸಂಕಷ್ಟಕ್ಕೆ ಸಿಲುಕುವಂತೆ ಮಾಡಲು ಡಿಕೆಶಿ ರಣತಂತ್ರ ರೂಪಿಸಿದ್ದಾರೆ ಮತ್ತು ಇದಕ್ಕೆ ಪೂರಕವಾದ ಆಟ ಗೋವಾದಲ್ಲಿ ನಡೆಯಲಿದೆ.

ಕಾಂಗ್ರೆಸ್ ಪಕ್ಷವು ಬಿಜೆಪಿ-ವಿರೋಧಿಯೋ, ಭಾರತ-ವಿರೋಧಿಯೋ?

ಯಕ್ಷಪ್ರಶ್ನೆ
ಕಿರಣಕುಮಾರ ವಿವೇಕವಂಶಿ
vveditoped@gmail.com

ಯಾವುದೇ ಸಂಸದೀಯ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ, ಆಡಳಿತ ವ್ಯವಸ್ಥೆಯನ್ನು ಸರಿದಾರಿಯಲ್ಲಿ ನಡೆಸುವಲ್ಲಿ ವಿರೋಧ ಪಕ್ಷವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸರಕಾರವನ್ನು ಪ್ರಶ್ನಿಸುವುದು, ಟೀಕಿಸುವುದು ಮತ್ತು ಹೊಣೆಗಾರನನ್ನಾಗಿ ಮಾಡುವುದು ಅದರ ಸಾಂವಿಧಾನಿಕ ಕರ್ತವ್ಯವಾಗಿದೆ. ಆದಾಗ್ಯೂ, ವೇಗವಾಗಿ ಬದಲಾಗುತ್ತಿರುವ ಭಾರತೀಯ ರಾಜಕೀಯ ಚಿತ್ರಣದಲ್ಲಿ, ಒಂದು ಆಳವಾದ ಮತ್ತು ಗಂಭೀರವಾದ ಚರ್ಚೆ ಮುನ್ನೆಲೆಗೆ ಬಂದಿದೆ. ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಡುವಿನ ರಾಜಕೀಯ ಸಮರ ತೀವ್ರಗೊಳ್ಳುತ್ತಿರುವಾಗ, ನಾಗರಿಕರು ಮತ್ತು ರಾಜಕೀಯ ವಿಶ್ಲೇಷಕರು ಒಂದು ಮುಖ್ಯವಾದ ಸಂಗತಿಯನ್ನು ಉಲ್ಲೇಖಿಸುತ್ತಿದ್ದಾರೆ: ಬಿಜೆಪಿಯನ್ನು ವಿರೋಧಿ ಸುವ ಹತಾಶೆ ಮತ್ತು ನಿರಂತರ ಪ್ರಯತ್ನದಲ್ಲಿ, ಕಾಂಗ್ರೆಸ್ ಪಕ್ಷವು ಅರಿವಿಲ್ಲದೆಯೋ ಅಥವಾ ಉದ್ದೇಶಪೂರ್ವಕವಾ ಗಿಯೋ 'ಭಾರತ-ವಿರೋಧಿ' ಶಕ್ತಿಯಾಗಿ ಮಾರ್ಪಾಡಾಗುತ್ತಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಜಾಗತಿಕ ಮಟ್ಟದಲ್ಲಿ ದೇಶವನ್ನು ಮುಜುಗರಕ್ಕೀಡುಮಾಡುವ, ಸಶಸ್ತ್ರ ಪಡೆಗಳ ಸಮಗ್ರತೆಯನ್ನು ಪ್ರಶ್ನಿಸುವ ಮತ್ತು ಭಾರತದ ಭೌಗೋಳಿಕ-ರಾಜಕೀಯ ಶತ್ರುಗಳ ನಿರೂಪಣೆಗಳಿಗೆ ಬೆಂಬಲ ನೀಡುವ ಹಂತಕ್ಕೆ ತಲುಪಿದಾಗ, ಸರಕಾರದ ವಿರೋಧ ಮತ್ತು ದೇಶದ ವಿರೋಧದ ನಡುವಿನ ಗೆರೆ ಅತ್ಯಂತ ಅಪಾಯಕಾರಿಯಾಗಿ ಅಳಿಸಿಹೋಗುತ್ತದೆ. ಇತ್ತೀಚಿನ ಘಟನೆಗಳು, ನಿರ್ದಿಷ್ಟ ಹೇಳಿಕೆಗಳು ಮತ್ತು ಐತಿಹಾಸಿಕ ನಿದರ್ಶನಗಳನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷದ ಮೇಲೆ ದೇಶವಿರೋಧಿ ಎಂಬ ಆರೋಪಗಳು ಏಕೆ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಕೇಳಿಬರುತ್ತಿವೆ ಎಂಬುದು ಅರಿವಾಗುತ್ತದೆ. ಇದನ್ನು ಕೊಂಚ ವಿಶ್ಲೇಷಿಸೋಣ.

ಶೃಂಗಸಭೆ ಮತ್ತು ರಾಷ್ಟ್ರೀಯ ಮುಜುಗರ

ರಾಜಕೀಯದ ನಾಟಕೀಯತೆಗಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಂಗ್ರೆಸ್ ಪಕ್ಷ ಬಲಿಕೊಡುತ್ತಿದೆ ಎಂಬ ಆರೋಪಕ್ಕೆ ಇತ್ತೀಚೆಗೆ ನಡೆದ 'ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ 2026' ಒಂದು ಸ್ಪಷ್ಟ ಉದಾಹರಣೆಯಾಗಿದೆ. ನವದೆಹಲಿಯ 'ಭಾರತ್ ಮಂಟಪಂ'ನಲ್ಲಿ ಫೆಬ್ರವರಿ 16ರಿಂದ 21ರವರೆಗೆ ನಡೆದ ಈ ಶೃಂಗಸಭೆ ಭಾರತದ ಪಾಲಿಗೆ ಒಂದು ಐತಿಹಾಸಿಕ ಕ್ಷಣವಾಗಿತ್ತು. ಇದು ದಕ್ಷಿಣಾರ್ಧ ಗೋಳದಲ್ಲಿ ಆಯೋಜಿಸಲಾದ ಮೊದಲ ಪ್ರಮುಖ ಕೃತಕ ಬುದ್ಧಿಮತ್ತೆ (ಎಐ) ಶೃಂಗಸಭೆಯಾಗಿದ್ದು, ಜಾಗತಿಕ 'ಎಐ' ಕ್ಷೇತ್ರದಲ್ಲಿ ಭಾರತವನ್ನು ದೈತ್ಯ ಶಕ್ತಿಯನ್ನಾಗಿ ಬಿಂಬಿಸಲು ರಾಷ್ಟ್ರಗಳ ಮುಖ್ಯಸ್ಥರು, ಉನ್ನತ ಶ್ರೇಣಿಯ ಟೆಕ್ ಸಿಇಒಗಳು ಮತ್ತು ಜಾಗತಿಕ ನಾವೀನ್ಯಗಾರರನ್ನು ಒಂದೆಡೆ ಸೇರಿಸಿತ್ತು. ಆದರೆ, ಫೆಬ್ರವರಿ 20ರಂದು, ಭಾರತದ ಈ ಹೆಮ್ಮೆಯ ಕಾರ್ಯಕ್ರಮಕ್ಕೆ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಲಾಯಿತು. ಭಾರತೀಯ ಯುವ ಕಾಂಗ್ರೆಸ್‌ನ (IYC) ಸುಮಾರು ಹತ್ತು ಕಾರ್ಯಕರ್ತರು ಹೈ-ಸೆಕ್ಯುರಿಟಿ ವಲಯದೊಳಗೆ ನುಗ್ಗಿ, 'ಶರ್ಟ್ ತೆಗೆದು' ನಾಟಕೀಯ ಪ್ರತಿಭಟನೆ ನಡೆಸಿದರು. 'ಪ್ರಧಾನಿ ರಾಜಿ ಮಾಡಿಕೊಂಡಿದ್ದಾರೆ' ಎಂಬ ಘೋಷಣೆಯಿದ್ದ ಟಿ-ಶರ್ಟ್‌ಗಳನ್ನು ಪ್ರದರ್ಶಿಸುತ್ತಾ, ಅಂತಾರಾಷ್ಟ್ರೀಯ ಪ್ರತಿನಿಧಿಗಳ ಎದುರೇ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವರ್ತನೆಗೆ ತೀವ್ರ ಖಂಡನೆ ವ್ಯಕ್ತವಾಯಿತು. ದೇಶದ ರಾಜತಾಂತ್ರಿಕ ಮತ್ತು ಆರ್ಥಿಕ ವರ್ಚಸ್ಸಿಗೆ ಆಂತರಿಕ ರಾಜಕೀಯ ಹತಾಶೆಯಿಂದ ಹೇಗೆ ಧಕ್ಕೆ ತರಲಾಯಿತು ಎಂಬುದನ್ನು ಇದು ಎತ್ತಿತೋರಿಸಿತು. ತರುವಾಯದಲ್ಲಿ ಮೀರತ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು, ಈ ಕೃತ್ಯವನ್ನು ಕಟುವಾಗಿ ಖಂಡಿಸಿ ''ಇದು ಬೆತ್ತಲೆ ರಾಜಕಾರಣ'' (ನಂಗಿ ರಾಜನೀತಿ) ಎಂದು ಕರೆದು, ''ಇದು ಜಾಗತಿಕ ಕಾರ್ಯಕ್ರಮವೊಂದರ ಘನತೆಯನ್ನು ಕುಗ್ಗಿಸಿದ ಸೈದ್ಧಾಂತಿಕ ದಿವಾಳಿತನದ ಉದಾಹರಣೆ'' ಎಂದರು. ಅಲ್ಲದೆ, ಪ್ರತಿಭಟನಾಕಾರರನ್ನು ಕಸ್ಟಡಿಗೆ ಒಪ್ಪಿಸಿದ ದೆಹಲಿ ನ್ಯಾಯಾಲಯವು, ''ಇದು ಸಾರ್ವಜನಿಕ ಸುವ್ಯವಸ್ಥೆಯ ಮೇಲಿನ ದಾಳಿಯಾಗಿದ್ದು, ವಿದೇಶಿ ಗಣ್ಯರ ಮುಂದೆ ಗಣರಾಜ್ಯದ ರಾಜತಾಂತ್ರಿಕ ಚಿತ್ರಣಕ್ಕೆ ಧಕ್ಕೆ ತಂದಿದೆ'' ಎಂದು ತೀಕ್ಷ್ಣವಾದ ಹೇಳಿಕೆ ನೀಡಿತು. ವಿಮರ್ಶಕರ ಪ್ರಕಾರ, ಈ ಘಟನೆಯು 'ಭಾರತ-ವಿರೋಧಿ' ವಾದವನ್ನು ಸಂಪೂರ್ಣವಾಗಿ ಸಮರ್ಥಿಸುತ್ತದೆ. ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ಮತ್ತು ಆರ್ಥಿಕತೆಯನ್ನು ಉತ್ತೇಜಿಸಲು ಆಯೋಜಿಸಲಾದ ಕಾರ್ಯಕ್ರಮವನ್ನು ಅಡ್ಡಿಪಡಿಸುವುದು ಕೇವಲ ಬಿಜೆಪಿಯ ಮೇಲಿನ ದಾಳಿಯಲ್ಲ; ಅದು ಭಾರತೀಯರ ಆರ್ಥಿಕ ಭವಿಷ್ಯದ ಮೇಲಿನ ನೇರ ದಾಳಿಯಾಗಿದೆ. ಯುವಜನರ ಕೋಪವನ್ನು ವ್ಯಕ್ತಪಡಿಸಲು ಇದು ಅನಿವಾರ್ಯವಾಗಿತ್ತು ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್‌ರಿಂದ ಹೇಳಿಕೆ ನೀಡಿಸುವ ಮೂಲಕ ಕಾಂಗ್ರೆಸ್ ಇದನ್ನು ಸಮರ್ಥಿಸಿಕೊಂಡಿತು. ಆದಾಗ್ಯೂ, ಸಾರ್ವಜನಿಕರ ದೃಷ್ಟಿಯಲ್ಲಿ, ದೇಶವನ್ನು ಅವಮಾನಿಸಲು ಅಂತಾರಾಷ್ಟ್ರೀಯ ವೇದಿಕೆಯನ್ನು ಆರಿಸಿಕೊಂಡಿದ್ದು ರಾಷ್ಟ್ರೀಯ ಹೆಮ್ಮೆಯ ಮೇಲಿನ ದುರಂತಕಾರಿ ದ್ರೋಹವೆಂದು ಪರಿಗಣಿಸಲ್ಪಟ್ಟಿದೆ.

ರಾಷ್ಟ್ರೀಯ ಭದ್ರತೆಯನ್ನು ನಿಭಾಯಿಸುವಿಕೆ

ಕಾಂಗ್ರೆಸ್ ಪಕ್ಷದ ಕುರಿತಾದ ತೀವ್ರವಾದ ಟೀಕೆಗೆ ಕಾರಣವಾಗಿರುವುದು, ಅದು ರಾಷ್ಟ್ರೀಯ ಭದ್ರತೆಯನ್ನು ನಿಭಾಯಿಸುವ ರೀತಿ. ಐತಿಹಾಸಿಕವಾಗಿ, ರಕ್ಷಣಾ ವಿಷಯಗಳನ್ನು ಪಕ್ಷಾತೀತ ಗೌರವದಿಂದ ನೋಡಲಾಗುತ್ತಿತ್ತು. ಆದರೆ ಇಂದು ಆ ಸಂಪ್ರದಾಯ ಮರೆಯಾಗಿದೆ. ಭಾರತೀಯ ಸಶಸ್ತ್ರ ಪಡೆಗಳ ಕಾರ್ಯಾಚರಣೆಗಳ ಯಶಸ್ಸಿನ ಬಗ್ಗೆ ನಿರಂತರವಾಗಿ ಸಾಕ್ಷಿ ಕೇಳುವ ಮತ್ತು ಅನುಮಾನ ವ್ಯಕ್ತಪಡಿಸುವ ಚಾಳಿಯನ್ನು ಕಾಂಗ್ರೆಸ್ ಬೆಳೆಸಿಕೊಂಡಿದೆ. ಇದು ಸೇನೆಯ ನೈತಿಕ ಸ್ಥೈರ್ಯವನ್ನು ತೀವ್ರವಾಗಿ ಕುಗ್ಗಿಸುತ್ತದೆ ಮತ್ತು ಶತ್ರು ರಾಷ್ಟ್ರಗಳಿಗೆ ಕುಮ್ಮಕ್ಕು ನೀಡುತ್ತದೆ ಎಂದು ವಿಮರ್ಶಕರು ವಾದಿಸುತ್ತಾರೆ.

ಈ ಪ್ರವೃತ್ತಿಯು 2016ರ ಸರ್ಜಿಕಲ್ ಸ್ಟ್ರೈಕ್ ಮತ್ತು 2019ರ ಬಾಲಾಕೋಟ್ ಏರ್‌ಸ್ಟ್ರೈಕ್ ಕುರಿತಾದ ಅನುಮಾನಗಳಿಂದ ಪ್ರಾರಂಭವಾಯಿತು; ಅಲ್ಲಿ ಪ್ರಮುಖ ಕಾಂಗ್ರೆಸ್ ನಾಯಕರು ಸಾವು-ನೋವುಗಳ ಅಂಕಿ-ಅಂಶಗಳು ಮತ್ತು ಸಾಕ್ಷ್ಯಗಳನ್ನು ನೀಡುವಂತೆ ಒತ್ತಾಯಿಸಿದರು. ಇದು ಪರೋಕ್ಷವಾಗಿ ಪಾಕಿಸ್ತಾನದ ಸೇನಾ ವ್ಯವಸ್ಥೆಯ ವಾದಗಳನ್ನು ಪ್ರತಿಧ್ವನಿಸಿದಂತಿತ್ತು. ರಫೇಲ್ ಯುದ್ಧ ವಿಮಾನ ಒಪ್ಪಂದದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸುವ ಮೂಲಕ ಭಾರತೀಯ ವಾಯುಪಡೆಯ ಆಧುನೀಕರಣವನ್ನು ಹಳಿತಪ್ಪಿಸಲು ಪಕ್ಷವು ವರ್ಷಗಟ್ಟಲೆ ಪ್ರಯತ್ನಿಸಿತು. ಒಪ್ಪಂದದ ತನಿಖೆ ಕೋರಿ ಸಲ್ಲಿಸಲಾಗಿದ್ದ ಎಲ್ಲಾ ಅರ್ಜಿಗಳನ್ನು ಭಾರತದ ಸುಪ್ರೀಂ ಕೋರ್ಟ್ ವಜಾಗೊಳಿಸಿದ ಮೇಲೂ, ಕಾಂಗ್ರೆಸ್ ತನ್ನ ಅಭಿಯಾನವನ್ನು ಮುಂದುವರಿಸಿ ರಕ್ಷಣಾ ಖರೀದಿಯಲ್ಲಿ ಅನಗತ್ಯ ಘರ್ಷಣೆಯನ್ನು ಸೃಷ್ಟಿಸಿತು.

ಈ ಅನುಮಾನವು ಐತಿಹಾಸಿಕ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯ ಸಂದರ್ಭದಲ್ಲಿ ನಿರ್ಣಾಯಕ ಘಟ್ಟವನ್ನು ತಲುಪಿತು. 2025ರ ಏಪ್ರಿಲ್ 22ರಂದು, ಪಾಕಿಸ್ತಾನ ಬೆಂಬಲಿತ ಉಗ್ರರು ಪಹಲ್ಗಾಮ್‌ನಲ್ಲಿ ನಡೆಸಿದ ಭೀಕರ ದಾಳಿಯಲ್ಲಿ 26 ಮುಗ್ಧ ಪ್ರವಾಸಿಗರು ಬಲಿಯಾದ ನಂತರ, ಭಾರತವು ಮೇ 7ರ ರಾತ್ರಿ ಆಪರೇಷನ್ ಸಿಂದೂರ್ ಕಾರ್ಯಾಚರಣೆಯನ್ನು ಆರಂಭಿಸಿತು. ಈ ನಿಖರವಾದ ಮತ್ತು ಬಹು-ಆಯಾಮದ ಸೇನಾ ಕಾರ್ಯಾಚರಣೆಯು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದೊಳಗಿದ್ದ ಉಗ್ರರ ಒಂಬತ್ತು ಪ್ರಮುಖ ನೆಲೆಗಳನ್ನು ಯಶಸ್ವಿಯಾಗಿ ನಾಶಪಡಿಸಿತು. ಭಾರತೀಯ ವಾಯುಪಡೆಯು ಸಂಪೂರ್ಣ ಮೇಲುಗೈ ಸಾಧಿಸಿದ ಪರಿಣಾಮವಾಗಿ, ಪಾಕಿಸ್ತಾನವು ಮೇ 10ರೊಳಗೆ ಕದನ ವಿರಾಮಕ್ಕೆ ಬೇಡಿಕೆ ಇಡುವಂತಾಯಿತು. ಅಮೆರಿಕದ ಇಂಡೋ-ಪೆಸಿಫಿಕ್ ಕಮಾಂಡ್ ಸೇರಿದಂತೆ ಇಡೀ ವಿಶ್ವವೇ ಭಾರತದ ಈ ಸೇನಾ ಕಾರ್ಯಾಚರಣೆ ಮತ್ತು ಕಾರ್ಯತಂತ್ರದ ಸಂಯಮವನ್ನು ಕೊಂಡಾಡಿದರೆ, ದೇಶದೊಳಗಿನ ರಾಜಕೀಯ ವಾತಾವರಣ ಮಾತ್ರ ಭಿನ್ನವಾಗಿತ್ತು. ನಾಲ್ಕು ದಿನಗಳ ಯುದ್ಧದಂಥ ಪರಿಸ್ಥಿತಿಯಲ್ಲಿ ಒಗ್ಗಟ್ಟು ಪ್ರದರ್ಶಿಸುವ ಬದಲು, ವಿರೋಧ ಪಕ್ಷಗಳು ಸರಕಾರದ ರಾಜತಾಂತ್ರಿಕ ನಿಲುವುಗಳು ಮತ್ತು ಕದನ ವಿರಾಮ ನಿರ್ವಹಣೆಯನ್ನು ನಿರಂತರವಾಗಿ ಪ್ರಶ್ನಿಸಿದವು. ರಾಜಕೀಯ ಪಕ್ಷವೊಂದು ಸ್ವಂತ ಸೇನೆಯ ದಿಗ್ವಿಜಯಗಳನ್ನು ಸದಾ ಅನುಮಾನದ ಕಣ್ಣಿನಿಂದ ನೋಡಿದಾಗ, ಅದು ಅನಿವಾರ್ಯವಾಗಿ 'ರಾಷ್ಟ್ರದ ಸಾರ್ವಭೌಮ ಹಿತಾಸಕ್ತಿಗಳ ವಿರುದ್ಧ ಕೆಲಸ ಮಾಡುತ್ತಿದೆ' ಎಂಬ ಹಣೆಪಟ್ಟಿಯನ್ನು ಆಹ್ವಾನಿಸುತ್ತದೆ. 'ನಮ್ಮ ಸೇನೆಯನ್ನು ನಾವೇ ನಂಬದಿದ್ದರೆ, ಬೇರೆ ಯಾರು ನಂಬುತ್ತಾರೆ?' ಎಂದು ನಾಗರಿಕರು ನ್ಯಾಯಯುತವಾಗಿ ಪ್ರಶ್ನಿಸುತ್ತಿದ್ದಾರೆ.

ಆಂತರಿಕ ರಾಜಕಾರಣದ ರಫ್ತು

'ಭಾರತ ವಿರೋಧಿ' ವಾದಕ್ಕೆ ಬೆಂಬಲ ನೀಡುವ ಮತ್ತೊಂದು ಪ್ರಮುಖ ಅಂಶವೆಂದರೆ ವಿದೇಶಿ ನೆಲದಲ್ಲಿ ಕಾಂಗ್ರೆಸ್ ನಾಯಕರ ನಡವಳಿಕೆ. ದೇಶದ ಆಂತರಿಕ ರಾಜಕೀಯ ಭಿನ್ನಾಭಿಪ್ರಾಯಗಳು ರಾಷ್ಟ್ರದ ಗಡಿಯೊಳಗೇ ಕೊನೆಗೊಳ್ಳಬೇಕು ಎಂಬುದು ರಾಜತಾಂತ್ರಿಕತೆಯ ಮೂಲಭೂತ ನಿಯಮ. ಜಾಗತಿಕ ಸಮುದಾಯದೊಂದಿಗೆ ಸಂವಹನ ನಡೆಸುವಾಗ, ನಾಯಕರು ರಾಷ್ಟ್ರೀಯ ಐಕ್ಯತೆಯನ್ನು ಪ್ರದರ್ಶಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಆದರೆ, ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ಅಂತಾರಾಷ್ಟ್ರೀಯ ವೇದಿಕೆಗಳನ್ನು ಬಳಸಿಕೊಂಡು ಭಾರತದ ಬಗ್ಗೆ ಪದೇ ಪದೆ ಅತ್ಯಂತ ನಿರಾಶಾವಾದಿ ಮತ್ತು ರಾಜಿಯಾದ ಚಿತ್ರಣವನ್ನು ನೀಡುತ್ತಿದ್ದಾರೆ. ಯುನೈಟೆಡ್ ಕಿಂಗ್‌ಡಮ್‌ಗೆ (ಕೇಂಬ್ರಿಜ್ ವಿಶ್ವವಿದ್ಯಾಲಯ, ಮಾರ್ಚ್ 2023) ಮತ್ತು ಅಮೆರಿಕಕ್ಕೆ (2023 ಮತ್ತು 2024ರಲ್ಲಿ) ಭೇಟಿ ನೀಡಿದಾಗ, ''ಭಾರತೀಯ ಪ್ರಜಾಪ್ರಭುತ್ವದ ಮೇಲೆ ದಾಳಿಯಾಗುತ್ತಿದೆ'' ಮತ್ತು ''ಚುನಾವಣಾ ಆಯೋಗ ಹಾಗೂ ನ್ಯಾಯಾಂಗದಂಥ ಸಾಂವಿಧಾನಿಕ ಸಂಸ್ಥೆಗಳನ್ನು ಹೈಜಾಕ್ ಮಾಡಲಾಗಿದೆ'' ಎಂದು ಅವರು ಹೇಳಿಕೆ ನೀಡಿದ್ದಾರೆ. ವಿಮರ್ಶಕರ ಪ್ರಕಾರ, ಇವು ಕೇವಲ ರಾಜಕೀಯ ಟೀಕೆಗಳಲ್ಲ; ಇವು ಭಾರತದ ಸಾರ್ವಭೌಮ ಸ್ಥಾನಮಾನವನ್ನು ಸಕ್ರಿಯವಾಗಿ ಕುಗ್ಗಿಸುವ ಹೇಳಿಕೆಗಳಾಗಿವೆ. ವಿದೇಶಿ ನಾಯಕರು ಮತ್ತು ಜಾಗತಿಕ ಮಾಧ್ಯಮಗಳ ಮುಂದೆ ಭಾರತವನ್ನು ವಿಫಲ ಪ್ರಜಾಪ್ರಭುತ್ವ ರಾಷ್ಟ್ರವೆಂದು ಬಿಂಬಿಸುವ ಮೂಲಕ, ಭಾರತದ ಆಂತರಿಕ ವಿಚಾರಗಳಲ್ಲಿ ಕಾಂಗ್ರೆಸ್ ನಾಯಕತ್ವವು ವಿದೇಶಿ ಹಸ್ತಕ್ಷೇಪವನ್ನು ಆಹ್ವಾನಿಸುತ್ತಿದೆ ಎಂದು ಪರಿಗಣಿಸಲಾಗಿದೆ. ಈ ವಿಧಾನವು ವಿದೇಶದಲ್ಲಿರುವ 'ಭಾರತ ವಿರೋಧಿ' ಲಾಬಿ ಗುಂಪುಗಳ ನಿರೂಪಣೆಗಳನ್ನು ಮೌಲ್ಯೀಕರಿಸುತ್ತದೆ. ದೇಶವನ್ನು ನಿಜವಾಗಿಯೂ ಪ್ರೀತಿಸುವವರು ತಾಯ್ನಾಡಿನಲ್ಲಿ ಅಧಿಕಾರವಿಲ್ಲ ಎಂಬ ಕಾರಣಕ್ಕಾಗಿ ಪ್ರಪಂಚದಾದ್ಯಂತ ತಿರುಗಿ ದೇಶದ ಪ್ರತಿಷ್ಠೆಯನ್ನು ಹಾಳುಮಾಡುವುದಿಲ್ಲ ಎಂದು ಹೇಳುವ ಮೂಲಕ ಬಿಜೆಪಿ ಇದನ್ನು ಬಲವಾಗಿ ಎದುರಿಸಿದೆ.

'ಮೃದು ಧೋರಣೆ'ಯ ಪರಂಪರೆ

ಇಂದು ಕಾಂಗ್ರೆಸ್ ಮೇಲಿರುವ ಆಕ್ರೋಶವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು, ಆಂತರಿಕ ಭದ್ರತೆಯ ಕುರಿತು ಆ ಪಕ್ಷ ಹೊಂದಿರುವ ಐತಿಹಾಸಿಕ ಹಿನ್ನೆಲೆಯನ್ನು ನೋಡಬೇಕು. ಕಾಂಗ್ರೆಸ್ 'ಭಾರತ ವಿರೋಧಿ' ಎಂಬ ಆರೋಪವು ಯುನೈಟೆಡ್ ಪ್ರೋಗ್ರೆಸಿವ್ ಅಲಯನ್ಸ್ (ಯುಪಿಎ) ಆಡಳಿತಾವಧಿಯ (2004-2014) ನೆನಪುಗಳಿಂದ ಪ್ರೇರೇಪಿಸಲ್ಪಟ್ಟಿದೆ. ಈ ಅವಧಿಯನ್ನು ವಿಮರ್ಶಕರು ಭಯೋತ್ಪಾದನೆ ಮತ್ತು ಸಂಘಟಿತ ಅಪರಾಧಗಳೆದುರು ತೀವ್ರ ದುರ್ಬಲವಾಗಿದ್ದ ಕಾಲ ಎಂದು ವ್ಯಾಖ್ಯಾನಿಸುತ್ತಾರೆ. ರಾಷ್ಟ್ರೀಯ ಭದ್ರತೆಯನ್ನು ಪಣಕ್ಕಿಟ್ಟು ವೋಟ್ ಬ್ಯಾಂಕ್ ರಾಜಕಾರಣ ಮಾಡಿದ ಆರೋಪ ಕಾಂಗ್ರೆಸ್ ಮೇಲಿದೆ. 2009ರ ಕುಖ್ಯಾತ 'ಶರ್ಮ್-ಎಲ್-ಶೇಖ್' ಜಂಟಿ ಹೇಳಿಕೆಯಂಥ ಪಕ್ಷದ ಐತಿಹಾಸಿಕ 'ಪಾಕಿಸ್ತಾನ-ಪರ' ರಾಜತಾಂತ್ರಿಕ ಪ್ರಮಾದಗಳನ್ನು ವಿಮರ್ಶಕರು ಎತ್ತಿತೋರಿಸುತ್ತಾರೆ, ಇದು ದ್ವಿಪಕ್ಷೀಯ ಚರ್ಚೆಗಳಿಗೆ ಬಲೂಚಿಸ್ತಾನವನ್ನು ವಿವಾದಾತ್ಮಕವಾಗಿ ತರುವ ಮೂಲಕ ಪಾಕಿಸ್ತಾನಕ್ಕೆ ಭಾರತದ ವಿರುದ್ಧ ಅನಗತ್ಯ ರಾಜತಾಂತ್ರಿಕ ಅಸ್ತ್ರವನ್ನು ನೀಡಿತು.

ಇದಲ್ಲದೆ, ದಾವೂದ್ ಇಬ್ರಾಹಿಂ ಜಾಲದಂಥ ಸಂಘಟಿತ ಅಪರಾಧ ಸಿಂಡಿಕೇಟ್‌ಗಳನ್ನು ವ್ಯವಸ್ಥಿತವಾಗಿ ನಾಶಪಡಿಸುವಲ್ಲಿನ ವೈಫಲ್ಯಕ್ಕಾಗಿ ಯುಪಿಎ ಯುಗವು ತೀವ್ರವಾಗಿ ಟೀಕಿಸಲ್ಪಟ್ಟಿದೆ. 2000ದ ದಶಕದಲ್ಲಿ, ಈ ಸಿಂಡಿಕೇಟ್ ಪಾಕಿಸ್ತಾನದ ಐಎಸ್‌ಐ ನ ಆಸ್ತಿಯಾಗಿ ಕಾರ್ಯನಿರ್ವಹಿಸಿ, ನಕಲಿ ಭಾರತೀಯ ಕರೆನ್ಸಿ ನೋಟುಗಳಿಂದ ಭಾರತೀಯ ಆರ್ಥಿಕತೆಯನ್ನು ತುಂಬಿ ಉಗ್ರಗಾಮಿ ಘಟಕಗಳಿಗೆ ಧನಸಹಾಯ ಮಾಡಿತು. 2004ರಲ್ಲಿ ಯುಪಿಎ ಸರಕಾರವು ಭಯೋತ್ಪಾದನೆ ತಡೆ ಕಾಯ್ದೆಯನ್ನು (POTA) ರದ್ದುಗೊಳಿಸಿದ್ದು ಭಯೋತ್ಪಾದಕ ಶಕ್ತಿಗಳಿಗೆ ಬೃಹತ್ ಶರಣಾಗತಿ ಎಂದು ಪರಿಗಣಿಸಲಾಗಿದೆ. 26/11ರ ನಂತರ ರಾಷ್ಟ್ರೀಯ ತನಿಖಾ ದಳವನ್ನು (ಎನ್‌ಐಎ) ರಚಿಸಿದ್ದಾಗಿ ಹೇಳುವ ಮೂಲಕ ಕಾಂಗ್ರೆಸ್ ತನ್ನ ದಾಖಲೆಯನ್ನು ಸಮರ್ಥಿಸಿಕೊಂಡರೂ, ಆ ಕಾಲಘಟ್ಟದ ಸಾರ್ವಜನಿಕ ಸ್ಮರಣೆಯು ನಾಗರಿಕರ ಸುರಕ್ಷತೆಗಿಂತ ರಾಜಕೀಯ ಒಪ್ಪಿಗೆಗೆ ಆದ್ಯತೆ ನೀಡಿದ ಮತ್ತು ಭಯೋತ್ಪಾದನೆಗೆ ನಿರಂತರವಾಗಿ ಮೃದುವಾಗಿದ್ದ ಸರಕಾರದ ಚಿತ್ರಣವಾಗಿದೆ.

ದಾರಿ ತಪ್ಪಿದ ವಿರೋಧದ ಅಪಾಯ:

ಸದೃಢವಾದ ವಿರೋಧ ಪಕ್ಷವಿಲ್ಲದೆ ಪ್ರಜಾಪ್ರಭುತ್ವವು ಉಳಿಯಲು ಸಾಧ್ಯವಿಲ್ಲ. ಬಿಜೆಪಿಯ ಆರ್ಥಿಕ ನೀತಿಗಳನ್ನು ಪ್ರಶ್ನಿಸುವ, ಸಮಾಜ ಕಲ್ಯಾಣದ ಬಗ್ಗೆ ಚರ್ಚಿಸುವ ಮತ್ತು ಕಾನೂನುಗಳನ್ನು ಪರಿಶೀಲಿಸುವ ಹಕ್ಕು ಮತ್ತು ಕರ್ತವ್ಯ ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷಕ್ಕಿದೆ. ಆದರೆ, ರಾಜಕೀಯ ಪ್ರತಿಸ್ಪರ್ಧಿಯ ಮೇಲಿನ ವಿರೋಧವು ಎಂದಿಗೂ ರಾಷ್ಟ್ರದ ಮೇಲಿನ ವಿರೋಧವಾಗಿ ರೂಪಾಂತರಗೊಳ್ಳಬಾರದು. ಪಕ್ಷದ ಯುವ ಘಟಕವು ದೇಶವನ್ನು ಅವಮಾನಿಸಲು ಜಾಗತಿಕ ಶೃಂಗಸಭೆಯನ್ನು ಅಡ್ಡಿಪಡಿಸಿದಾಗ, ಆಪರೇಷನ್ ಸಿಂದೂರ್‌ನಂಥ ಕಾರ್ಯಾಚರಣೆಗಳನ್ನು ನಿರ್ವಹಿಸುವ ಸೈನಿಕರ ಶೌರ್ಯದ ಬಗ್ಗೆ ಅದರ ನಾಯಕರು ಅನುಮಾನ ವ್ಯಕ್ತಪಡಿಸಿದಾಗ, ಅದರ ಪ್ರಧಾನಿ ಅಭ್ಯರ್ಥಿಯು ವಿದೇಶಕ್ಕೆ ಹೋಗಿ ಭಾರತೀಯ ಪ್ರಜಾಪ್ರಭುತ್ವದ ಸಾವನ್ನು ಘೋಷಿಸಿದಾಗ ಮತ್ತು ಅದರ ಇತಿಹಾಸವು ಭಯೋತ್ಪಾದನೆ ನಿಗ್ರಹದ ಕಡೆಗೆ ಹಿಂಜರಿಕೆಯ ವಿಧಾನದಿಂದ ಕಳಂಕಿತಗೊಂಡಾಗ, ಮತದಾರರು ಕಠಿಣ ತೀರ್ಮಾನಕ್ಕೆ ಬರಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ಪ್ರಸಕ್ತ ಪಥವು ಅಪಾಯಕಾರಿ ಹತಾಶೆಯನ್ನು ಸೂಚಿಸುತ್ತದೆ. ಬಿಜೆಪಿಯನ್ನು ಕೆಳಗಿಳಿಸುವ ತಮ್ಮ ಸಂಪೂರ್ಣ ಉತ್ಸಾಹದಲ್ಲಿ, ಅದು ಭಾರತದ ಜಾಗತಿಕ ಪ್ರತಿಷ್ಠೆ, ಸೇನಾ ನೈತಿಕತೆ ಮತ್ತು ಆರ್ಥಿಕ ಮಹತ್ವಾಕಾಂಕ್ಷೆಗಳನ್ನು ತನ್ನೊಂದಿಗೆ ಕೆಳಕ್ಕೆ ಎಳೆಯಲು ಸಿದ್ಧವಿರುವಂತೆ ತೋರುತ್ತಿದೆ.

ಬಿಜೆಪಿಯ ವಿರುದ್ಧ ಹೋರಾಡುವುದು ಮತ್ತು ಭಾರತದ ವಿರುದ್ಧ ಹೋರಾಡುವುದರ ನಡುವಿನ ವ್ಯತ್ಯಾಸವನ್ನು ಕಾಂಗ್ರೆಸ್ ಸ್ಪಷ್ಟವಾಗಿ ಗುರುತಿಸುವವರೆಗೆ, ಅದು 'ದೇಶ ವಿರೋಧಿ ಶಕ್ತಿ' ಎಂಬ ಕಠಿಣ ಮತ್ತು ಸಮರ್ಥನೀಯ ಆರೋಪವನ್ನು ಎದುರಿಸುತ್ತಲೇ ಇರುತ್ತದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಶಂಕರ ಪಾಟೀಲ, ಗದಗ**
ಭಟ್ರೇ, ಗಂಡಸರು ನಿವೃತ್ತರಾದರೆ ಹೆಂಗಸರಿಗೆ ಖುಷಿನಾ?
- **ಖುಷಿ ಎಲ್ಲಿ ಬಂತು.. ಅರ್ಧರ್ಧ ಗಂಟೆಗೆ ಕಾಫಿ ಮಾಡಿ ಸಾಯಬೇಕಲ್ಲ!!?**

- **ವಸಂತ ಹೊನಕೆರೆ, ಬಾಗಲಕೋಟೆ**
ಭಟ್ರೇ, ಆತ ಬಾಸ್ ಹೇಳುವ ಜೋಕಿಗೆ ನಗುವುದೇ ಇಲ್ಲವಲ್ಲ?
- **ಹಾಗಾದ್ರೆ ಆತನ ರಿಟೈರ್ಮೆಂಟ್ ದಿನ ಸಮೀಪಿಸುತ್ತಿರಬೇಕು!**

- **ವಿದ್ಯಾ ಭಾಗವತ, ಹೊನ್ನಾವರ**
ಭಟ್ರೇ, ಗೊರಕೆ ಹೊಡೆಯುವ ಗಂಡನ ಜತೆ ಸಂಸಾರ ಹೇಗೆ ಮಾಡೋದು?
- **ಇದು ವೈಯಕ್ತಿಕ ಅಲ್ಲ, ಜಾಗತಿಕ ಸಮಸ್ಯೆಯಮ್ಮ, ಕ್ರಮೇಣ ನಿನಗೂ ರೂಢಿಯಾಗುತ್ತೆ!**

- **ರುದ್ರಣ್ಣ ನಾಯಕನಕಟ್ಟೆ, (ಇಮೇಲ್ ಮೂಲಕ)**
ಭಟ್ರೇ, ಜಗತ್ತಿಗೇ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಬೇಕು ಅಂತ ನಿರ್ಧರಿಸಿದ್ದೇನೆ, ಹೇಗೆ?
- **ಆಗ ನನಗೆ ಒಳ್ಳೆಯದಾಗಲಿ ಎಂದು ಪ್ರತ್ಯೇಕವಾಗಿ ಪ್ರಾರ್ಥಿಸಬೇಕಾದ ಅಗತ್ಯವಿಲ್ಲ!**

- **ಕೆ.ಸಿದ್ದಪ್ಪ, ಗಂಡಸಿ**
ಸರ್, ತೋಳ ಬಂದು ಧರ್ಮದ ಬಗ್ಗೆ ಉಪದೇಶ ನೀಡಿದರೆ ಏನಾಗಬಹುದು?
- **ಆಗ ಕೋಳಿಯನ್ನು ಕಳುವು ಮಾಡುವುದು ದಾನ ಎಂದು ಕರೆಯಿಸಿಕೊಳ್ಳಬಹುದು!**

- **ರಮೇಶಕುಮಾರ ಬಣಜಿ, (ಇಮೇಲ್ ಮೂಲಕ)**
ಭಟ್ರೇ, ಪತ್ನಿಗೂ, ಮಾಜಿ ಪತ್ನಿಗೂ ಏನು ವ್ಯತ್ಯಾಸ?
- **ಮದುವೆ ಚಾಲ್ತಿಯಲ್ಲಿರುವ ತನಕ ಪತ್ನಿ, ಜೀವ ಹೋಗುವ ತನಕ ಮಾಜಿ ಪತ್ನಿ!**

- **ರಶ್ಮಿ, ಬೆಂಗಳೂರು**
ಭಟ್ರೇ, ನನ್ನ ಬಾಯ್‌ಫ್ರೆಂಡ್ ತೀರಾ ತಿಕ್ಕಲನಂತೆ ವರ್ತಿಸುತ್ತಾನಲ್ಲ?
- **ಹಾಗಾದ್ರೆ ಆತ ನಿನ್ನನ್ನು ಗಾಢವಾಗಿ ಪ್ರೀತಿಸುತ್ತಿದ್ದಾನೆ ಅಂತಾಯ್ತು!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಮುದ್ದಿನ ಬೆಕ್ಕೇ, ಮುದ್ದಿನ ಗಿಣಿಯೇ, ಮುದ್ದಿನ ಹೆಣ್ಣೇ ಎನ್ನುವವರು ಗಂಡಸರನ್ನು ನೋಡಿ ಏನನ್ನುತ್ತಾರೆ?
- **ಛೀ.. ಕಳ್ಳ!**

ಒಲುಮೆ ಸಿಹಿಯ ಉಂಡು, ಬಯಕೆ ಸಿರಿಯ ಕಂಡು...

ಎಷ್ಟೋ ಬಾರಿ ನಾವು 'ನನಗೆ ಒಂದೇ ಬಯಕೆ ಇದೆ, ಬೇರೆ ಬಯಕೆಯೇ ಇಲ್ಲ, ಅದೊಂದು ಈಡೇರಿದರೆ ನಾನು ಬೇರೇನನ್ನೂ ಬಯಸುವುದಿಲ್ಲ' ಎಂದು ಹೇಳಿಕೊಳ್ಳುತ್ತೇವೆ. ಆದರೆ ಅದು 'ಆ ಒಂದು ಬಯಕೆ' ಈಡೇರುವವರೆಗೆ ಮಾತ್ರ. ಮನುಷ್ಯನ ಮನಸ್ಸು ಚಂಚಲ, ಒಂದೆಡೆ ಸ್ಥಿರವಾಗಿ ನಿಲ್ಲುವುದೇ ಇಲ್ಲ, ಅದರದ್ದೇ ಆದ ಮಾದರಿಯಲ್ಲಿ, ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಲೇ ಇರುತ್ತದೆ. ಒಂದು ಆಸೆ ಮುಗಿಯುತ್ತಿದ್ದಂತೆಯೇ ನಾವು ಇನ್ನೊಂದರ ಬೆನ್ನು ಹತ್ತಿ ಓಡಲಾರಂಭಿಸುತ್ತೇವೆ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
vveditoped@gmail.com

ಒಂದು ಮಗುವಿನ ಮುಂದೆ ಚಿನ್ನಾಭರಣ, ಹಣ, ಮಿಠಾಯಿ, ಆಟಿಕೆಯನ್ನು ಇಟ್ಟರೆ ಮಗುವು ಆಭರಣ, ಹಣ ಬಿಟ್ಟು ಆಟಿಕೆಯನ್ನೋ, ಮಿಠಾಯಿಯನ್ನೋ ಆರಿಸಿಕೊಳ್ಳುತ್ತದೆ. ವಯಸ್ಕ ವ್ಯಕ್ತಿಯ ಮುಂದೆ ಇದೇ ವಸ್ತುಗಳನ್ನಿಟ್ಟರೆ ಆತನಿಗೆ ಹಣ ಮತ್ತು ಚಿನ್ನ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತವೆ. ಇದೆಲ್ಲಾ ಆಯಾ ಸಂದರ್ಭದಲ್ಲಿ, ಯಾರ್‍ಯಾರಿಗೆ ಯಾವ್ಯಾವ ಅವಶ್ಯಕತೆ ಇರುತ್ತದೋ ಅದಕ್ಕನುಗುಣವಾಗಿ ಉಂಟಾಗುವ ಬಯಕೆಗಳು. ಮನೆಯಿಲ್ಲದವನಿಗೆ ಮನೆ, ಬಟ್ಟೆಯಿಲ್ಲದವನಿಗೆ ಬಟ್ಟೆ, ಉದ್ಯೋಗವಿಲ್ಲದವನಿಗೆ ಉದ್ಯೋಗ, ಹಸಿದವನಿಗೆ ಊಟ ಅವಶ್ಯಕವಾಗಿಯೂ, ಆಕರ್ಷಕವಾಗಿಯೂ ಕಾಣಿಸುತ್ತವೆ. ಪ್ರತಿಯೊಬ್ಬನ ದೃಷ್ಟಿಕೋನವೂ ಬಯಕೆಯೂ ಬೇರೆ ಬೇರೆಯಾಗಿರುವುದರಿಂದಲೇ ಈ ಲೋಕದಲ್ಲಿ ವಿವಿಧ ಬಗೆಯ ಜನರಿದ್ದಾರೆ. ಅದಕ್ಕೆ ತಕ್ಕಂತೆ ವೈವಿಧ್ಯಮಯ ವಸ್ತುಗಳೂ ಮಾರಾಟವಾಗುತ್ತವೆ.

ಎಲ್ಲರ ಬಯಕೆಗಳೂ ಒಂದೇ ರೀತಿಯದ್ದಾಗಿರುವುದಿಲ್ಲ. ಕ್ರೀಡಾಪಟುವಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಬೇಕೆಂಬ ಬಯಕೆಯಿದ್ದರೆ, ರಾಜಕಾರಣಿಗೆ ಮಂತ್ರಿಯಾಗಬೇಕು, ಮುಖ್ಯಮಂತ್ರಿಯಾಗಬೇಕು ಅಥವಾ ಪ್ರಧಾನಮಂತ್ರಿಯಾಗಬೇಕು ಎಂಬ ಬಯಕೆ ಇರುತ್ತದೆ. ಒಬ್ಬ ಬರಹಗಾರ ತನ್ನ ಕೃತಿ ಜನಪ್ರಿಯವಾಗಬೇಕು ಎಂದು ಬಯಸಿದರೆ, ಕಲಾವಿದ ತನಗೆ ಪ್ರಶಸ್ತಿ ಬರಬೇಕು ಎಂದು ಬಯಸುತ್ತಾನೆ. ಹಾಗಾದರೆ ಆಟಿಕೆಯನ್ನು ಆರಿಸಿಕೊಳ್ಳುವ ಮಗುವಿನ ಬಯಕೆ ಶಾಶ್ವತವಲ್ಲ. ಮಗುವಿದ್ದಾಗ ತಾನು ಆಡಲು ಬಯಸಿದ ಆಟಿಕೆಯನ್ನು ಪಡೆಯಲು ಅದು ಏನೆಲ್ಲ ಕಸರತ್ತು ಮಾಡುತ್ತದೆ. ಆ ಕ್ಷಣದಲ್ಲಿ ಮಗುವಿಗೆ ಅದು ಪ್ರಮುಖವಾಗಿರುತ್ತದೆ. ಕ್ರಮೇಣ ಮಗು ಬೆಳೆದು ದೊಡ್ಡದಾದಾಗ ಆಟಿಕೆಗಾಗಿ ಜಗಳವಾಡುವುದು, ಹಠ ಮಾಡುವುದು ಮೂರ್ಖತನವೆಂದು ಅದಕ್ಕೆ ಅನಿಸುತ್ತದೆ. ಆಟಿಕೆಯ ಬಯಕೆ ಬದಲಾಗಿ ನಿಜವಾದ ವಸ್ತುವನ್ನು ಪಡೆಯಬೇಕೆಂಬ ಬಯಕೆ ಹೆಚ್ಚಾಗುತ್ತದೆ. ಆಟಿಕೆಯ ಕಾರಿನ ಬದಲು ಐಷಾರಾಮಿ ಕಾರು, ಆಟಿಕೆಯ ಮನೆಯ ಬದಲು ಸ್ವಂತ ಮನೆ, ಹೀಗೆ. ಹೋಗಲಿ ಸ್ವಂತ ಮನೆಯಾದ ಮೇಲೆ ಅದರಲ್ಲಾದರೂ ಸಮಾಧಾನವಿದೆಯೆಂದರೆ ಹಾಗೂ ಇಲ್ಲ, ಅಲ್ಲಿಯೂ ಬಯಕೆಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ.

ಯೌವನದಲ್ಲಿ ಮನೆ ಕಟ್ಟುವಾಗ, ಮಲಗುವ ಕೋಣೆ ಮೊದಲನೇ ಮಹಡಿಯಲ್ಲಿದ್ದರೆ ಚೆನ್ನ ಎಂದು ಅಲ್ಲಿ ನಿರ್ಮಿಸಿಕೊಂಡಿರುತ್ತೇವೆ. ವಯಸ್ಸಾದಂತೆ ಮೊಣಕಾಲು ನೋವು ಆರಂಭವಾಗಿ ಮೆಟ್ಟಿಲು ಹತ್ತುವುದು ದುಸ್ತರ ಎನಿಸಿದಾಗ, ನೆಲಮಹಡಿಯಲ್ಲಿಯೇ ಮಲಗುವ ಕೋಣೆ ಇರಬೇಕಿತ್ತು ಎನಿಸುತ್ತದೆ. ಸಾಧ್ಯವಾದರೆ ಅದನ್ನು ಬದಲಾಯಿಸಿಕೊಳ್ಳುತ್ತೇವೆ. ಎಷ್ಟೋ ಬಾರಿ, ಹಳ್ಳಿಯಲ್ಲಿದ್ದವರಿಗೆ ಪಟ್ಟಣದಲ್ಲಿ ಒಂದು ಮನೆ ಮಾಡಿಕೊಂಡಿರಬೇಕೆಂಬ ಬಯಕೆ ಉಂಟಾಗುತ್ತದೆ. ಕ್ರಮೇಣ ಪಟ್ಟಣ ಬೆಳೆದು ಶಹರವಾದಾಗ, ಅಲ್ಲಿಯ ಜನಜಂಗುಳಿ, ಅತಿಯಾದ ವಾಹನಗಳು, ಶಬ್ದಮಾಲಿನ್ಯ, ವಾಯುಮಾಲಿನ್ಯಗಳನ್ನೆಲ್ಲ ಕಂಡು ಹಳ್ಳಿಯೇ ಒಳಿತು ಅನಿಸುತ್ತದೆ. ಒಂದು ವೇಳೆ ಹಳ್ಳಿಯಲ್ಲೇ ಮನೆ ಮಾಡಿಕೊಂಡು ಉಳಿದ ನಂತರ ಅಲ್ಲಿ ಮಕ್ಕಳಿಗೋ ಮೊಮ್ಮಕ್ಕಳಿಗೋ ಬೇಕಾಗುವ ಶಿಕ್ಷಣ ವ್ಯವಸ್ಥೆ, ಸಮೀಪದಲ್ಲಿ ಆಸ್ಪತ್ರೆ ಇರದಿದ್ದರೆ, ಮೊಬೈಲ್ ನೆಟ್‌ವರ್ಕ್ ಬರದಿದ್ದರೆ, ಆಗಾಗ ವಿದ್ಯುತ್ ವ್ಯತ್ಯಯವಾಗುತ್ತಿದ್ದರೆ, ಧಾರಾವಾಹಿ ನೋಡಲು ಆಗದಿದ್ದರೆ ಏನು ಗತಿ? ಎಲ್ಲವೂ ಸರಿಯಾಗಿದ್ದು ಊರಿನ ಕೊನೆಯಲ್ಲಿರುವ ಮನೆಯಲ್ಲಿ ಚಿರತೆಯೊಂದು ಕರುವನ್ನೋ, ನಾಯಿಮರಿಯನ್ನೋ ಕಚ್ಚಿಕೊಂಡು ಹೋಯಿತು ಎಂದರೆ ಮತ್ತೆ 'ಪಟ್ಟಣವೇ ಒಳ್ಳೆಯದು, ಅಲ್ಲಿಯೇ ಹೋಗಿ ಉಳಿಯುವುದು ಒಳಿತು' ಎಂಬ ಬಯಕೆ ಮೂಡಿದರೂ ಆಶ್ಚರ್ಯವಿಲ್ಲ.

ಎಷ್ಟೋ ಬಾರಿ ನಾವು 'ನನಗೆ ಒಂದೇ ಬಯಕೆ ಇದೆ, ಬೇರೆ ಬಯಕೆಯೇ ಇಲ್ಲ, ಅದೊಂದು ಈಡೇರಿದರೆ ನಾನು ಬೇರೇನನ್ನೂ ಬಯಸುವುದಿಲ್ಲ' ಎಂದು ಹೇಳಿಕೊಳ್ಳುತ್ತೇವೆ. ಆದರೆ ಅದು 'ಆ ಒಂದು ಬಯಕೆ' ಈಡೇರುವವರೆಗೆ ಮಾತ್ರ. ಮನುಷ್ಯನ ಮನಸ್ಸು ಚಂಚಲ, ಒಂದೆಡೆ ಸ್ಥಿರವಾಗಿ ನಿಲ್ಲುವುದೇ ಇಲ್ಲ. ಅದರದ್ದೇ ಆದ ಮಾದರಿಯಲ್ಲಿ, ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಲೇ ಇರುತ್ತದೆ. ಒಂದು ಆಸೆ ಮುಗಿಯುತ್ತಿದ್ದಂತೆಯೇ ನಾವು ಇನ್ನೊಂದರ ಬೆನ್ನು ಹತ್ತಿ ಓಡಲಾರಂಭಿಸುತ್ತೇವೆ. ವರ್ಷಾನುಗಟ್ಟಲೆ ಬಯಸಿದ ವಸ್ತು ಅಥವಾ ಸ್ಥಾನ ದಕ್ಕಿದಾಗ ಅದನ್ನು ಕೆಲವು ತಿಂಗಳೂ ನಾವು ಅನುಭವಿಸುವುದಿಲ್ಲ, ಖುಷಿಪಡುವುದಿಲ್ಲ. ಬಯಸಿದ್ದನ್ನು ಪಡೆದ ಸಂತೃಪ್ತಿ ಕೆಲವೇ ಕ್ಷಣಗಳದ್ದಾಗಿರುತ್ತದೆ. ಏಕೆಂದರೆ, ಬಯಸಿದ್ದನ್ನು ಪಡೆದ ಮರುಕ್ಷಣದಿಂದ ನಮ್ಮಲ್ಲಿಯೇ ಸುಪ್ತವಾಗಿ ಬಿದ್ದಿದ್ದ ಇನ್ಯಾವುದೋ ಬಯಕೆ ಚಿಗುರೊಡೆದುಕೊಳ್ಳುತ್ತದೆ. ಪರಿಣಾಮವಾಗಿ ನಮ್ಮ ಮನಸ್ಸಿನಲ್ಲಿ ಬೇರೆ ಬಯಕೆಗಳು ಹುಟ್ಟಿಕೊಂಡು ಅದರ ಬೆನ್ನುಹತ್ತಿ ಓಡಲಾರಂಭಿಸುತ್ತದೆ. ಅಂದರೆ, ನಮ್ಮ ಬಯಕೆಗೆ ಯಾವತ್ತೂ ಕೊನೆಯೆಂಬುದೇ ಇಲ್ಲ.

ನಮ್ಮ ಬಯಕೆ ಈಡೇರಲು 2 ಅಂಶಗಳು ಪ್ರಮುಖವಾಗಿರುತ್ತವೆ. ಒಂದು, ನಮ್ಮ ಮನಸ್ಥಿತಿ. ಇನ್ನೊಂದು, ನಮ್ಮ ಹೊರಗಿನ ವಾತಾವರಣ. ಆದರೆ, ಎರಡೂ ವಸ್ತುಗಳು ಸ್ಥಿರವಲ್ಲ. ಅವನ್ನು ಹತೋಟಿಯಲ್ಲಿಡುವುದು ಯಾರಿಂದಲೂ ಸಾಧ್ಯವಿಲ್ಲ. ಬಯಕೆ ಎಂಬುದು ಆ ಕ್ಷಣಕ್ಕೆ ಸಂಬಂಧಪಟ್ಟದ್ದಾದರೂ, ಅದೇ ಜೀವನದ ಮುಖ್ಯ ಉದ್ದೇಶವಾಗಿ ಮಾರ್ಪಟ್ಟರೂ ಕೆಲವೊಮ್ಮೆ ನಮ್ಮ ಬಯಕೆ ಈಡೇರುವುದಿಲ್ಲ. ಎಷ್ಟೋ ಸಲ ನಾವು ಸರಿಯಾಗಿ ಯೋಚಿಸದೆಯೇ ಯಾವುದು ಮುಖ್ಯವಲ್ಲವೋ, ಪ್ರಯೋಜನಕಾರಿಯಲ್ಲವೋ ಅಥವಾ ಅವಶ್ಯವಲ್ಲವೋ ಅದಕ್ಕೆ ಮಹತ್ವ ಕೊಟ್ಟು ಅದರ ಹಿಂದೆ ಓಡುತ್ತೇವೆ. ಆದರೆ ಗುರಿ ತಲುಪಿದಾಗ, 'ನಮ್ಮ ಗುರಿ ಇದಲ್ಲವಾಗಿತ್ತು' ಎಂದು ಪಶ್ಚಾತ್ತಾಪ ಪಡುವುದೂ ಇದೆ. ಇದು ಒಂದು ರೀತಿಯಲ್ಲಿ ದೀಪದ ಆಕರ್ಷಣೆಗೆ ಒಳಗಾಗುವ ಮಗುವಿನಂತೆ. ಮಗುವಿಗೆ ದೀಪ ಸುಂದರವಾಗಿ ಕಾಣುತ್ತದೆ. ಬೇಕೋ-ಬೇಡವೋ, ಅದನ್ನು ಹಿಡಿಯಲು ಹೋಗುತ್ತದೆ. ಕೈಸುಟ್ಟುಕೊಂಡು ಅಳುತ್ತದೆ. ಹಾಗೆಯೇ ನಾವು ದೊಡ್ಡವರಾದ ಮೇಲೂ ಎಷ್ಟೋ ಬಾರಿ ಉದ್ಯೋಗ ಮಾಡುತ್ತಾ, ಉದ್ದಿಮೆ ಆರಂಭಿಸಿ ಅಥವಾ ಇನ್ಯಾವುದೋ ನಿರ್ಣಯ ತೆಗೆದುಕೊಂಡು, ಕೆಲವು ದಿನ ಕಳೆದ ಮೇಲೆ 'ನಮ್ಮ ನಿರ್ಣಯ ಸರಿಯಾಗಿರಲಿಲ್ಲ' ಎನಿಸುವುದಿದೆ.

ಒಬ್ಬಾತ ಖಾಲಿ ಜಾಗದಲ್ಲಿ ಒಂದು ಮನೆ ನಿರ್ಮಿಸಿ ತುಂಬಾ ಸಂತಸದಲ್ಲಿರುತ್ತಾನೆ ಅಂದುಕೊಳ್ಳಿ. ಕಾಲಕ್ರಮೇಣ ಆತನ ಮನೆಯ ಪಕ್ಕದಲ್ಲಿ ಒಂದು ಹಿಟ್ಟಿನ ಗಿರಣಿ ಆರಂಭವಾಗುತ್ತದೆ. ಇನ್ನೊಂದು ಪಕ್ಕದಲ್ಲಿ ಮೋಟಾರ್‌ಬೈಕ್ ರಿಪೇರಿಯ ಗ್ಯಾರೇಜ್ ಆರಂಭವಾಗುತ್ತದೆ. ಮನೆಯ ಮುಂದೆ ವಾಹನ ಸಂಚಾರ ಹೆಚ್ಚಾಗುತ್ತದೆ. ಎದುರು ಮನೆಯ ನಾಯಿ ಸದಾ ಬೊಗಳುತ್ತಿರುತ್ತದೆ. ಸುತ್ತಲಿನ ವಾತಾವರಣ ಬದಲಾಗಿ ಉಸಿರು ಕಟ್ಟಿದ ಅನುಭವವಾಗುತ್ತದೆ. ತಾನಿಲ್ಲಿ ಮನೆ ಕಟ್ಟಬಾರದಾಗಿತ್ತು ಎನಿಸುತ್ತದೆ. ತಾನೇ ಬಯಸಿದ ಜಾಗದಲ್ಲಿ ಕಟ್ಟಿದ ಮನೆಯಲ್ಲಿ ಆತ ಕಿರಿಕಿರಿ ಅನುಭವಿಸುತ್ತಾನೆ.

ನಮ್ಮ ಬಯಕೆಗಳನ್ನು ಪೂರೈಸಿಕೊಳ್ಳುವ ಹಂತದಲ್ಲಿ ನಾವು ನಮ್ಮ ಅಕ್ಕಪಕ್ಕದಲ್ಲಿ ಆಗುತ್ತಿರುವ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದಿಲ್ಲ, ನಮ್ಮ ಬಯಕೆಯ ಬಗ್ಗೆಯೇ ಯೋಚಿಸುತ್ತಿರುತ್ತೇವೆ. ಆಗ ನಾವು ಹಿಂದೆ ಗಳಿಸಿದ್ದಕ್ಕೆ ಯಾವುದೇ ಅರ್ಥವಿಲ್ಲದಂತಾಗುತ್ತದೆ. ಏಕೆಂದರೆ ನಮ್ಮ ಸಂಪೂರ್ಣ ಲಕ್ಷ್ಯ ಮುಂದೆ ಗಳಿಸಬೇಕಾದುದ್ದರ ಕಡೆಗೆ ಇರುತ್ತದೆಯೇ ವಿನಾ, ಹಿಂದೆ ಗಳಿಸಿದ್ದರ ಕಡೆಗೆ ಇರುವುದೇ ಇಲ್ಲ. ನಮ್ಮ ಬಯಕೆಗಳು ಪೂರ್ಣಗೊಂಡ ನಂತರ ನಾವು ಅದನ್ನು ಬಲುಬೇಗ ಮರೆಯುತ್ತೇವೆ. ಪೂರ್ಣಗೊಳ್ಳದ ಬಯಕೆಗಳೇ ನಮ್ಮನ್ನು ಕಾಡುತ್ತಿರುತ್ತವೆ. ಅಪೂರ್ಣ ಬಯಕೆ ನಮ್ಮ ದೇಹದಲ್ಲಿನ ಒಂದು ಸಣ್ಣ ಗಾಯವಿದ್ದಂತೆ. ಅದರ ಮೇಲೇ ನಮ್ಮ ಗಮನ ಇರುತ್ತದೆಯೇ ವಿನಾ, ಆರೋಗ್ಯದಿಂದಿರುವ ದೇಹದ ಇನ್ನಿತರ ಭಾಗದ ಕಡೆಗಲ್ಲ. ಕಾಲಿನ ಒಂದು ಬೆರಳಿನಲ್ಲಿ ನೋವಾದರೂ ನಮ್ಮ ಸಂಪೂರ್ಣ ಗಮನ ಅದರ ಕಡೆಗೆ ಇರುತ್ತದೆಯೇ ವಿನಾ, ಆರೋಗ್ಯವಾಗಿರುವ ಉಳಿದ 9 ಬೆರಳುಗಳ ಕಡೆಗೂ ಅಲ್ಲ, ಎರಡು ಕಾಲಿನ ಕಡೆಗೂ ಅಲ್ಲ. ಇದನ್ನೇ ಭೌತಿಕ ಜಗತ್ತಿಗೆ ಹೋಲಿಸಿದರೆ, ಈಡೇರದ ಬಯಕೆಗಳನ್ನು ಹಿಂಬಾಲಿಸಿ, ಇದುವರೆಗೆ ಈಡೇರಿದ ವಿಷಯದ ಕಡೆಗೆ ನಾವು ಸಂಪೂರ್ಣ ಗಮನ ಹರಿಸದೆ ಮುಂದುವರಿಯುತ್ತೇವೆ. ಬೇಕಾದಷ್ಟು ಶ್ರೀಮಂತಿಕೆ ಇದ್ದರೂ, ಬೇಕಾದ ವಸ್ತುಗಳಿದ್ದರೂ, ನಮ್ಮ ಜತೆಯಲ್ಲಿ ಖುಷಿ ಕೊಡುವ ವ್ಯಕ್ತಿಗಳಿದ್ದರೂ ಅದನ್ನು ಅನುಭವಿಸುವುದಿಲ್ಲ. ಬದಲಾಗಿ ಮುಂದೆ ಗಳಿಸಬೇಕಾದುರ ಬಯಕೆಯಲ್ಲಿಯೇ ಇರುತ್ತೇವೆ.

ಈ ಪ್ರಪಂಚದಲ್ಲಿ ಪ್ರತಿಯೊಬ್ಬನೂ ತಾನು ಏನನ್ನಾದರೂ ಸಾಧಿಸಬೇಕು ಎಂದು ಬಯಸುತ್ತಾನೆ. ಆದರೆ ಎಷ್ಟೋ ಸಲ ಆ ಬಯಕೆ ಈಡೇರದೆ ನಿರಾಶನೂ ಆಗುತ್ತಾನೆ. ನಿರಂತರವಾಗಿ ಈಡೇರದ ಬಯಕೆಯ ಬಂದಿಯಾಗಿರುವುದರಿಂದ ವರ್ತಮಾನದ ಬದುಕನ್ನು ಆಸ್ವಾದಿಸದೇ ಕಳೆಯುತ್ತಾನೆ. ಇದಕ್ಕೆ ಒಂದು ಉದಾಹರಣೆ ಹೇಳಿಬಿಡುತ್ತೇನೆ. ಒಬ್ಬ ಸಂಸಾರಸ್ಥ ಬಾಡಿಗೆಯ ಮನೆಯಲ್ಲಿದ್ದಾನೆ ಎಂದುಕೊಳ್ಳಿ. ಅವನಿಗೆ 'ಸ್ವಂತ ಮನೆ ಕಟ್ಟಿ ಅದರಲ್ಲಿ ವಾಸಮಾಡಬೇಕು' ಎಂಬ ಬಯಕೆಯಾಗುತ್ತದೆ, ತಪ್ಪಲ್ಲ. ಹೀಗಾಗಿ ಆತ ಒಂದು ಜಾಗ ಖರೀದಿಸಿ ಮನೆಯ ನಿರ್ಮಾಣಕ್ಕೆ ತೊಡಗುತ್ತಾನೆ. ಆ ಸಂದರ್ಭದಲ್ಲಿ ಆತ ಬೆಳಗ್ಗೆ ಬೇಗನೆ ಎದ್ದು, ಹೊಸಮನೆ ಕಟ್ಟಿಸುತ್ತಿರುವ ಜಾಗಕ್ಕೆ ಹೋಗಿ, ಅಲ್ಲಿಯ ದೇಖ-ರೇಖಿ ನೋಡಿಕೊಂಡು, ಕೆಲಸಗಾರರಿಗೆ ಆ ದಿನದ ಕೆಲಸ ಹೇಳಿ, ಬೇಕಾದ ಹಣ, ವಸ್ತುಗಳನ್ನು ಪೂರೈಸಿ, ತನ್ನ ಕೆಲಸಕ್ಕೆ ಹೋಗುತ್ತಾನೆ. ಕೆಲಸದಿಂದ ಹಿಂದಿರುವಾಗ ಮನೆ ಕಟ್ಟುತ್ತಿರುವ ಜಾಗಕ್ಕೆ ಪುನಃ ಹೋಗಿ, ಅಂದಿನ ಕೆಲಸಗಳನ್ನೆಲ್ಲ ವೀಕ್ಷಿಸಿ, ನಾಳಿನ ಕೆಲಸವನ್ನು ವಿವರಿಸಿ, ಸಾಧ್ಯವಾದರೆ ಅಂದು ಕಟ್ಟಿದ ನಾಲ್ಕು ಕಲ್ಲಿಗೆ ನೀರುಣಿಸಿ, ರಾತ್ರಿ ಮಡದಿ-ಮಕ್ಕಳು ಮಲಗಿದ ನಂತರ ಅಥವಾ ಮಲಗುವ ವೇಳೆಗೆ ಮನೆಗೆ ಹಿಂದಿರುಗುತ್ತಾನೆ. ಆತ ಕಟ್ಟುತ್ತಿರುವ ಮನೆ ತಿಂಗಳೊಪ್ಪತ್ತಿನಲ್ಲಿ ಮುಗಿದರೆ ಅಡ್ಡಿಯಿಲ್ಲ, ಕಾರಣಾಂತರಗಳಿಂದ ಇದೇ ರೀತಿ ಕೆಲವು ವರ್ಷ ಮುಂದುವರಿದರೆ? ಸಣ್ಣ ಮಕ್ಕಳು ದೊಡ್ಡವರಾಗಿ ಬೆಳೆದಿರುತ್ತಾರೆ, ಮಡದಿಗೂ ವಯಸ್ಸಾಗಿರುತ್ತದೆ, ಸ್ವತಃ ಆತನೂ ಕುಗ್ಗಿರುತ್ತಾನೆ. ಆತ ಕಟ್ಟಿಸಿದ ಸ್ವಂತ ಮನೆಗೆ ಹೋಗಿ ಉಳಿದುಕೊಳ್ಳಬಹುದು, ಆದರೆ ಈ ನಡುವೆ ಆತ ತನ್ನ ಸಂಸಾರದೊಂದಿಗೆ ಕಳೆಯಬಹುದಾದ ಮಧುರ ಕ್ಷಣಗಳಿಂದ ವಂಚಿತನಾಗಿರುತ್ತಾನೆ. ಆ ಕ್ಷಣಗಳಲ್ಲಿ ಬಹುಶಃ ಮಕ್ಕಳಿಗೆ ತಂದೆ ಕಟ್ಟಿಸುತ್ತಿರುವ ಮನೆಗಿಂತ ತಂದೆ ತಮ್ಮ ಜತೆ ಕಳೆಯಬೇಕಾಗಿದ್ದ ಸಮಯ ಹೆಚ್ಚು ಅವಶ್ಯವಾಗಿರುತ್ತದೆ. ಕೆಲವು ಸಮಯದ ನಂತರ ತಂದೆಗೂ ಹೀಗೇ ಅನಿಸಿದರೂ ಆಶ್ಚರ್ಯವಿಲ್ಲ, ಇರಲಿ. ಆತ ಆ ಮನೆಗೆ ಹೋಗಿ ಉಳಿದ ನಂತರವೂ ಸಂತೋಷವಾಗಿರುತ್ತಾನೆ ಎಂದುಕೊಳ್ಳಬೇಕಾಗಿಲ್ಲ. ಆ ಕಾಲದಲ್ಲಿ ಮಕ್ಕಳು ಬೆಳೆದು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೇರೆ ಊರಿಗೆ ಹೋಗಬೇಕಾಗಬಹುದು. ಮಡದಿಯ ಅವಶ್ಯಕತೆಯೂ ಬದಲಾಗಬಹುದು, ಸ್ವತಃ ಆತನ ಬಯಕೆಯೂ ಬದಲಾಗಬಹುದು. ಹಾಗಾದರೆ ಏನು ಸಾಧಿಸಿದಂತಾಯಿತು? ನಂತರ ಆತನಿಗೆ ತಾನು ಮನೆಯ ಹಿಂದೆ ಸಮಯ ವ್ಯರ್ಥ ಮಾಡುವುದಕ್ಕಿಂತ ಮಕ್ಕಳ ಜತೆಗೆ ಹೆಚ್ಚಿನ ಸಮಯವನ್ನು ಕಳೆಯಬಹುದಾಗಿತ್ತು ಎನಿಸಿದರೆ ತಪ್ಪೇನಿಲ್ಲ, ಆದರೆ ಆಗ ಅದನ್ನು ಆಲೋಚಿಸಿ ಯಾವ ಪ್ರಯೋಜನವೂ ಇಲ್ಲ.

ಮನೆ ಕಟ್ಟಬೇಕೆಂಬ ಬಯಕೆ ಉಂಟಾಯಿತು ಅಂದುಕೊಳ್ಳಿ, ಆಗ ನಮ್ಮೆಲ್ಲಾ ಶಕ್ತಿಯು ಆ ಬಯಕೆಯ ಸುತ್ತಲೇ ಸುತ್ತುತ್ತಿರುತ್ತದೆ. ನಮ್ಮೆಲ್ಲಾ ವಿಚಾರಗಳೂ, ನಿರ್ಣಯಗಳೂ ಆ ಮನೆಯ ಸುತ್ತಲೇ ಇರುವುದರಿಂದ, ಜೀವನದ ಇತರ ವರ್ತಮಾನಗಳನ್ನು ಮರೆತುಬಿಡುತ್ತೇವೆ. ನಮ್ಮ ಬಯಕೆಯು ಮನದಲ್ಲಿ ಮಹತ್ವಾಕಾಂಕ್ಷೆಯನ್ನು ಮೂಡಿಸುತ್ತದೆ. ಮಹತ್ವಾಕಾಂಕ್ಷೆ ಸದಾ ಭವಿಷ್ಯತ್ತಿನಲ್ಲಿಯೇ ಇರುತ್ತದೆಯೇ ಹೊರತು ಭೂತದಲ್ಲಿಯೂ, ವರ್ತಮಾನದಲ್ಲಿಯೂ ಅಲ್ಲ. ಆದರೆ ಒಂದು ವಿಚಾರ ತಿಳಿದಿರಲಿ, ಭವಿಷ್ಯ ಯಾವತ್ತೂ ಸ್ಥಿರವಲ್ಲ, ಭವಿಷ್ಯವನ್ನು ಕಡಾಕಡಿ ಹೇಳಲು ಸಾಧ್ಯವಿಲ್ಲ. ಭವಿಷ್ಯ ಯಾವತ್ತೂ ದೂರದಲ್ಲಿರುವ ಬೆಟ್ಟದಂತೆ, ಚಲಿಸುವ ಮೋಡದಂತೆ. ನಾವೆಷ್ಟೇ ಪ್ರಯತ್ನಿಸಿದರೂ ಭವಿಷ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವೇ ಇಲ್ಲ.

ಹಾಗಾದರೆ ಬಯಕೆಗಳಿಲ್ಲದೆ ಬದುಕಲು ಸಾಧ್ಯವೇ? ಬಯಕೆಯೇ ಇಲ್ಲದ ಬದುಕು ಬೆಂಗಾಡು. ಆಸ್ಪತ್ರೆಯಲ್ಲಿ ಮಲಗಿದ ರೋಗಿಯೂ ತಾನು ಬೇಗ ಗುಣಮುಖನಾಗಿ ಮನೆಗೆ ಹೋಗಬೇಕೆಂದು ಬಯಸುತ್ತಾನೆ. ಅದೇ ಒಬ್ಬ ಮನುಷ್ಯ ತನಗೆ ರೋಗವೇ ಬರಬಾರದು, ತಾನು ಸಾಯಲೂಬಾರದು ಎಂದು ಬಯಸಿದರೆ? ಆದ್ದರಿಂದ ನಮ್ಮ ಬೇಕು-ಬೇಡಗಳನ್ನು ನಿರ್ಣಯಿಸಿ ಬಯಕೆಗಳನ್ನು ಗಾಳಿಸಬೇಕು, ಸಾಣಿಸಬೇಕು. ಇನ್ನು, ಬಹಳಷ್ಟು ಜನ ತಮ್ಮ ಬಯಕೆಯ ಗುರಿ ತಲುಪುವುದೇ ಪ್ರಮುಖವೆಂದು ತಪ್ಪಾಗಿ ಭಾವಿಸುತ್ತಾರೆ. ಬಯಕೆಯ ಪರ್ವತದ ಶಿಖರ ತಲುಪುವ ತವಕದಲ್ಲಿ ಆರಂಭ ಮತ್ತು ಅಂತ್ಯದ ನಡುವಿನಲ್ಲಿರುವ ಪ್ರಯಾಣದ ದಾರಿಯೆಡೆಗೆ ಹೆಚ್ಚಿನ ಗಮನ ಹರಿಸುವುದಿಲ್ಲ, ತಲುಪುವ ಗುರಿಗಿಂತ ಪ್ರಯಾಣದ ಹಾದಿ ಇನ್ನೂ ಸೊಗಸಾಗಿರಬಾರದೇಕೆ? ದಾರಿಯುವುದಕ್ಕೂ ಸಿಗುವ ಸುಂದರ ದೃಶ್ಯ, ಮರೆಯಲಾಗದ ಅನುಭವ, ಗುರಿಗಿಂತಲೂ ವಿಶಿಷ್ಟವಾಗಿರಬಾರದೇಕೆ? ಆದ್ದರಿಂದ ಗುರಿಯೆಡೆಗೆ ತಲುಪುವಾಗ ಪ್ರಯಾಣದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಎಷ್ಟೋ ಬಾರಿ ನಮ್ಮ ಬದುಕೇ ಸುಂದರವಾದ ಕ್ಷಣಗಳನ್ನು ನಮಗೆ ಉಡುಗೊರೆಯಾಗಿ ನೀಡುತ್ತದೆ. ಬದುಕು ಸುಂದರ ಪ್ರಯಾಣವಷ್ಟೇ ಅಲ್ಲ, ಅತಿದೊಡ್ಡ ಬಹುಮಾನವೂ ಆಗುತ್ತದೆ.

ಆವರಿಸುತ್ತಿರುವ ಸಾಂಸ್ಕೃತಿಕ ಮಾರ್ಕ್ಸ್‌ವಾದದ ಕರಾಳಛಾಯೆ

ವಿಷಾದಯೋಗ

ಡಾ. ನಿರಂಜನ ಪೂಜಾರ
vveditoped@gmail.com

ಮೊನ್ನೆ ಫೆಬ್ರವರಿ 24ರಂದು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಘಟನೆಯು ಕೇವಲ ಎರಡು ವಿದ್ಯಾರ್ಥಿ ಗುಂಪುಗಳ ನಡುವಿನ ಸಾಮಾನ್ಯ ಘರ್ಷಣೆಯಲ್ಲ. ಇದು ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯು ಎದುರಿಸುತ್ತಿರುವ ಅತಿ ದೊಡ್ಡ ಮತ್ತು ಅತ್ಯಂತ ಅಪಾಯಕಾರಿ ಸೈದ್ಧಾಂತಿಕ ಕ್ಯಾನ್ಸರ್‌ನ ಬಹಿರಂಗ ಸ್ಫೋಟ.

ವಿಶ್ವವಿದ್ಯಾಲಯದ ಆವರಣದಲ್ಲಿ, ಎಡಪಂಥೀಯ ಸಿದ್ಧಾಂತಗಳಿಂದ ಪ್ರೇರಿತವಾದ 'ಸ್ಪಾರ್ಕ್ ರೀಡಿಂಗ್ ಸರ್ಕಲ್' (ಕಮ್ಯುನಿಸ್ಟ್ ವಿದ್ಯಾರ್ಥಿ ಸಂಘಟನೆ AISA ಜತೆ ಗುರುತಿಸಿಕೊಂಡಿರುವ ಗುಂಪು) ಕಾಶ್ಮೀರದ ಕುನಾನ್-ಪೋಶ್ಪೋರಾ ಘಟನೆಯ ನೆಪದಲ್ಲಿ ಭಾರತೀಯ ಸೈನಿಕರನ್ನು 'ಅತ್ಯಾಚಾರಿ' ಎಂದು ಬಿಂಬಿಸುವ ಮತ್ತು ಕಾಶ್ಮೀರ ಪ್ರತ್ಯೇಕತಾವಾದವನ್ನು ಪರೋಕ್ಷವಾಗಿ ವೈಭವೀಕರಿಸುವ 'ರಾಷ್ಟ್ರ-ವಿರೋಧಿ' ಕಾರ್ಯಕ್ರಮವೊಂದನ್ನು ಆಯೋಜಿಸಲು ಮುಂದಾಗಿತ್ತು. ಯಾವುದೇ ಪೂರ್ವಾನುಮತಿಯಿಲ್ಲದೆ ಆಯೋಜಿಸಲಾಗಿದ್ದ ಈ ದೇಶದ್ರೋಹಿ ಮತ್ತು ಸೇನಾ-ವಿರೋಧಿ ನಿರೂಪಣೆಯ ವಿರುದ್ಧ 'ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್' (ಎಬಿವಿಪಿ) ಕಾರ್ಯಕರ್ತರು ತೀವ್ರವಾಗಿ ಸಿಡಿದೆದ್ದರು. ಎಬಿವಿಪಿ ವಿದ್ಯಾರ್ಥಿಗಳು ಕ್ಯಾಂಪಸ್ ಒಳಗೆ ನುಗ್ಗಿ, ವಿಶ್ವವಿದ್ಯಾಲಯದ ನಾಮಫಲಕಕ್ಕೆ ಮಸಿ ಬಳಿದು, ಇಂಥ ದೇಶವಿರೋಧಿ ಕಾರ್ಯಕ್ರಮಗಳಿಗೆ ಕುಮ್ಮಕ್ಕು ನೀಡುತ್ತಿರುವ ವ್ಯವಸ್ಥೆಯ ವಿರುದ್ಧ ತಮ್ಮ ಪ್ರಬಲ ಆಕ್ರೋಶವನ್ನು ಹೊರಹಾಕಿದರು.

ಈ ಘಟನೆಯ ನಂತರ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಈ ಕಾರ್ಯಕ್ರಮಕ್ಕೆ ಯಾವುದೇ ಅಧಿಕೃತ ಅನುಮತಿ ನೀಡಿರಲಿಲ್ಲ ಎಂದು ಸ್ಪಷ್ಟಪಡಿಸಬೇಕಾಯಿತು. ಆದರೆ, ಇಲ್ಲಿ ಪ್ರತಿಯೊಬ್ಬ ಭಾರತೀಯನನ್ನೂ ಕಾಡುವ ಮೂಲಭೂತ ಮತ್ತು ಆತಂಕಕಾರಿ ಪ್ರಶ್ನೆ ಎಂದರೆ, ಜ್ಞಾನದ ದೇಗುಲಗಳಾಗಬೇಕಿದ್ದ ಇಂಥ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಇಂದು ದೇಶವನ್ನು ತುಂಡರಿಸುವ, ಭಾರತೀಯ ಸೇನೆಯನ್ನು ನಿಂದಿಸುವ ಮತ್ತು ವಿದ್ಯಾರ್ಥಿಗಳಲ್ಲಿ ದೇಶದ ಬಗ್ಗೆಯೇ ದ್ವೇಷ ಬಿತ್ತುವ 'ಮಾರ್ಕ್ಸ್‌ವಾದಿ ಅಡ್ಡೆ'ಗಳಾಗಿ ಹೇಗೆ ಬದಲಾಗುತ್ತಿವೆ? ಈ ಘಟನೆಯು ಆಕಸ್ಮಿಕವಲ್ಲ, ಇದು ಕಳೆದ ನಾಲ್ಕು ದಶಕಗಳಿಂದ ಭಾರತೀಯ ಶೈಕ್ಷಣಿಕ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಹೈಜಾಕ್ ಮಾಡಿರುವ ಸಾಂಸ್ಕೃತಿಕ ಮಾರ್ಕ್ಸ್‌ವಾದದ (Cultural Marxism) ವಿಷಪೂರಿತ ಕಾರ್ಯತಂತ್ರದ ಸ್ಪಷ್ಟ ನಿದರ್ಶನವಾಗಿದೆ.

ವಿವಿಗಳೆಂಬ 'ಮಾರ್ಕ್ಸ್‌ವಾದಿ ಅಡ್ಡೆ'ಗಳು

ಇಂದಿನ ದಿನಗಳಲ್ಲಿ ಭಾರತದ ಪ್ರಮುಖ ವಿಶ್ವವಿದ್ಯಾಲಯಗಳು ಬೌದ್ಧಿಕ ಅನ್ವೇಷಣೆಯ ಕೇಂದ್ರಗಳಾಗಿ ಉಳಿದಿಲ್ಲ; ಬದಲಾಗಿ ಅವು ಮಾರ್ಕ್ಸ್‌ವಾದಿ, ಎಡಪಂಥೀಯ ಮತ್ತು ನಕ್ಸಲ್-ಹಿತೈಷಿ ಚಿಂತನೆಗಳ ಉತ್ಪಾದನಾ ಕಾರ್ಖಾನೆಗಳಾಗಿ ಮಾರ್ಪಟ್ಟಿವೆ. ಕ್ಯಾಂಪಸ್ ಒಳಗೆ ಹೊಕ್ಕರೆ, ಅಲ್ಲಿ ರಾಷ್ಟ್ರನಿರ್ಮಾಣದ ರಚನಾತ್ಮಕ ಚರ್ಚೆಗಳಿಗಿಂತ ಹೆಚ್ಚಾಗಿ, ರಾಷ್ಟ್ರವನ್ನು ಹೇಗೆ ಛಿದ್ರಗೊಳಿಸಬಹುದು ಎಂಬ 'ವಿಮರ್ಶಾತ್ಮಕ ಸಿದ್ಧಾಂತ'ಗಳ ಪಾಠಗಳು ನಡೆಯುತ್ತಿರುವುದು ನಿಚ್ಚಳವಾಗಿ ಗೋಚರಿಸುತ್ತದೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ನಡೆದ ಘಟನೆಯೇ ಇದಕ್ಕೆ ತಾಜಾಸಾಕ್ಷಿ.

ವಿದ್ಯಾರ್ಥಿಗಳ ಎಳೆಯ ಮನಸ್ಸುಗಳಿಗೆ ಭಾರತದ ಭವ್ಯ ಪರಂಪರೆ, ಸೇನೆಯ ತ್ಯಾಗ ಮತ್ತು ರಾಷ್ಟ್ರೀಯತೆಯ ಏಕೀಕೃತ ಮಹತ್ವವನ್ನು ಕಲಿಸುವ ಬದಲು, ವ್ಯವಸ್ಥಿತವಾಗಿ ಸಮಾಜವನ್ನು ಒಡೆಯುವ ಪಾಠ ಮಾಡಲಾಗುತ್ತಿದೆ. ಈ ಮಾರ್ಕ್ಸ್‌ವಾದಿ 'ಅಡ್ಡೆ'ಗಳ ಮುಖ್ಯ ಉದ್ದೇಶ ಶಿಕ್ಷಣ ನೀಡುವುದಲ್ಲ; ಬದಲಾಗಿ ಅಸ್ತಿತ್ವದಲ್ಲಿರುವ ಪ್ರಜಾಸತ್ತಾತ್ಮಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ವಿರುದ್ಧ ಕೃತಕವಾಗಿ ಬಂಡೇಳುವಂತೆ ಯುವಜನತೆಯನ್ನು ಪ್ರಚೋದಿಸುವುದಾಗಿದೆ. ಇವರು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಮುಖವಾಡ ಧರಿಸಿ, ಭಾರತದ ಸಾರ್ವಭೌಮತ್ವದ ಮೇಲೆ ನಿರಂತರ ದಾಳಿ ಮಾಡುತ್ತಾರೆ. ಕಾಶ್ಮೀರದ ಪ್ರತ್ಯೇಕತಾವಾದಕ್ಕೆ ಬೆಂಬಲ, ಭಾರತೀಯ ಸೇನೆಯ ವಿರುದ್ಧ ಮಾನವ ಹಕ್ಕುಗಳ ಉಲ್ಲಂಘನೆಯ ಸುಳ್ಳು ಆರೋಪಗಳು ಮತ್ತು ವಿಚ್ಛಿದ್ರಕಾರಿ ಸಿದ್ಧಾಂತಗಳ ವೈಭವೀಕರಣ ಇವೆಲ್ಲವೂ ಈ ಮಾರ್ಕ್ಸ್‌ವಾದಿ ಅಡ್ಡೆಗಳ ದೈನಂದಿನ ಕಾರ್ಯಸೂಚಿಗಳಾಗಿವೆ. ವಿಶ್ವವಿದ್ಯಾಲಯಗಳಂಥ ಸ್ವತಂತ್ರ ವೇದಿಕೆಗಳನ್ನು ದುರ್ಬಳಕೆ ಮಾಡಿಕೊಂಡು, ಈ ಶಕ್ತಿಗಳು ದೇಶದ ಭವಿಷ್ಯದ ನಾಯಕರಾಗಬೇಕಿದ್ದ ಯುವಕರನ್ನು ದಾರಿತಪ್ಪಿಸಿ, ಅವರನ್ನು ಹತಾಶವಾದಿ, ರಾಷ್ಟ್ರ-ವಿರೋಧಿ ಮತ್ತು ಅರಾಜಕತಾವಾದಿಗಳನ್ನಾಗಿ ಪರಿವರ್ತಿಸುತ್ತಿವೆ.

ಭಾರತೀಯ ಶಿಕ್ಷಣದ ಹೈಜಾಕ್

ಭಾರತೀಯ ಶಿಕ್ಷಣ ವ್ಯವಸ್ಥೆಯು ಕೇವಲ ಥಾಮಸ್ ಬಾಬಿಂಗ್ಟನ್ ಮೆಕಾಲೆಯ ವಸಾಹತುಶಾಹಿ ವಿನ್ಯಾಸದ ಮುಂದುವರಿದ ಭಾಗ ಎಂಬ ಹಳೆಯ ವಾದವು ಈಗ ಕೇವಲ ಒಂದು ನೆಪವಷ್ಟೇ. ಈ ವಾದವು ಅತ್ಯಂತ ಅಪಾಯಕಾರಿ ಮತ್ತು ಪ್ರಸ್ತುತ ವಾಸ್ತವದಿಂದ ನಮ್ಮ ಗಮನವನ್ನು ಬೇರೆಡೆ ಸೆಳೆಯುತ್ತದೆ. ವಾಸ್ತವದಲ್ಲಿ, ಇಂದು ಭಾರತೀಯ ಶೈಕ್ಷಣಿಕ ವ್ಯವಸ್ಥೆಯನ್ನು ಪರಸ್ಪರ ವಿರುದ್ಧವಾಗಿ ಕಾಣುವ, ಆದರೆ ಸಮಾನವಾಗಿ ವಿನಾಶಕಾರಿಯಾದ ಎರಡು ಶಕ್ತಿಗಳು ವ್ಯವಸ್ಥಿತವಾಗಿ ಹೈಜಾಕ್ ಮಾಡಿವೆ. ಒಂದು- ಜಾಗತಿಕ ನವ-ಉದಾರವಾದಿ ಮಾರುಕಟ್ಟೆ ಶಕ್ತಿ, ಮತ್ತೊಂದು ನಮ್ಮ ಸಂಸ್ಕೃತಿಯನ್ನು ಬುಡಮೇಲು ಮಾಡುವ ಮಾರ್ಕ್ಸ್‌ವಾದಿ ಸಿದ್ಧಾಂತ. ನಾವೀಗ ಎರಡು ವಿಭಿನ್ನ ದುರಂತಗಳನ್ನು ಸೃಷ್ಟಿಸುವ ವ್ಯವಸ್ಥೆಗೆ ನಮ್ಮದೇ ಬೆವರು ಸುರಿಸಿದ ಹಣವನ್ನು ಸುರಿಯುತ್ತಿದ್ದೇವೆ. ಈ ವ್ಯವಸ್ಥೆಯು ಪಾಶ್ಚಿಮಾತ್ಯ ಬಂಡವಾಳಶಾಹಿಗಳಿಗೆ 'ಕಾರ್ಪೊರೇಟ್ ಗುಲಾಮರನ್ನು' ಸೃಷ್ಟಿಸುತ್ತಿದೆ. ಭಾರತದ ಪ್ರತಿಷ್ಠಿತ ಸಂಸ್ಥೆಗಳಾದ ಐಐಟಿ, ಐಐಎಂ ಮತ್ತು ಇತರ ಉನ್ನತ ಶ್ರೇಣಿಯ ವಿಶ್ವವಿದ್ಯಾಲಯಗಳನ್ನು ಬಲವಾದ ರಾಷ್ಟ್ರ-ನಿರ್ಮಾಣ ಮತ್ತು ಬೌದ್ಧಿಕ ಸ್ವಾವಲಂಬನೆಯ ದೂರದೃಷ್ಟಿಯಿಂದ ಸ್ಥಾಪಿಸಲಾಯಿತು. ಆದರೆ ಇಂದು, ಅವು ವಾಲ್ ಸ್ಟ್ರೀಟ್, ಸಿಲಿಕಾನ್ ವ್ಯಾಲಿ ಮತ್ತು ಯುರೋಪಿಯನ್ ಬಹುರಾಷ್ಟ್ರೀಯ ಕಂಪನಿಗಳಿಗೆ ಕೇವಲ ಸರಕಾರಿ-ಅನುದಾನಿತ ಮಾನವ ಸಂಪನ್ಮೂಲ ಒದಗಿಸುವ ಏಜೆನ್ಸಿಗಳಾಗಿ ಕುಸಿದಿವೆ. ನಮ್ಮ ಪಠ್ಯಕ್ರಮ ಮತ್ತು ಸಂಶೋಧನಾ ಆದ್ಯತೆಗಳನ್ನು ಸಂಪೂರ್ಣವಾಗಿ ಪಾಶ್ಚಿಮಾತ್ಯ ಮಾರುಕಟ್ಟೆ ಶಕ್ತಿಗಳೇ ನಿರ್ದೇಶಿಸುತ್ತಿವೆ. ಗ್ರಾಮೀಣ ಕೃಷಿ ಆರ್ಥಿಕತೆಯನ್ನು ಕ್ರಾಂತಿಕಾರಿಯಾಗಿ ಬದಲಾಯಿಸಲು ಯಾವ ಉನ್ನತ ಸಂಸ್ಥೆ ತನ್ನ ಬೌದ್ಧಿಕ ಬಂಡವಾಳವನ್ನು ಮೀಸಲಿಡುತ್ತಿದೆ? ನಮ್ಮ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು (ಎಂಎಸ್‌ಎಂಇ) ಬಲಪಡಿಸಲು ಮತ್ತು ಸ್ಥಳೀಯ ಕುಶಲಕರ್ಮಿಗಳನ್ನು ಸಬಲೀಕರಣಗೊಳಿಸಲು ಬೇಕಾದ ತಾಂತ್ರಿಕ ಆವಿಷ್ಕಾರಗಳು ಎಲ್ಲಿವೆ? ಭಾರತದ ಅತ್ಯಂತ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಮತ್ತು ಅಂತರ್ಗತ ಯೋಜನೆಗಳನ್ನು ರೂಪಿಸಲು ತಮ್ಮ ಶೈಕ್ಷಣಿಕ ಜ್ಞಾನವನ್ನು ಬಳಸುವ ಬದಲು, ನಮ್ಮ ಅತ್ಯಂತ ಬುದ್ಧಿವಂತ ಯುವಕರು ಕೇವಲ ವಿದೇಶಿ ವೀಸಾ, ಡಾಲರ್ ಗಳಿಕೆ ಮತ್ತು ಕಾರ್ಪೊರೇಟ್ ಹುದ್ದೆಗಳ ಕನಸು ಕಾಣುವಂತೆ ಅವರನ್ನು ಬ್ರೈನ್‌ವಾಶ್ ಮಾಡಲಾಗುತ್ತಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಿರ್ವಹಣಾ ಕ್ಷೇತ್ರಗಳನ್ನು ರಾಷ್ಟ್ರೀಯತೆಯಿಂದ ಸಂಪೂರ್ಣವಾಗಿ ಬೇರ್ಪಡಿಸಲಾಗಿದೆ; ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವ ಬದಲು, ಅವು ಕೇವಲ ಜಾಗತಿಕ ಬಂಡವಾಳಕ್ಕೆ ಸೇವೆ ಸಲ್ಲಿಸುತ್ತಿವೆ. ಇದು ಒಂದು ಸ್ಪಷ್ಟ ಆರ್ಥಿಕ ಮತ್ತು ಬೌದ್ಧಿಕ ಶರಣಾಗತಿಯಾಗಿದೆ.

ಮಾನವಿಕ ವಿಭಾಗಗಳ ದುರವಸ್ಥೆ

ಮಾರುಕಟ್ಟೆಯು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸರಕಾಗಿಸಿದರೆ, ಮಾನವಿಕ (Humanities) ಮತ್ತು ಸಮಾಜ ವಿಜ್ಞಾನ (Social Sciences) ಕ್ಷೇತ್ರಗಳನ್ನು ಮಾರ್ಕ್ಸ್‌ವಾದಿ ಸಿದ್ಧಾಂತಗಳು ಸಂಪೂರ್ಣವಾಗಿ ಅತಿಕ್ರಮಿಸಿಕೊಂಡಿವೆ. ಆದರೆ, ಇದು ಕೇವಲ ಕಾರ್ಮಿಕರ ಮತ್ತು ಬಂಡವಾಳಶಾಹಿಗಳ ನಡುವಿನ ಸಾಂಪ್ರದಾಯಿಕ ಆರ್ಥಿಕ ಮಾರ್ಕ್ಸ್‌ವಾದವಲ್ಲ. ಅತ್ಯಂತ ಭೀಕರ ರೂಪ ಪಡೆದುಕೊಂಡಿರುವ ಸಾಂಸ್ಕೃತಿಕ ಮಾರ್ಕ್ಸ್‌ವಾದ ಮತ್ತು ಅದರ ಆಧುನಿಕ ರೂಪಗಳಾದ 'ವೋಕಿಸಂ' (Wokeism) ಹಾಗೂ ವಿಮರ್ಶಾತ್ಮಕ ಸಿದ್ಧಾಂತಗಳು. ಈ ಪಾಶ್ಚಿಮಾತ್ಯ ಸೈದ್ಧಾಂತಿಕ ಕಸವನ್ನು ಭಾರತದ ಮೇಲೆ ಬಲವಂತವಾಗಿ ಸುರಿಯಲಾಗುತ್ತಿದೆ. ಸಮಾಜದ ವಿವಿಧತೆಯನ್ನು ಜಾತಿ, ಲಿಂಗ, ಲೈಂಗಿಕತೆ, ಪ್ರಾದೇಶಿಕತೆ, ಭಾಷೆಯ ಸೂಕ್ಷ್ಮದರ್ಶಕದಲ್ಲಿ ಹುಡುಕಿ, ಅವುಗಳನ್ನು ಮತ್ತಷ್ಟು ದೊಡ್ಡದಾಗಿಸುವ ಮತ್ತು ಸಮಾಜವನ್ನು ವಿಭಜಿಸುವ ಏಕೈಕ ಉದ್ದೇಶದಿಂದಲೇ ಈ ಸಿದ್ಧಾಂತಗಳನ್ನು ವಿನ್ಯಾಸಗೊಳಿಸಲಾಗಿದೆ.

ಈ ವಿಷಪೂರಿತ ವಾತಾವರಣವು ಎಲ್ಲಾ ಮಾನವ ಸಂಬಂಧಗಳನ್ನು 'ದಬ್ಬಾಳಿಕೆಕೋರ' ಮತ್ತು 'ದಮನಿತ' ಎಂಬ ಗುರುತಿನ ರಾಜಕಾರಣದ ಕಿರಿದಾದ ಚೌಕಟ್ಟಿಗೆ ತಳ್ಳಿವೆ. ಇದು ಯುವಕರನ್ನು ಅವರ ಸಾಂಪ್ರದಾಯಿಕ, ಕೌಟುಂಬಿಕ ಮತ್ತು ಸಾಂಸ್ಕೃತಿಕ ಬೇರುಗಳಿಂದ ಕತ್ತರಿಸಿಹಾಕುತ್ತದೆ. ಅಸ್ತಿತ್ವದ ಏಕತೆಯನ್ನು ಸಾರುವ 'ಅದ್ವೈತ ವೇದಾಂತ'ದಂಥ ಆಳವಾದ, ಎಲ್ಲರನ್ನೂ ಬೆಸೆಯುವ ನಮ್ಮದೇ ದಾರ್ಶನಿಕ ಸಿದ್ಧಾಂತಗಳನ್ನು ಕಲಿಸುವ ಬದಲು, ಕುಂದುಕೊರತೆ, ಸಾರ್ವಕಾಲಿಕ ಬಲಿಪಶು ಮನೋಭಾವ (Victimhood) ಮತ್ತು ತಾವು ಹುಟ್ಟಿ ಬೆಳೆದ ವ್ಯವಸ್ಥೆಯ ಮೇಲಿನ ತೀವ್ರದ್ವೇಷವನ್ನು ವಿದ್ಯಾರ್ಥಿಗಳಿಗೆ ಬಲವಂತವಾಗಿ ಉಣಬಡಿಸಲಾಗುತ್ತಿದೆ. ಸಮಾಜದಲ್ಲಿ ಸಾಮರಸ್ಯ ತರುವುದು ಈ ಶಿಕ್ಷಣದ ಉದ್ದೇಶವೇ ಅಲ್ಲ, ಬದಲಾಗಿ ಅಸ್ತಿತ್ವದಲ್ಲಿರುವ ಸಾವಿರಾರು ವರ್ಷಗಳ ನಾಗರಿಕತೆಯ ರಚನೆಯನ್ನೇ ಸಂಪೂರ್ಣವಾಗಿ ನಾಶಮಾಡುವುದಾಗಿದೆ.

ರಾಷ್ಟ್ರದ ಮೇಲಿನ ದ್ವೇಷ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಂಥ ಸಂಸ್ಥೆಗಳಲ್ಲಿ ಇತ್ತೀಚೆಗೆ ಕಂಡುಬಂದ ರಾಷ್ಟ್ರ-ವಿರೋಧಿ ಚಟುವಟಿಕೆಗಳು ಕೇವಲ ಪ್ರತ್ಯೇಕ ಘಟನೆಗಳಲ್ಲ. ಅವು ವಿಮರ್ಶಾತ್ಮಕ ಸಿದ್ಧಾಂತದಲ್ಲಿ ಮುಳುಗಿರುವ ಪಠ್ಯಕ್ರಮದ ಉದ್ದೇಶಿತ ಉತ್ಪಾದನೆಗಳಾಗಿವೆ. ರಾಷ್ಟ್ರ ಮತ್ತು ಅದರ ಸಾಂಸ್ಕೃತಿಕ ಪರಂಪರೆಯೇ ಒಂದು ದಬ್ಬಾಳಿಕೆಯ ರಚನೆ, ಅದನ್ನು ಬುಡಸಹಿತ ನಾಶಪಡಿಸಲೇಬೇಕು ಎಂದು ನಂಬುವ ವಿಕೃತ ಮನಸ್ಥಿತಿಯನ್ನು ಈ ಶಿಕ್ಷಣವು ಬೆಳೆಸುತ್ತಿದೆ. ತರಗತಿಗಳಲ್ಲಿ ಎಡಪಂಥೀಯ ಪ್ರಾಧ್ಯಾಪಕರು ಮತ್ತು ಕ್ಯಾಂಪಸ್‌ಗಳಲ್ಲಿ ಈ ಗುಂಪುಗಳು ನಿರಂತರವಾಗಿ ಭಾರತೀಯ ಸೇನೆಯನ್ನು, ಬಹುಸಂಖ್ಯಾತರ ನಂಬಿಕೆಗಳನ್ನು ಮತ್ತು ದೇಶದ ಭದ್ರತಾ ಪಡೆಗಳನ್ನು ಖಳನಾಯಕರಂತೆ ಬಿಂಬಿಸುತ್ತವೆ.

ಯಾವ ಯುವಕರು ಚಳಿ, ಮಳೆ, ಬಿಸಿಲೆನ್ನದೆ ದೇಶದ ಗಡಿ ಕಾಯುವ ಯೋಧರನ್ನು ಗೌರವಿಸಬೇಕಿತ್ತೋ, ಅದೇ ಯುವಕರು ಇಂದು 'ಕಾಶ್ಮೀರದಲ್ಲಿ ಸೇನೆಯು ದಬ್ಬಾಳಿಕೆ ನಡೆಸುತ್ತಿದೆ' ಎಂದು ನಂಬಿ, ಸೇನೆಯ ವಿರುದ್ಧವೇ ಪ್ರತಿಭಟನೆ ಮಾಡುವ ಮಟ್ಟಕ್ಕೆ ಬ್ರೈನ್ ವಾಶ್ ಮಾಡಲ್ಪಟ್ಟಿದ್ದಾರೆ. ತಮ್ಮ ನೆಲದ ಕಾನೂನು, ಭದ್ರತೆ ಮತ್ತು ಪರಂಪರೆಯನ್ನು ತಿರಸ್ಕರಿಸುವುದನ್ನೇ 'ಬುದ್ಧಿವಂತಿಕೆ' ಮತ್ತು 'ಪ್ರಗತಿಪರತೆ' ಎಂದು ನಂಬುವಂತೆ ಮಾಡಲಾಗಿದೆ. ಇಂಥ ವಿಶ್ವವಿದ್ಯಾಲಯಗಳು ದೇಶದ ತೆರಿಗೆ ಹಣದಿಂದ, ಭದ್ರತೆಯಿಂದ ನಡೆಯುತ್ತವೆ; ಆದರೆ ಅಲ್ಲಿ ಉತ್ಪತ್ತಿಯಾಗುವುದು ಮಾತ್ರ ದೇಶವನ್ನು ಒಳಗಿನಿಂದಲೇ ಕೊರೆಯುವ ಗೆದ್ದಲುಹುಳುಗಳು.

ಅಮೆರಿಕದ ಎಚ್ಚರಿಕೆ

ಈ ಸೈದ್ಧಾಂತಿಕ ಯುದ್ಧದ ಅಂತಿಮ ಪರಿಣಾಮವೇನು ಎಂಬುದನ್ನು ನಾವು ಊಹಿಸುವ ಅಗತ್ಯವಿಲ್ಲ. ಇದೇ ವಿಮರ್ಶಾತ್ಮಕ ಸಿದ್ಧಾಂತಗಳ ನಿರಂತರ ಪ್ರಯೋಗದಿಂದ ಕ್ರೂರವಾಗಿ ಛಿದ್ರಗೊಂಡಿರುವ ಮತ್ತು ಆಂತರಿಕವಾಗಿ ಧ್ರುವೀಕರಣಗೊಂಡಿರುವ ಇಂದಿನ ಅಮೆರಿಕದ ಸಮಾಜವನ್ನು ನಾವು ಅತಿದೊಡ್ಡ ಎಚ್ಚರಿಕೆಯ ಗಂಟೆಯಾಗಿ ನೋಡಬೇಕಾಗಿದೆ. ಇಂದು ಅಮೆರಿಕದ ಪ್ರತಿಷ್ಠಿತ 'ಐವಿ ಲೀಗ್' ವಿಶ್ವವಿದ್ಯಾಲಯಗಳು ಬೌದ್ಧಿಕತೆಯ ಕೇಂದ್ರಗಳಾಗಿ ಉಳಿದಿಲ್ಲ; ಬದಲಾಗಿ ಅವು ಕೇವಲ ಗುರುತಿನ ರಾಜಕಾರಣದ ಮತ್ತು ತೀವ್ರಗಾಮಿ ಅರಾಜಕತೆಯ ಕೇಂದ್ರಗಳಾಗಿವೆ. ಯಾವಾಗ ಗುರುತಿನ ರಾಜಕಾರಣವು ರಾಷ್ಟ್ರೀಯ ಅಸ್ಮಿತೆಗಿಂತ ಮೇಲಾಗುತ್ತದೆಯೋ, ಆಗ ಸಮಾಜದ ಬುನಾದಿ ಅನಿವಾರ್ಯವಾಗಿ ಕುಸಿಯುತ್ತದೆ. ಭಾರತವು ಈಗ ಅದೇ ಅಪಾಯಕಾರಿ ಹಾದಿಯಲ್ಲಿದೆ. ನಮ್ಮ ಶೈಕ್ಷಣಿಕ ಸಂಸ್ಥೆಗಳನ್ನು ನಾವು ಈ ಜಾಗತಿಕ ಮಾರುಕಟ್ಟೆ ಶಕ್ತಿಗಳಿಗೆ ಮತ್ತು ಆಮದು ಮಾಡಿಕೊಂಡ ಮಾರ್ಕ್ಸ್‌ವಾದಿ ಸಿದ್ಧಾಂತಗಳಿಗೆ ಒಪ್ಪಿಸುವುದು ಎಂದರೆ, ನಮ್ಮ ನಾಗರಿಕತೆಯನ್ನು ನಾವೇ ಕೈಯಾರೆ ಸೋಲಿಸಿದಂತೆ. ನಮ್ಮ ಕಣ್ಮುಂದೆಯೇ ನಮ್ಮ ಯುವಕರನ್ನು ನಮ್ಮದೇ ದೇಶದ ವಿರುದ್ಧ ಅಸ್ತ್ರಗಳಾಗಿ ಬಳಸಲಾಗುತ್ತಿದೆ. ಕೇವಲ ಮೂಕಪ್ರೇಕ್ಷಕರಾಗಿರುವುದು ಅಥವಾ 'ರಾಜಕೀಯ ಸರಿತನ'ವನ್ನು (Political correctness) ಕಾಪಾಡಿಕೊಳ್ಳಲು ಮೌನವಾಗಿರುವುದು ಇನ್ನು ಮುಂದೆ ಆಯ್ಕೆಯಲ್ಲ; ಅದು ರಾಷ್ಟ್ರೀಯ ಆತ್ಮಹತ್ಯೆಗೆ ಸಮಾನ.

ಬೌದ್ಧಿಕ 'ಸ್ವಾತಂತ್ರ್ಯ'ದ ಮರುಸ್ಥಾಪನೆಯ ಅಗತ್ಯ

ಶಿಕ್ಷಣವು ನಮ್ಮ ಕಾಲದ ಅತಿದೊಡ್ಡ ಮತ್ತು ಅತ್ಯಂತ ನಿರ್ಣಾಯಕ ಯುದ್ಧಭೂಮಿಯಾಗಿದೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ದೇಶವಿರೋಧಿ ನಿರೂಪಣೆಯ ವಿರುದ್ಧ 'ಎಬಿವಿಪಿ' ವಿದ್ಯಾರ್ಥಿಗಳು ನಡೆಸಿದ ಉಗ್ರ ಪ್ರತಿಭಟನೆಯು ಕೇವಲ ಒಂದು ಕ್ಯಾಂಪಸ್ ಘಟನೆಯಲ್ಲ, ಅದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಹಿಡಿದಿರುವ ಸೈದ್ಧಾಂತಿಕ ಗ್ರಹಣವನ್ನು ಬಿಡಿಸಲು ಆರಂಭವಾದ ಸ್ಪಷ್ಟ ರಣಕಹಳೆ.

ಉಳಿಯಬೇಕಾದರೆ, ನಾವು ನಮ್ಮ ಬೌದ್ಧಿಕ 'ಸ್ವಾತಂತ್ರ್ಯ'ವನ್ನು ಮರಳಿ ಪಡೆಯಲೇಬೇಕು. ನಮ್ಮ ವಿಶ್ವವಿದ್ಯಾಲಯಗಳು ಜಾಗತಿಕ ಬಂಡವಾಳಶಾಹಿಗಳ ಕಾರ್ಪೊರೇಟ್ ಗುಲಾಮರನ್ನಾಗಲೀ ಅಥವಾ ದೇಶವನ್ನು ಒಡೆಯುವ ಮಾರ್ಕ್ಸ್‌ವಾದಿ ಹೋರಾಟಗಾರರನ್ನಾಗಲೀ ಸೃಷ್ಟಿಸುವ ಕಾರ್ಖಾನೆಗಳಾಗಬಾರದು. ಬದಲಾಗಿ, ತಳಮಟ್ಟದಿಂದ ರಾಷ್ಟ್ರವನ್ನು ಕಟ್ಟುವ ದಾರ್ಶನಿಕರನ್ನು, ಗ್ರಾಮಗಳನ್ನು ಉದ್ಧಾರ ಮಾಡುವ ಸ್ಥಳೀಯ ಸಂಶೋಧಕರನ್ನು, ಕಲೆ-ಸಾಹಿತ್ಯವನ್ನು ಪೋಷಿಸುವ ಚಿಂತಕರನ್ನು ಮತ್ತು ರಾಷ್ಟ್ರದ ಬಗ್ಗೆ, ಅದರ ಪರಂಪರೆಯ ಬಗ್ಗೆ ಅಚಲವಾದ ಹೆಮ್ಮೆ ಹೊಂದಿರುವ ನಿಜವಾದ ಯುವ ನಾಯಕರನ್ನು ನಮ್ಮ ಸಂಸ್ಥೆಗಳು ರೂಪಿಸುವಂತೆ ಶೈಕ್ಷಣಿಕ ವ್ಯವಸ್ಥೆಯನ್ನು ನಾವು ಸಂಪೂರ್ಣವಾಗಿ ಶುದ್ಧೀಕರಿಸಬೇಕಾಗಿದೆ. ಈ ಬೌದ್ಧಿಕ ಸಮರದಲ್ಲಿ ನಾವು ಗೆಲ್ಲಲೇಬೇಕು, ಇಲ್ಲವಾದಲ್ಲಿ ಭಾರತದ ಆತ್ಮವೇ ನಶಿಸಿಹೋಗುತ್ತದೆ.

(ಲೇಖಕರು ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮೂಲ ಆಶಯಕ್ಕೆ ಧಕ್ಕೆ

ಗದಗ ತಾಲೂಕಿನ ತಿಮ್ಮಾಪುರ ಗ್ರಾಮದ 800ಕ್ಕೂ ಹೆಚ್ಚು ಮಹಿಳೆಯರು ತಮಗೆ ಬಂದ ಒಂದು ತಿಂಗಳ 'ಗೃಹಲಕ್ಷ್ಮಿ' ಯೋಜನೆಯ ಹಣವನ್ನು ಗ್ರಾಮದ ರೇಣುಕಾ ಯಲ್ಲಮ್ಮ ದೇವಸ್ಥಾನದ ನಿರ್ಮಾಣಕ್ಕೆ ದೇಣಿಗೆ ನೀಡಲು ತೀರ್ಮಾನಿಸಿರುವುದು ವರದಿಯಾಗಿದೆ. ಮಹಿಳೆಯರಿಗೆ ಅನುಕೂಲವಾಗಲೆಂದು, ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೆ ತರಲಾಗಿದೆಯಲ್ಲವೇ? ಈ ಹಣವನ್ನು ಮಹಿಳೆಯರು ತಮ್ಮ ಸಂಕಷ್ಟಗಳ ನಿವಾರಣೆಗೆ ಅಥವಾ ಜೀವನ ನಿರ್ವಹಣೆಗೆ ವಿನಿಯೋಗಿಸದೆ ಹೀಗೆ ದೇಗುಲಕ್ಕೆ ದೇಣಿಗೆ ನೀಡುವುದು ಎಷ್ಟು ಸರಿ? ಇದರಿಂದ ಯೋಜನೆಯ ಮೂಲ ಆಶಯಕ್ಕೆ ಧಕ್ಕೆಯಾಗುವುದಿಲ್ಲವೇ? ಇದು ಜನರ ತೆರಿಗೆ ಹಣವಾಗಿರುವುದರಿಂದ ಅದನ್ನು ಬಳಸುವಾಗ ವಿವೇಚನೆ ಅಗತ್ಯ. ಚೋದ್ಯವೆಂದರೆ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, 'ಈ ಧನವು ತಾಯಂದಿರ ಭಕ್ತಿಯ ಮೂಲಕ ಧಾರ್ಮಿಕ ಕಾರ್ಯಕ್ಕೂ ವಿನಿಯೋಗವಾಗುತ್ತಿರುವುದು ಹೆಮ್ಮೆಯ ಸಂಗತಿ' ಎಂದು ಶ್ಲಾಘಿಸಿರುವುದರ ಜತೆಗೆ ಅಭಿನಂದನಾ ಪತ್ರವನ್ನೂ ಕಳಿಸಿದ್ದಾರಂತೆ! ಇದು ಸರಿಯೇ? ಅಂಥ ಧಾರ್ಮಿಕ ಕಾರ್ಯಕ್ಕೆ ಬಳಸಲು ಶಾಸಕರ/ಸಂಸದರ ನಿಧಿ ಇರುತ್ತದೆ, ಅದನ್ನು ಬಳಸಿಕೊಳ್ಳಲಿ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉಚಿತವೂ ಆಮಿಷವಲ್ಲವೇ?

ಚುನಾವಣೆಗೂ ಮುನ್ನ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಕೊಡುಗೆಗಳು ದೇಶದ ಅಭಿವೃದ್ಧಿಗೆ ಅಡ್ಡಿಯಾಗಿ ಆರ್ಥಿಕತೆಗೆ ಮಾರಕವಾಗುತ್ತವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಟೀಕಿಸಿರುವುದು ಸಕಾಲಿಕವಾಗಿದೆ. ಕೊಳ್ಳುವ ಸಾಮರ್ಥ್ಯ ಉಳ್ಳವರಿಗೂ ಉಚಿತ ಕೊಡುಗೆಗಳನ್ನು ಕೊಡುವುದು ಮತದಾರರ ತುಷ್ಟೀಕರಣವಾಗುವುದಲ್ಲದೆ ಉದ್ಯೋಗ ಸೃಷ್ಟಿಗೆ ಮಾರಕವಾಗುತ್ತದೆ ಎಂದು ಅವರು ಕಿಡಿಕಾರಿದ್ದಾರೆ. ಉಚಿತ ಕೊಡುಗೆಗಳ ನೀಡಿಕೆಯಿಂದ ಸೃಷ್ಟಿಯಾಗುವ ಆರ್ಥಿಕ ಹೊರೆಯಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ದುಡ್ಡಿಲ್ಲದೆ ಅವು ಕುಂಠಿತವಾಗಿವೆ. ಇದರಿಂದಾಗಿ ಜನರು ಅಸಮಾಧಾನಗೊಂಡಿದ್ದಾರೆ. ಇದನ್ನೆಲ್ಲಾ ಪರಿಗಣಿಸಿಯಾದರೂ ಚುನಾವಣಾ ಆಯೋಗವು ಪಕ್ಷಗಳ ಉಚಿತ ಕೊಡುಗೆಗಳ ಘೋಷಣೆಯನ್ನು ನಿಷೇಧಿಸುವ ನಿಷ್ಠುರ ನಿರ್ಧಾರವನ್ನು ಕೈಗೊಳ್ಳಲಿ.

- ಸತ್ಯಬೋಧ, ಬೆಂಗಳೂರು

ರೈತ ಯಾವಾಗ ಮುಕ್ತ?

ಕಿಸಾನ್ ಸಮ್ಮಾನ್ ಯೋಜನೆಯಡಿ 'ಇ-ಕೆವೈಸಿ' ಮತ್ತು 'ಸೆಂಟ್ರಲ್ ಐ.ಡಿ' ಪಡೆಯಲು ರೈತರು ಎದುರಿಸುತ್ತಿರುವ ತಾಂತ್ರಿಕ ಸಂಕಷ್ಟಗಳು ದಿನೇ ದಿನೆ ಹೆಚ್ಚಾಗುತ್ತಿವೆ. ಡಿಜಿಟಲೀಕರಣವು ಪಾರದರ್ಶಕತೆಯನ್ನು ತರಬೇಕೇ ಹೊರತು ಅನ್ನದಾತನಿಗೆ ತಲೆನೋವಾಗಬಾರದು. ಒಬ್ಬ ರೈತ ನಾಲ್ಕು ಬಾರಿ ಒಟಿಪಿ ಪಡೆಯಬೇಕಾದ ಅನಿವಾರ್ಯತೆ ಇರುವುದು ಮತ್ತು ಪದೇ ಪದೆ ಸರ್ವರ್ ಕೈಕೊಡುತ್ತಿರುವುದು ವ್ಯವಸ್ಥೆಯ ವೈಫಲ್ಯವೇ ಸರಿ. ಗ್ರಾಮೀಣ ಭಾಗದಲ್ಲಿ ಇಂದಿಗೂ ಶೇ.60ರಷ್ಟು ನೆಟ್‌ವರ್ಕ್ ಸಮಸ್ಯೆ ಇರುವುದರಿಂದ ಇಂಥ ಸಂಕೀರ್ಣ ಪ್ರಕ್ರಿಯೆಗಳು ರೈತರನ್ನು ಹೈರಾಣಾಗಿಸುತ್ತಿವೆ. ಸರಕಾರವು ಈ ಕೂಡಲೇ ಸರ್ವರ್ ಸಾಮರ್ಥ್ಯವನ್ನು ಹೆಚ್ಚಿಸಿ ಗಡುವನ್ನು ಮತ್ತಷ್ಟು ವಿಸ್ತರಿಸಬೇಕು. ಕೇವಲ ಒಟಿಪಿ ಬದಲಿಗೆ ಬಯೋಮೆಟ್ರಿಕ್ ಅಥವಾ ಗ್ರಾಮ ಪಂಚಾಯಿತಿ ಮಟ್ಟದ ವಿಶೇಷ ಶಿಬಿರಗಳ ಮೂಲಕ ದಾಖಲೆಯನ್ನು ದೃಢೀಕರಿಸುವ ಪರ್ಯಾಯ ಮಾರ್ಗವನ್ನು ಅನುಸರಿಸುವುದು ಉತ್ತಮ. ತಂತ್ರಜ್ಞಾನವು ಸೌಲಭ್ಯಗಳಿಗೆ ಸೇತುವೆ ಆಗಬೇಕೇ ಹೊರತು ತಡೆಗೋಡೆ ಆಗಬಾರದು. ಕೃಷಿ ಇಲಾಖೆಯು ಈ ಕೂಡಲೇ ಮಧ್ಯ ಪ್ರವೇಶಿಸಿ, ಸುಗಮ ವ್ಯವಸ್ಥೆಯನ್ನು ಕಲ್ಪಿಸಲಿ.

- ಡಾ.ವಿಜಯಕುಮಾರ ಎಚ್.ಕೆ., ರಾಯಚೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:46

ಸಮಾಚಾರ ಸಣ್ಣದಲ್ಲ

ಯುಗಾದಿಗೆ ಶ್ರೀಶೈಲ ಸ್ಪರ್ಶ ದರ್ಶನ ಭಾಗ್ಯ

ಶ್ರೀಶೈಲ: ಆಂಧ್ರಪ್ರದೇಶದಲ್ಲಿನ ಪ್ರಸಿದ್ಧ ಕ್ಷೇತ್ರವಾದ ಶ್ರೀಶೈಲದಲ್ಲಿ ಮಾ.16ರಿಂದ 20ರವರೆಗೆ ಯುಗಾದಿ ಮಹೋತ್ಸವ ಆಚರಣೆ ನಡೆಯಲಿದೆ. ಉತ್ಸವಕ್ಕೂ



ಮುಂಚೆ ಮಾ.6ರಿಂದ 15ರವರೆಗೆ ನಿತ್ಯವೂ ನಿರ್ದಿಷ್ಟ ಸಮಯಗಳಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಸ್ಪರ್ಶ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಸ್ಪರ್ಶ ದರ್ಶನ ಟಿಕೆಟ್‌ಗೆ 500 ರು. ಶುಲ್ಕ ನಿಗದಿಪಡಿಸಲಾಗಿದೆ. 500 ಟಿಕೆಟ್ ಆನ್‌ಲೈನ್‌ನಲ್ಲಿ ಲಭ್ಯವಿರುತ್ತವೆ. ಸ್ಪರ್ಶ ದರ್ಶನಕ್ಕೆ ಮನಮಿತ್ರ ಅವರ ವಾಟ್ಸಾಪ್ ಗವರ್ನೆನ್ಸ್ 8552300009 ಮೂಲಕ ಟಿಕೆಟ್ ಪಡೆಯಬಹುದಾಗಿದೆ. ಮಾ.16ರಿಂದ 20ರವರೆಗೆ ಎಲ್ಲಾ ಭಕ್ತರಿಗೂ ಶ್ರೀಮಲ್ಲಿಕಾರ್ಜುನ ಸ್ವಾಮಿಯ ಅಲಂಕಾರದ ದರ್ಶನ ಅವಕಾಶವಿರಲಿದೆ. ಆದರೆ, ಹಬ್ಬದ ದಿನ ಸ್ಪರ್ಶ ದರ್ಶನ ಅವಕಾಶವಿರುವುದಿಲ್ಲ. ಯುಗಾದಿ ಹಬ್ಬದ ವೇಳೆ 8 ಲಕ್ಷ ಭಕ್ತರು ಆಗಮನ ನಿರೀಕ್ಷೆ ಇದೆ ಎಂದು ಧರ್ಮದರ್ಶಿ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

19 ಕೆಜಿ ಸಿಲಿಂಡರ್ ದರ 31 ರು. ಇಳಿಕೆ

ದೆಹಲಿ: ಇರಾನ್ ವಿರುದ್ಧ ಇಸ್ರೇಲ್-ಅಮೆರಿಕ ಜಂಟಿಯಾಗಿ ಯುದ್ಧ ಆರಂಭಿಸಿವೆ. ಪೆಟ್ರೋಲ್

-ಡೀಸೆಲ್ ದರ ಏರಿಕೆ ಆಗಬಹುದು ಎಂಬ ಆತಂಕ ಎದುರಾಗಿರುವಾಗಲೇ ಭಾರತದಲ್ಲಿ ಅಚ್ಚರಿ ಎಂಬಂತೆ 19 ಕಿಲೊ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಭಾರಿ ಇಳಿಕೆಯಾಗಿದೆ. ಸರಕಾರಿ ಒಡೆತನದ ತೈಲೋತ್ಪನ್ನ ಕಂಪನಿಗಳು ವಾಣಿಜ್ಯ ಬಳಕೆ(19 ಕೆಜಿ) ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ವಿವಿಧ ನಗರಗಳಲ್ಲಿ ಕನಿಷ್ಠ 28ರಿಂದ ಗರಿಷ್ಠ 31 ರು. ಗಳವರೆಗೂ ಇಳಿಕೆ ಮಾಡಿವೆ. ಹೊಸ ದರ ಭಾನುವಾರದಿಂದಲೇ ಜಾರಿಗೆ ಬಂದಿವೆ. ದೆಹಲಿಯಲ್ಲಿ 19 ಕೆಜಿ ಎಲ್‌ಪಿಜಿ ಸಿಲಿಂಡರ್ ದರ 28 ರು. ಕಡಿಮೆಯಾಗಿ 1740.5 ರು.ಗೆ ಇಳಿಕೆಯಾಗಿದೆ. ಕೋಲ್ಕತ್ತ 31 ರು.,(1844.50 ರು.) ಮುಂಬೈ ಮತ್ತು ಚೆನ್ನೈನಲ್ಲಿ ಕ್ರಮವಾಗಿ 28.50 ಮತ್ತು 29.50 ರು. ದರ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 19 ಕೆಜಿ ಸಿಲಿಂಡರ್ ಬೆಲೆ 1841 ರು.ಗೆ ತಗ್ಗಿದೆ.

ಉದಯ ಭಾನು ಜಾಮೀನಿಗೆ ತಡೆ

ದಹಲಿ: ದೆಹಲಿಯಲ್ಲಿ ಫೆ.20ರಂದು ಎಐ ಇಂಪ್ಯಾಕ್ಟ್ ಶೃಂಗಸಭೆಯ ಸಮಾರೋಪ ವೇಳೆ ವೇದಿಕೆಗೆ ನುಗ್ಗಿದ ಯುವ ಕಾಂಗ್ರೆಸ್‌ನ 11 ಪದಾಧಿಕಾರಿಗಳು ಅಂಗಿ ಕಳಚಿ

ಅರೆಬೆತ್ತಲೆ ಪ್ರತಿಭಟನೆ ನಡೆಸಿದ್ದಕ್ಕೆ ಸಂಬಂಧಿಸಿ ಭಾರತೀಯ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯಭಾನು ಚಿಬ್ ಸೇರಿದಂತೆ ವಿವಿಧ ರಾಜ್ಯಗಳ 13 ಪದಾಧಿಕಾರಿಗಳು ಸದ್ಯ ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ಈ ಮಧ್ಯೆ, ಉದಯಭಾನುವಿಗೆ ನೀಡಲಾಗಿದ್ದ ಮಧ್ಯಂತರ ಜಾಮೀನಿಗೆ ದೆಹಲಿಯ ಪಟಿಯಾಲ ಹೌಸ್ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ತಿಹಾರ್ ಸೆರೆಮನೆಗೆ ಕಳುಹಿಸಿದೆ. ಮುಂದಿನ ವಿಚಾರಣೆ ಮಾ.6ರಂದು ಪಟಿಯಾಲ ಹೌಸ್ ನ್ಯಾಯಾಲಯದಲ್ಲಿ ನಡೆಯಲಿದೆ.

ತೈಲನೌಕೆಗೆ ದಾಳಿ: 15 ಭಾರತೀಯರ ರಕ್ಷಣೆ

ಟೆಹರಾನ್: ಅಯತೊಲ್ಲ ಅಲಿ ಖಮೇನಿ ಅವರ ಹತ್ಯೆಗೆ ಪ್ರತೀಕಾರಕ್ಕೆ ಮುಂದಾಗಿರುವ ಇರಾನ್, ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳು, ವಿಮಾನಗಳ ಮೇಲೆ ದಾಳಿ ನಡೆಸುತ್ತಿದೆ. ಇರಾನ್ ದಾಳಿಯ ಅಪಾಯವಿದ್ದರೂ ಒಮಾನ್ ಬಂದರು ಮತ್ತು ಕರಾವಳಿ ಬಳಿ ಹಾರ್ಮುಜ್ ಜಲಸಂಧಿಯಲ್ಲಿ ಸಾಗುತ್ತಿದ್ದ 'ಸ್ಕೈಲೈಟ್' ಹೆಸರಿನ ತೈಲ ಸಾಗಣೆ ನೌಕೆ ಮೇಲೆ ಭಾನುವಾರ ಬಾಂಬ್ ದಾಳಿ ನಡೆದಿದೆ. ಪರಿಣಾಮ ಪಲವ್ ಗಣರಾಜ್ಯದ ಧ್ವಜ ಹೊಂದಿದ್ದ ತೈಲ ಸಾಗಣೆ ನೌಕೆಗೆ ಬೆಂಕಿ ಹೊತ್ತಿಕೊಂಡಿದೆ. ಅದರಲ್ಲಿ 15 ಭಾರತೀಯರು ಮತ್ತು ಐವರು ಇರಾನ್ ಸಿಬ್ಬಂದಿಗಳಿದ್ದರು. ಅವರಲ್ಲಿ ನಾಲ್ವರು ಗಾಯಗೊಂಡಿದ್ದಾರೆ. ಉಳಿದ 16 ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ಅಧಿಕೃತ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ. ಹಾರ್ಮುಜ್ ಜಲಸಂಧಿ(ಸಮುದ್ರ ಮಾರ್ಗ) ಬಹಳ ಕಿರಿದಾಗಿದೆ. ಪರ್ಷಿಯಲ್ ಕೊಲ್ಲಿಯಿಂದ ಆರಂಭವಾಗಿ ಓಮನ್ ಕೊಲ್ಲಿ ಮತ್ತು ಅರೇಬಿಯನ್ ಸಮುದ್ರವನ್ನು ಹಾದು ಹೋಗುವ ಮಾರ್ಗವಾಗಿದೆ.

11 ದೇಶಗಳ ವಾಯು ಪ್ರದೇಶವನ್ನು ಬಳಸದಿರಿ

ದೆಹಲಿ: ಇರಾನ್, ಸೌದಿ ಅರೇಬಿಯ, ಯುಎಇ ಸೇರಿದಂತೆ 11 ದೇಶಗಳ ವಾಯು ಪ್ರದೇಶವನ್ನು ಮಾ.2ರವರೆಗೂ ಬಳಸದಂತೆ ಭಾರತದ ವಿಮಾನಯಾನ ಸಂಸ್ಥೆಗಳಿಗೆ 'ಡಿಜಿಸಿಎ' ಸಲಹೆ ನೀಡಿದೆ. ಇರಾನ್ ಮೇಲೆ ಇಸ್ರೇಲ್-ಅಮೆರಿಕ ಜಂಟಿ ದಾಳಿ, ಮತ್ತೊಂದೆಡೆ ಇರಾನ್‌ನಿಂದ ನೆರೆಹೊರೆ ದೇಶಗಳಾದ ಯುಎಇ, ಸೌದಿ ಅರೇಬಿಯ, ಬಹ್ರೇನ್, ಒಮಾನ್, ಇರಾಕ್, ಜೋರ್ಡಾನ್, ಕುವೈತ್ ಮತ್ತು ಕತಾರ್ ಮೇಲೆ ಕ್ಷಿಪಣಿ ದಾಳಿ ನಡೆಯುತ್ತಿರುವುದರಿಂದ ಈ ದೇಶಗಳ ವಾಯು ಪ್ರದೇಶಗಳಲ್ಲಿ ವಿಮಾನಗಳ ಸಂಚಾರ ನಡೆಸದಂತೆ ಸೂಚನೆ ನೀಡಿದೆ. ಅಂತಾರಾಷ್ಟ್ರೀಯ ಸುರಕ್ಷತಾ ಮಾನದಂಡ ಮತ್ತು ಯುರೋಪ್ ಒಕ್ಕೂಟದ 'ಏವಿಯೇಷನ್ ಸೇಫ್ಟಿ ಏಜೆನ್ಸಿ'ಯ ಸಂಘರ್ಷ ವಲಯ ಮಾಹಿತಿ ಆಧರಿಸಿ ಮುನ್ಸೂಚನೆ ನೀಡಲಾಗಿದೆ ಎಂದು ಡಿಜಿಸಿಎ ಭಾನುವಾರ ತಿಳಿಸಿದೆ.

ಟೆಹರಾನ್ ನಗರದ ಇಂಘೆಲಾಬ್ ವೃತ್ತದಲ್ಲಿ ಶೋಕಾಚರಣೆ, ಐತಿಹಾಸಿಕ ನಗರ ಇಸ್ಫಹಾನ್‌ನಲ್ಲಿ ಲಕ್ಷಾಂತರ ಜನರ ಕಂಬನಿ | ಎದೆ ಬಡಿದುಕೊಂಡು, ಬಿಕ್ಕಿ ಅತ್ತ ಜನ

ಖಮೇನಿ ಸಾವಿಗೆ ಇರಾನ್ ಶೋಕ

ಟೆಹರಾನ್: ದೇಶವನ್ನು 37 ವರ್ಷಗಳ ಕಾಲ ಆಳಿದ, ಷಿಯಾ ಮುಸ್ಲಿಂ ಪಂಗಡದ ಪರಮೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿ, ಇಸ್ಲಾಮಿಕ್ ರಿಪಬ್ಲಿಕ್ ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿಯಾಗಿ ಶನಿವಾರ ನಡೆಸಿದ ದಾಳಿಯಲ್ಲಿ ಕುಟುಂಬ ಸಮೇತ ಹತರಾಗಿದ್ದಾರೆ. ಧಾರ್ಮಿಕ ಮುಖಂಡ, ದೇಶದ ಆಡಳಿತಗಾರ ಇಲ್ಲವಾಗಿರುವುದಕ್ಕೆ ಇರಾನ್‌ನ ಹಲವೆಡೆ ಶೋಕಾಚರಣೆ ನಡೆದಿದೆ. ದೇಶದ ಸರಕಾರ 40 ದಿನಗಳ ಶೋಕಾಚರಣೆಗೆ ಪ್ರಕಟಣೆ ಹೊರಡಿಸಿದೆ.

ಖಮೇನಿ ಹತ್ಯೆ ಖಂಡಿಸಿ ಮತ್ತು ಶೋಕಾಚರಣೆಗಾಗಿ ಟೆಹರಾನ್ ಸೇರಿದಂತೆ ಇರಾಕ್‌ನ ವಿವಿಧ ನಗರಗಳಲ್ಲಿ ಲಕ್ಷಾಂತರ ಜನರು ಬೀದಿಗಿಳಿದು ಕಂಬನಿ ಮಿಡಿದಿದ್ದಾರೆ, ಖಮೇನಿ ಪರ ಘೋಷಣೆ ಕೂಗುತ್ತಿದ್ದಾರೆ.

ಖಮೇನಿ ಅವರಿಗೆ ಗೌರವ ಸಲ್ಲಿಸಲು ಲಕ್ಷಾಂತರ ಶೋಕತಪ್ತರು ಟೆಹರಾನ್‌ನ ಇಂಘೆಲಾಬ್(ಕ್ರಾಂತಿ) ವೃತ್ತದಲ್ಲಿ ಭಾನುವಾರ ನೆರೆದು ಕಂಬನಿ ಮಿಡಿದಿದ್ದಾರೆ. ಹಿರಿಯ ನಾಗರಿಕರು, ಯುವಕರು ತಮ್ಮ ವಯಸ್ಸು, ಸ್ಥಾನ-ಮಾನ ಎಲ್ಲವನ್ನೂ ಮರೆತು, ಎದೆ ಬಡಿದುಕೊಂಡು, ಅಕ್ಷರಶಃ ಬಿಕ್ಕಿಬಿಕ್ಕಿ ಅತ್ತಿದ್ದಾರೆ. ಬುರ್ಖಾಧಾರಿ ಮಹಿಳೆಯರೂ ಖಮೇನಿ ಅವರ ಚಿತ್ರಪಟವನ್ನು ಎದೆಗವಚಿ ಹಿಡಿದು ಕಣ್ಣೀರು ಸುರಿಸಿದ್ದಾರೆ.

ಮತ್ತೊಂದೆಡೆ, ಐತಿಹಾಸಿಕ ನಗರ ಇಸ್ಫಹಾನ್‌ನಲ್ಲಿ ಭಾನುವಾರ ನೆರೆದು ಕಂಬನಿ ಹರಿಸಿದ್ದಾರೆ. ಷಿಯಾ ಸಮುದಾಯದ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರಿಗೆ ಗೌರವ ಸಲ್ಲಿಸಿದ್ದಾರೆ.

ಇರಾನ್‌ನ ರಾಜಧಾನಿ ನಗರದಲ್ಲಿನ ಇಂಘೆಲಾಬ್ ವೃತ್ತದಲ್ಲಿ ಲಕ್ಷಾಂತರ ಜನರು ಭಾನುವಾರ ನೆರೆದು ಶೋಕಾಚರಣೆ ನಡೆಸಿದರು.

ಹಿರಿತನ, ವಯಸ್ಸು, ಸ್ಥಾನ-ಮಾನ ಮರೆತು ಬಿಕ್ಕಿ ಬಿಕ್ಕಿ ಅಳುತ್ತಿರುವ ಇರಾನ್ ಜನತೆ.

ಅಮೆರಿಕ ಕಚೇರಿಗೆ ಬೆಂಕಿ: 10 ದಾಳಿಕೋರರಿಗೆ ಗುಂಡು

ಪಾಕಿಸ್ತಾನದ ಕರಾಚಿಯಲ್ಲಿನ ಅಮೆರಿಕ ಧೂತವಾಸದ ಮೇಲೆ ನೂರಾರು ಯುವಕರಿದ್ದ ಉದ್ರಿಕ್ತ ಗುಂಪು ಕಬ್ಬಿಣದ ಸಲಾಕೆಗಳನ್ನು ಬಳಸಿ ದಾಳಿ ನಡೆಸಿದೆ. ಕಿಟಕಿ ಗಾಜುಗಳನ್ನು ಒಡೆದು ಚೂರು ಮಾಡಿದೆ. ಕಡೆಗೆ ಕಚೇರಿಗೆ ಬೆಂಕಿ ಹಚ್ಚಿದೆ. ತಕ್ಷಣವೇ ಮಧ್ಯಪ್ರವೇಶ ಮಾಡಿದ ಪೊಲೀಸರು ಮತ್ತು ಅರೆಸೇನಾಪಡೆಗಳನ್ನು ಒಳಗೊಂಡ ಭದ್ರತಾ ಪಡೆಗಳ ದೊಡ್ಡ ತಂಡ, ಉದ್ರಿಕ್ತ ಗುಂಪನ್ನು ಚದುರಿಸಲು ಗೋಲಿಬಾರ್ ನಡೆಸಿವೆ. ಈ ಸಂದರ್ಭ ಅಮೆರಿಕ ಕಚೇರಿ ಮೇಲಿನ ದಾಳಿಕೋರರಲ್ಲಿ 10 ಯುವಕರು ಹತರಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಕರಾಚಿಯಲ್ಲಿನ ಅಮೆರಿಕ ರಾಯಭಾರ ಕಚೇರಿ ಮೇಲೆ ಪಾಕ್ ಜನರ ದಾಳಿ, ಕಚೇರಿಗೆ ಬೆಂಕಿ.

ಅಲಿ ಖಮೇನಿ ಹತ್ಯೆ ಖಂಡಿಸಿ ಭಾರತದಲ್ಲೂ ಪ್ರತಿಭಟನೆ

ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿ ಅವರನ್ನು ಅಮೆರಿಕ-ಇಸ್ರೇಲ್ ಹತ್ಯೆ ಮಾಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿ ಭಾರತ, ಪಾಕಿಸ್ತಾನ, ಇರಾನ್ ಮೊದಲಾದೆಡೆ ಭಾರೀ ಪ್ರತಿಭಟನೆಗಳು ನಡೆದಿವೆ. ಭಾರತದ ಜಮ್ಮು-ಕಾಶ್ಮೀರ, ಪಾಕ್‌ನ ಕರಾಚಿ ಮೊದಲಾದೆಡೆ ಖಮೇನಿ ಸಾವಿಗೆ ಶೋಕ ವ್ಯಕ್ತಪಡಿಸುತ್ತಿರುವ ಮುಸ್ಲಿಂ ಸಮುದಾಯ, ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದೆ. ಜಮ್ಮು-ಕಾಶ್ಮೀರದ ರಾಜಧಾನಿ ನಗರ ಶ್ರೀನಗರದಲ್ಲಿನ ಲಾಲ್ ಚೌಕ್‌ನಲ್ಲಿ ಭಾನುವಾರ ಬೆಳಗ್ಗೆ ದೊಡ್ಡ ಸಂಖ್ಯೆಯಲ್ಲಿ ನೆರೆದ ಮುಸ್ಲಿಂ ಷಿಯಾ ಸಮುದಾಯದವರು ಖಮೇನಿ ಫೋಟೊ ಹಿಡಿದು ಕಂಬನಿ ಮಿಡಿದರು. ನೌಹಾ ಪಠಿಸುತ್ತಾ ಸಾಂಪ್ರದಾಯಿಕವಾಗಿ ಶೋಕಾಚರಣೆ ನಡೆಸಿದರು. ಯುವಕರು ಅಮೆರಿಕ-ಇಸ್ರೇಲ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಬದ್ಗಾಂನಲ್ಲಿ ನೂರಾರು ಜನರು ಖಮೇನಿ ಫೋಟೊ ಹಿಡಿದು ಘೋಷಣೆ ಮೊಳಗಿಸುತ್ತಾ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಸೋನಾವರಿ ಮತ್ತು ಬಂಡಿಪೋರಾದಲ್ಲಿಯೂ ಪ್ರತಿಭಟನೆಗಳು ನಡೆದಿವೆ. ಈ ಮಧ್ಯೆ, ಇರಾನ್‌ನಲ್ಲಿನ ಸರಕಾರ ಸವೋಚ್ಚ ನಾಯಕ ಖಮೇನಿ ಸಾವಿಗೆ ಕಬನಿ ಮಿಡಿದಿದ್ದು, 40 ದಿನಗಳ ಶೋಕಾಚರಣೆ ಘೋಷಿಸಿದೆ.

ಬದ್ಗಾಂನಲ್ಲಿ ಸಾವಿರಾರು ಜನರು ಮೆರವಣಿಗೆ ನಡೆಸಿದರು.

ಖಮೇನಿ ಸಾವಿನ ಬಳಿಕ ಮಧ್ಯಂತರ ನಾಯಕತ್ವ ಸಮಿತಿಗೆ ಅಲಿರೆಜಾ ಅರಾಫಿ ನೇಮಕ | ಖಮೇನಿ ಪುತ್ರ ಮೊಜ್ತಬಾ ಖಮೇನಿ, ಮೊಹಮ್ಮದಿ ಗೊಲ್ಪಾಯೇಗನಿ, ಅಲಿ ಅಸ್ಗರ್ ಹೆಜಾಜಿ ಹೆಸರುಗಳೂ ಚಾಲ್ತಿಗೆ

ಖಮೇನಿ ಉತ್ತರಾಧಿಕಾರಿ?

ವಾಷಿಂಗ್ಟನ್: ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಶನಿವಾರ ಇಡೀ ದಿನ ನಡೆಸಿದ ಕ್ಷಿಪಣಿ-ಬಾಂಬ್ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲ ಅಲಿ ಖಮೇನಿ ಹತರಾದರು. ಈ ಸುದ್ದಿಯನ್ನು ಮೊದಲಿಗೆ 'ಟ್ರೂಥ್' ಖಾತೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದರು. ಬಳಿಕ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಪ್ರಕಟಿಸಿದರು. ಬಳಿಕ ಇರಾನ್ ಮಾಧ್ಯಮಗಳೂ ಖಚಿತಪಡಿಸಿವೆ.

ಅಮೆರಿಕ-ಇಸ್ರೇಲ್ ಜಂಟಿಯಾಗಿ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯಾಗಿರುವುದರಿಂದ ಮಧ್ಯಪ್ರಾಚ್ಯ ರಾಜಕೀಯದಲ್ಲಿ ದೊಡ್ಡ ನಿರ್ವಾತ ಉಂಟಾಗಿದೆ. ಖಮೇನಿ ಹತರಾಗಿರುವುದರಿಂದ ಇರಾನ್ ದೇಶಾದ್ಯಂತ 40 ದಿನಗಳ ಶೋಕಾಚರಣೆ ಘೋಷಣೆಯಾಗಿದೆ. ದೇಶದ ಭವಿಷ್ಯ, ಮುಂದಿನ ನಾಯಕ ಯಾರು? ಎಂಬ ಬಗ್ಗೆ ಹಲವು ಪ್ರಶ್ನೆಗಳು ಮೂಡಿದೆ.

ಖಮೇನಿ ಅವರು ತಮ್ಮ ಜೀವಿತ ಕಾಲದಲ್ಲಿ ಉತ್ತರಾಧಿಕಾರಿಯ ಹೆಸರನ್ನು ಸಾರ್ವಜನಿಕವಾಗಿ ಪ್ರಕಟಿಸಿಲ್ಲ. ಆದ್ದರಿಂದ, ದೇಶದ ಧಾರ್ಮಿಕ ಮತ್ತು ರಾಜಕೀಯ ಸ್ಥಾಪನೆಯ ಮೇಲೆ ಯಾರು ನಿಯಂತ್ರಣ ಸಾಧಿಸಲಿದ್ದಾರೆ? ಎಂಬುದೇ ಅನಿಶ್ಚಿತವಾಗಿದೆ.

ಸದ್ಯ ಇರಾನ್ ಆಡಳಿತಕ್ಕೆ ಹೊಸ ನಾಯಕನಿಗಾಗಿ ಹುಡುಕಾಟ ಶುರುವಾಗಿದೆ. ಇರಾನ್‌ನ ಸುಪ್ರೀಂ ನಾಯಕನ ಸ್ಥಾನಕ್ಕೆ ಖಮೇನಿಯ 2ನೇ ಪುತ್ರ, ಆಪ್ತ ಶಿಷ್ಯ ಸೇರಿದಂತೆ ನಾಲ್ವರ ಹೆಸರು ಮುನ್ನೆಲೆಗೆ ಬಂದಿದೆ. ನಾಯಕನ ಆಯ್ಕೆಯಾದರೆ ಮುಂದಿನ ಸವಾಲುಗಳೇನು ಎಂಬ ಬಗೆಗೂ ಮಾತುಕತೆ ನಡೆಯುತ್ತಿದೆ.

ಕೆಲ ವರದಿಗಳ ಪ್ರಕಾರ, ಖಮೇನಿ ತಮ್ಮ ಸಾವು ಸಮೀಪಿಸಿದ ಎನಿಸಿದ ಸಂದರ್ಭ ಉತ್ತರಾಧಿಕಾರಿ ಬಗ್ಗೆ ಸ್ಪಷ್ಟ ಯೋಜನೆ ರೂಪಿಸಿದ್ದರು, ಆದರೆ ಆ ವ್ಯಕ್ತಿಗಳೂ ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಸಾವನ್ನಪ್ಪಿರಬಹುದು ಎಂದು ಹೇಳಲಾಗುತ್ತಿದೆ. ಸದ್ಯ ಉತ್ತರಾಧಿಕಾರಿ ಸ್ಥಾನಕ್ಕೆ ಕೇಳಿಬರುತ್ತಿರುವ ಹೆಸರುಗಳಲ್ಲಿ ಕೆಲವು ಇಲ್ಲಿವೆ.

ಮೊಜ್ತಬಾ ಖಮೇನಿ: ಇರಾನ್ ಸರ್ವೋಚ್ಚ ನಾಯಕನಾಗಿದ್ದ ಖಮೇನಿ ಅವರ 2ನೇ ಪುತ್ರ ಮೊಜ್ತಬಾ ಖಮೇನಿ ದೇಶದ ಆಡಳಿತದ ಮೇಲೆ ಪ್ರಬಲ ಹಿಡಿತ ಹೊಂದಿದ್ದಾರೆ. ಆದರೆ ಖಮೇನಿ ಅವರ ಉತ್ತರಾಧಿ ಕಾರಿಯಾಗಿ ಮೊಜ್ತಬಾ ನೇಮಕ ಗೊಳ್ಳುವ ಬಗ್ಗೆ ಸಾಕಷ್ಟು ಅನುಮಾನಗಳು ಮೂಡಿವೆ. ಥಿಯೋ ಲಾಜಿಕಲ್ ಶಾಸ್ತ್ರ ಹೊಂದಿಲ್ಲ ಎಂಬ ಟೀಕೆಯೂ ಕೇಳಿಬಂದಿದೆ. ಆದರೆ ಖಮೇನಿ ಅವರು ಮಗ ಮೊಜ್ತಬಾರನ್ನು ತಮ್ಮ ನಂತರದಲ್ಲಿ ಇರಾನ್ ಮುಂದಿನ ನಾಯಕನಾಗಿ ರೂಪಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದರು ಎನ್ನಲಾಗುತ್ತಿದೆ.

ಗೊಲ್ಪಾಯೇಗನಿ: ಖಮೇನಿಯ ಎಲ್ಲಾ ವ್ಯವಹಾರಗಳನ್ನೂ 1989ರಿಂದ ನೋಡಿಕೊಳ್ಳುತ್ತಿರುವ ಹೊಜಾತೊಲೆಸ್ಲಾಮ್ ಮೊಹಮ್ಮದ್ ಮೊಹಮ್ಮದಿ ಗೊಲ್ಪಾಯೇಗನಿ, ಖಮೇನಿ ಆಪ್ತ ವಲಯದಲ್ಲಿ ಅತ್ಯಂತ ನಂಬಿಕಾರ್ಹ ವ್ಯಕ್ತಿ. ಸರ್ವೋಚ್ಚ ನಾಯಕನ ಸೇನಾ ಸಿಬ್ಬಂದಿಗಳ ಮುಖ್ಯಸ್ಥ. ಅಲ್ಲದೇ ಶಿಯಾ ಇಸ್ಲಾಮಿಕ್ ವಿದ್ವಾಂಸ, ಪರ್ಷಿಯನ್ ಕವಿ. ಆದರೆ ಗೊಲ್ಪಾಯೇಗನಿ ಅವರಿಗೆ 82 ವರ್ಷ ವಯಸ್ಸಾಗಿರುವುದರಿಂದ ದೀರ್ಘಕಾಲದ ನಾಯಕತ್ವ ಕಷ್ಟ ಎಂಬ ಮಾತುಗಳೂ ಕೇಳಿಬರುತ್ತಿವೆ.

ಅಲಿ ಅಸ್ಗರ್ ಹೆಜಾಜಿ: ಇರಾನ್‌ನ ಮುಂದಿನ ಸರ್ವೋಚ್ಚ ನಾಯಕ ಯಾರು ಎಂಬ ಪ್ರಶ್ನೆಗೆ, ಖಮೇನಿ ಅವರ ರಾಜಕೀಯ ವ್ಯವಹಾರಗಳ ಮೇಲ್ವಿಚಾರಣೆ ಅಲಿ ಅಸ್ಗರ್ ಹೆಜಾಜಿ ಹೆಸರೂ ಕೇಳಿ ಬರುತ್ತಿದೆ. ಈವರೆಗೆ ಹೆಜಾಜಿ ಅವರು ಖಮೇನಿ ಆಡಳಿತದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾ ಬಂದಿದ್ದಾರೆ.



ಅಲಿರೆಜಾ ಅರಾಫಿ: ಬರಹಗಾರ, ಶಿಯಾ ಧರ್ಮ ಉಪದೇಶಕರೂ ಆಗಿರುವ ಅಲಿರೆಜಾ ಅರಾಫಿ (65) ಖಮೇನಿ ಅವರ ಅತ್ಯಾಪ್ತರಾಗಿದ್ದವರು. 2022 ರಿಂದ ಗಾರ್ಡಿಯನ್ ಕೌನ್ಸಿಲ್ ಸದಸ್ಯರಾಗಿದ್ದಾರೆ. ಕಳೆದ 8 ವರ್ಷಗಳಲ್ಲಿ ಬೇರೆ ಬೇರೆ ಸಮುದಾಯಗಳ 5 ಕೋಟಿ ಜನರನ್ನು ಶಿಯಾ ಪಂಗಡಕ್ಕೆ ಬದಲಾಯಿಸಿದವರು ಎಂಬ ಖ್ಯಾತಿ ಅರಾಫಿ ಅವರದ್ದಾಗಿದೆ. ಖಮೇನಿ ಅವರ ನಿರ್ಗಮನದ ಸಂದಿಗ್ಧ ಸನ್ನಿವೇಶದಲ್ಲಿ ಇರಾನ್ ಆಡಳಿತವನ್ನು ಮುನ್ನಡೆಸಲು ಮಧ್ಯಂತರ ನಾಯಕತ್ವ ಸಮಿತಿ ರಚನೆಯಾಗಿದ್ದು, ಅದಕ್ಕೆ ಖಮೇನಿ ಅವರ ಆಪ್ತರಲ್ಲೊಬ್ಬರಾದ ಅಯತೊಲ್ಲ ಅಲಿರೆಜಾ

ಖಮೇನಿ ಸಾವಿಗೆ ವನಿತೆಯರ ಸಂಭ್ರಮ

ಟೆಹ್ರಾನ್: ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲ ಅಲಿ ಖಮೇನಿ ಹತ್ಯೆಗೆ ಇರಾನ್ ಜನತೆ ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಕೆಲವರು 'ಧಾರ್ಮಿಕ ಮುಖಂಡ, ದೇಶದ ಆಡಳಿತಗಾರ ಇನ್ನಿಲ್ಲ' ಎಂದು ಶೋಕದಲ್ಲಿದ್ದರೆ, ಮಹಿಳೆಯರೂ ಸೇರಿದಂತೆ ಹಲವರು 'ಸರ್ವಾಧಿಕಾರಿಯ ಅಂತ್ಯವಾಯಿತು' ಎಂದು ಬೀದಿಗಿಳಿದು ಸಂಭ್ರಮಿಸುತ್ತಿದ್ದಾರೆ.

ಇರಾನ್ ಸರಕಾರ ದೇಶಾದ್ಯಂತ 40 ದಿನಗಳ ಶೋಕಾಚರಣೆ ಘೋಷಿಸಿದೆ. ಆದರೆ ಇರಾನ್ ಮಹಿಳೆಯರು, ಖಮೇನಿ ಸಾವಿಗೆ ಸಂತಸ ಪಡುತ್ತಾ ಸಂಭ್ರಮಾಚರಣೆ ಮಾಡುತ್ತಿದ್ದಾರೆ. 'ಇರಾನ್ ಸದ್ಯ ಮುಕ್ತವಾಗಿದೆ, ಸ್ವಾತಂತ್ರ್ಯ ಪಡೆಯುತ್ತಿದೆ, ಇದು ಅತ್ಯಂತ ಸಂತೋಷದಾಯಕ ದಿನ' ಎಂದು ಯುವತಿಯೊಬ್ಬರು ಜಾಲತಾಣದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಮತ್ತೊಂದೆಡೆ ಇರಾನ್ ವನಿತೆಯೊಬ್ಬರು 'ಖಮೇನಿ ಈಸ್ ಡೆಡ್' ಎಂದು ಕೂಗುತ್ತಾ ಸಂತೋಷ ವ್ಯಕ್ತಪಡಿಸಿದ್ದಾರೆ. ಖಮೇನಿ ಸಾವಿನ ದುಃಖದಲ್ಲಿ ಕಣ್ಣೀರು ಹಾಕುತ್ತಾ ರಸ್ತೆಯಲ್ಲಿ ಸಾಗುತ್ತಿರುವ ಜನರಿಗೆ 'ಖಮೇನಿ ಈಸ್ ಡೆಡ್. ಥ್ಯಾಂಕ್ಸ್ ಅಮೆರಿಕ' ಎಂದು ಕೂಗಿ ಹೇಳುತ್ತಾ ಸಂಭ್ರಮಿಸಿದ್ದಾರೆ. ಮತ್ತೊಂದೆಡೆ ಹುಡುಗಿಯೊಬ್ಬಳು ನರ್ತಿಸುತ್ತಾ ಖಮೇನಿ ಸಾವನ್ನು ಸಂಭ್ರಮಿಸಿದ್ದಾಳೆ.

ನಾಗಪುರ ಕಾರ್ಖಾನೆ ಸ್ಫೋಟ: 18 ಸಾವು

ನಾಗಪುರ: ಮಹಾರಾಷ್ಟ್ರ ರಾಜ್ಯದ ನಾಗಪುರ ಜಿಲ್ಲೆಯಲ್ಲಿ ಭಾನುವಾರ ಬೆಳಗ್ಗೆ ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಭಾರೀ ಸ್ಫೋಟವಾಗಿದ್ದು, 18 ಕಾರ್ಮಿಕರು ದುರ್ಮರಣಕ್ಕೀಡಾಗಿದ್ದಾರೆ. ಹಲವಾರು ಮಂದಿ ಗಾಯಗೊಂಡಿದ್ದು, ತಕ್ಷಣವೇ ನಾಗಪುರದ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಣಿಗಾರಿಕೆಗೆ ಮತ್ತು ಕೈಗಾರಿಕೆಗಳಿಗೆ ಅಗತ್ಯವಾದ ಸ್ಫೋಟಕ ವಸ್ತುಗಳನ್ನು ತಯಾರಿಸುವ ಕಾಟೋಲ್ ತಹಶೀಲಿನ ರೌಲ್‌ಗಾಂವ್‌ನಲ್ಲಿರುವ 'ಎಸ್‌ಬಿಎಲ್ ಎನರ್ಜಿ ಲಿ.' ಕಾರ್ಖಾನೆಯಲ್ಲಿ ಸ್ಫೋಟವಾಗಿದೆ. ಸ್ಫೋಟಕ್ಕೆ ಕಾರಣ ತಿಳಿದುಬಂದಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಭಾನುವಾರ ಬೆಳಗ್ಗೆ 7ರಿಂದ 7.15ರ ನಡುವೆ ಕಂಪನಿಯ ಡಿಟೋನೇಟರ್ ಪ್ಯಾಕಿಂಗ್ ಘಟಕದಲ್ಲಿ ಸ್ಫೋಟವಾಗಿದೆ ಎಂದು ಕಂಪೆನಿಯ ಪ್ರತಿನಿಧಿಗಳು ತಿಳಿಸಿರುವುದಾಗಿ ವರದಿಯಾಗಿದೆ.

ಅಗ್ನಿಶಾಮಕ ದಳ, ರಕ್ಷಣಾ ತಂಡಗಳು ಅವಘಡ ಸ್ಥಳದಲ್ಲಿ ಕಾರ್ಯನಿರತವಾಗಿವೆ. ವಿಧಿವಿಜ್ಞಾನ ತಜ್ಞರ ತಂಡ ಸ್ಥಳಕ್ಕೆ ಆಗಮಿಸಿ ಸ್ಫೋಟದ ಕಾರಣ ತಿಳಿಯಲು ಸಾಕ್ಷ್ಯ ಸಂಗ್ರಹಿಸಿದೆ.

ಶನಿವಾರ ಆಂಧ್ರ ಪ್ರದೇಶದ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟವಾಗಿ 21 ಮಂದಿ ಸಜೀವ ದಹನವಾಗಿದ್ದರು.

ಖಮೇನಿ ಹತ್ಯೆ ಭಾರತ ಖಂಡಿಸಲಿ: ಇರಾನ್

ದೆಹಲಿ: ಇಸ್ರೇಲ್-ಅಮೆರಿಕ ಜಂಟಿ ದಾಳಿ ನಡೆಸಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿ ಹತ್ಯೆ ಮಾಡಿರುವುದಕ್ಕೆ ಭಾರತ ಬಲವಾಗಿ ಖಂಡಿಸಬೇಕು, ಮೌನವಾಗಿರಬಾರದು ಎಂದು ಭಾರತ ಸರಕಾರಕ್ಕೆ ಇರಾನ್ ಆಗ್ರಹಿಸಿದೆ.ಭಾರತದಲ್ಲಿನ ಇರಾನ್ ರಾಯಭಾರ ಕಚೇರಿ ಭಾನುವಾರ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದ್ದು, ಖಮೇನಿ ಅವರ ಸಾವಿನ ತೀವ್ರ ದುಃಖ ವ್ಯಕ್ತಪಡಿಸಿದೆ. ಇಡೀ ವಿಶ್ವ ಅಮೆರಿಕ-ಇಸ್ರೇಲ್ ದಾಳಿಯನ್ನು ಖಂಡಿಸಬೇಕು ಎಂದು ಒತ್ತಾಯಿಸಿದೆ.ಅಮೆರಿಕ-ಇಸ್ರೇಲ್ ಕ್ಷಮಿಸಲಾರದ ಅಪರಾಧ ಮಾಡಿವೆ. ಅದರ ಪರಿಣಾಮವನ್ನು ಎದುರಿಸಲಿವೆ. ಇರಾನಿನ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್ ಅಮೆರಿಕ-ಇಸ್ರೇಲ್ ಮೇಲೆ ಸೇಡು ತೀರಿಸಿಕೊಳ್ಳಲಿದೆ. ಮಧ್ಯಪ್ರಾಚ್ಯದಲ್ಲಿ ವಿವಿಧೆಡೆ ಇರುವ ಅಮೆರಿಕದ ಸೇನಾನೆಲೆಗಳ ಮೇಲೆ ಈಗಾಗಲೇ ಪ್ರತೀಕಾರದ ದಾಳಿ ನಡೆಸಲಾಗಿದೆ ಎಂದೂ ರಾಯಭಾರ ಕಚೇರಿ ಹೇಳಿದೆ.

ಪ್ರಿಯಾಂಕಾ ವಾದ್ರಾ: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ ಖಂಡಿಸಿದ್ದಾರೆ. ಪ್ರಜಾಪ್ರಭುತ್ವ ಜಗತ್ತಿನ ನಾಯಕ ಎಂದೇ ಕರೆಯಲಾಗುತ್ತಿದ್ದ ಖಮೇನಿ ಅವರನ್ನು ಹತ್ಯೆ ಮಾಡಿರುವುದು ಮತ್ತು ಹಲವು ಮುಗ್ಧ ಜನರನ್ನು ಕೊಂದಿರುವುದು

ಹೇಯ ಕೃತ್ಯ, ತೀವ್ರ ಖಂಡನೆಗೆ ಅರ್ಹ ಎಂದಿದ್ದಾರೆ.ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೆದುರು ಸಜ್ಜನಿಕೆ ತೋರಿದ ಪ್ರಧಾನಿ ನರೇಂದ್ರ ಮೋದಿ, ಸದ್ಯ ಯುದ್ಧಪೀಡಿತ ದೇಶಗಳಲ್ಲಿರುವ ಭಾರತೀಯ ನಾಗರಿಕರೆಲ್ಲರನ್ನು ಸುರಕ್ಷಿತವಾಗಿ ದೇಶಕ್ಕೆ ಕರೆತರುವ ಪ್ರಯತ್ನ ಮಾಡುತ್ತಾರೆಂದು ಆಶಿಸುವೆ ಎಂದಿದ್ದಾರೆ.

ಪಾಕ್ ವಿಮಾನಗಳತ್ತ ಅಫ್ಘನ್ ಪಿರಂಗಿ ಗುರಿ

ಕಾಬೂಲ್: ಒಂದೆಡೆ ಇರಾನ್ ಮೇಲೆ ಇಸ್ರೇಲ್-ಅಮೆರಿಕ ಯುದ್ಧ ಆರಂಭಿಸಿದ್ದರೆ, ಇಲ್ಲಿ ಪಾಕಿಸ್ತಾನ-ಅಫ್ಘಾನಿಸ್ತಾನ ನಡುವೆಯೂ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡೂ ದೇಶಗಳ ನಡುವಿನ ಗಡಿ ಸಂಘರ್ಷ ತೀವ್ರಗೊಂಡಿದ್ದು, ಭಾನುವಾರವೂ ಮುಂದುವರಿದೆ. ಪಾಕ್ ವಾಯುಪಡೆ ಮತ್ತು ಅಫ್ಘನ್ ಸೇನಾಪಡೆಗಳ ಪ್ರತಿದಾಳಿ ಈ ಭಾಗದಲ್ಲಿನ ಪರಿಸ್ಥಿತಿಯನ್ನು ಯುದ್ಧದ ಮಟ್ಟಕ್ಕೆ ಕೊಂಡೊಯ್ಯುತ್ತಿವೆ. ಕಾಬೂಲ್ ಭಾಗದಲ್ಲಿ ಭಾನುವಾರವೂ ಪಾಕ್ ದಾಳಿ ಕಾರಣ ಸ್ಫೋಟಗಳು ಉಂಟಾಗಿವೆ.

ಇನ್ನೊಂದೆಡೆ ಪಾಕ್‌ನ ವಿಮಾನಗಳತ್ತ ಅಫ್ಘನ್ ಸೇನೆ ತನ್ನ ಪಿರಂಗಿಗಳನ್ನು ಗುರಿ ಇಟ್ಟಿದೆ. ಪಾಕ್‌ನ ವಾಯುಪಡೆಯ ಕೆಲವು ವಿಮಾನಗಳನ್ನು ಹೊಡೆದುರುಳಿಸಿದ್ದೇವೆ ಎಂಬ ಅಫ್ಘನ್ ಸೇನೆ ಹೇಳಿಕೊಂಡಿದೆ. ಆದರೆ ಆ ವರದಿಗಳನ್ನು ಪಾಕ್ ವಾಯುಪಡೆ ನಿರಾಕರಿಸಿದೆ.

ಪಾಕ್ ಯುದ್ಧ ವಿಮಾನಗಳ ಮೇಲೆ ಅಫ್ಘನ್ ಸೇನಾಪಡೆಗಳು ಪಿರಂಗಿ ಗುರಿಯಿಟ್ಟು ಷೆಲ್‌ಗಳನ್ನು ಸಿಡಿಸುತ್ತಿವೆ. ಭಾನುವಾರ ಬೆಳಗ್ಗೆ ಪಾಕ್‌ನ ಒಂದು ಫೈಟರ್ ಜೆಟ್ ಒಂದನ್ನು ಹೊಡೆದುರುಳಿಸಿ ಅದರ ಪೈಲಟ್ಟನ್ನು

ಸೆರೆಹಿಡಿದಿದ್ದೇವೆ ಎಂದು ತಾಲಿಬಾನ್ ಸರಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಹೇಳಿದ್ದಾರೆ. ಆದರೆ, ಪಾಕ್ ವಾಯುಪಡೆ ಈ ಹೇಳಿಕಜೆ ಸಂಪೂರ್ಣ ಸುಳ್ಳು ಎಂದಿದೆ. ಈ ಮಧ್ಯೆ, ಅಫ್ಘಾನಿಸ್ತಾನದ ಅಸದಾಬಾದ್ ಮೇಲೆ ಪಾಕ್ ವಾಯುಪಡೆ ದಾಳಿ ನಡೆಸಿದ್ದು, 9 ನಾಗರಿಕರು ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಅಲ್-ಜಜೀರಾ ವರದಿ ಮಾಡಿದೆ.

ಡಿಜಿಟಲ್ ಅರೆಸ್ಟ್ ಮೊದಲಾದ ಸೈಬರ್ ವಂಚನೆ ತಡೆಗಾಗಿ ಹೊಸ ನಿಯಮ | ಪ್ರತಿ 6 ಗಂಟೆಗೊಮ್ಮೆ ರಿಜಿಸ್ಟರ್ ಸಿಮ್ ಸಂಖ್ಯೆಗೆ ಒಟಿಪಿ-ದೃಢೀಕರಣ ಅಗತ್ಯ

ಸಿಮ್ ಇಲ್ಲದೇ ಇದ್ದರೆ ವಾಟ್ಸಾಪ್, ಟೆಲಿಗ್ರಾಂ, ಸ್ನ್ಯಾಪ್‌ಚಾಟ್ ಅಲಭ್ಯ

ದೆಹಲಿ: ಭಾರತ ಸೇರಿದಂತೆ ವಿಶ್ವಾದ್ಯಂತ ಹೆಚ್ಚು ಜನರು ಬಳಸುವ ಮೊಬೈಲ್ ಫೋನ್ ಅಪ್ಲಿಕೇಷನ್‌ಗಳಲ್ಲಿ ಒಂದಾಗಿರುವ ವಾಟ್ಸಾಪ್ ಇನ್ನು ಮುಂದೆ(ಮಾ.1ರಿಂದಲೇ ಜಾರಿ) ಸಿಮ್ ಇಲ್ಲದೇ ಕಾರ್ಯನಿರ್ವಹಿಸದು.

ವಾಟ್ಸಾಪ್ ಸೇವೆ ಪಡೆಯುವುದಕ್ಕೆ ಸಿಮ್ ಕಾರ್ಡ್ ಕಡ್ಡಾಯ ಎಂಬ ನಿಯಮವನ್ನು ಭಾರತ ಸರಕಾರ ರೂಪಿಸಿದೆ.

ಸೈಬರ್ ವಂಚನೆ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರಕಾರ, 'ವಾಟ್ಸಾಪ್, ಟೆಲಿಗ್ರಾಂ' ಮೊದಲಾದ ಮೊಬೈಲ್ ಅಪ್ಲಿಕೇಷನ್‌ಗಳು ಕಾರ್ಯನಿರ್ವಹಿಸುವುದಕ್ಕೆ ಸ್ಪಷ್ಟ ಸಂಖ್ಯೆಯ ಸಿಮ್ ಕಾರ್ಡ್ ಮೊಬೈಲ್ ಫೋನ್‌ಗಳಲ್ಲಿ ಇರುವುದು ಕಡ್ಡಾಯ ಎಂಬ ನಿಯಮವನ್ನು ಮಾಡಿದ್ದು, ಈ ಹೊಸ ನಿಯಮ ಮಾ.1ರಿಂದಲೇ ಜಾರಿಗೆ ಬಂದಿದೆ. ಸಿಮ್ ಕಾರ್ಡ್ ಇಲ್ಲದೇ ಇರುವ ಸ್ಮಾರ್ಟ್‌ಫೋನ್‌ಗಳಲ್ಲಿ ಇನ್ನು ಮುಂದೆ ವಾಟ್ಸಾಪ್, ಟೆಲಿಗ್ರಾಂ, ಸ್ನ್ಯಾಪ್‌ಚಾಟ್, ಜಿಯೊಚಾಟ್ ಮೊದಲಾದ ಸುಲಭ ಸಂವಹನ ಸೇವೆಗಳು ಕಾರ್ಯನಿರ್ವಹಿಸುವುದಿಲ್ಲ.

ಈ ಎಲ್ಲಾ ಸಂವಹನ ಸೇವೆಗಳ ಮೊಬೈಲ್ ಅಪ್ಲಿಕೇಷನ್‌ಗಳು ಮೊಬೈಲ್ ಫೋನ್, ಟ್ಯಾಬ್ಲೆಟ್ ಮೊದಲಾದ ಗ್ಯಾಜೆಟ್‌ಗಳಲ್ಲಿ ಕಾರ್ಯನಿರ್ವಹಿಸಬೇಕೆಂದರೆ ಆ ಸಾಧನಗಳಲ್ಲಿ ನೋಂದಾಯಿತ ಕಂಪನಿಯ ಸಿಮ್ ಕಾರ್ಡ್ ಇರಬೇಕಾದ್ದು ಕಡ್ಡಾಯವಾಗಿದೆ.

ಒಂದೊಮ್ಮೆ ಮೊಬೈಲ್ ಫೋನ್‌ಗೆ ಸಿಮ್ ಕಾರ್ಡ್ ಅಳವಡಿಸಿ ವಾಟ್ಸಾಪ್, ಟೆಲಿಗ್ರಾಂ, ಸ್ನ್ಯಾಪ್‌ಚಾಟ್, ಜಿಯೊಚಾಟ್ ಮೊದಲಾದ ಆಪ್‌ಗಳನ್ನು ಚಾಲೂಗೊಳಿಸಿ ಬಳಿಕ ಮೊಬೈಲ್‌ಫೋನ್‌ನಿಂದ ಸಿಮ್ ತೆಗೆದರೆ ಅದರ ಬೆನ್ನಲ್ಲೇ ಈ ಅಪ್ಲಿಕೇಷನ್‌ಗಳು ಕಾರ್ಯನಿರ್ವಹಿಸುವುದೂ ಬಂದ್ ಆಗುತ್ತದೆ. ಈ ಸಂಬಂಧ ಭಾರತದ ದೂರಸಂಪರ್ಕ ಸಂವಹನ ಇಲಾಖೆ(ಡಿಒಟಿ)ಯು 'ದಿ ಟೆಲಿಕಾಂ ಸೈಬರ್ ಸೆಕ್ಯುರಿಟಿ(ಟಿಸಿಎಸ್) ನಿಯಮಗಳು-2024ರ ಅಡಿಯಲ್ಲಿ ಹೊಸ ಆದೇಶ ಹೊರಡಿಸಿದೆ. ಸೈಬರ್ ವಂಚನೆಗಳನ್ನು ತಡೆಯಲು, ಸೈಬರ್ ವಂಚಕರಿಗೆ ಪಾಠ ಕಲಿಸಲೆಂದೇ ಈ ನಿಯಮವನ್ನು ಮಾ.1ರಿಂದ ಜಾರಿಗೊಳಿಸಲಾಗಿದೆ ಎಂದು ಇಲಾಖೆ ಹೇಳಿದೆ.

ಒಂದೊಮ್ಮೆ ಸಿಮ್ ಅಳವಡಿಸಿ ಈ ಸಂವಹನ ಸಂಪರ್ಕ ಸೇವೆಗಳನ್ನು ಚಾಲೂಗೊಳಿಸಿದ್ದರೂ ಪ್ರತಿ 6 ಗಂಟೆಗೊಮ್ಮೆ ದೃಢೀಕರಣವನ್ನು ದೂರಸಂಪರ್ಕ ಅಂತರ್ಜಾಲ ಸಂಪರ್ಕ ವ್ಯವಸ್ಥೆಯು ಕೇಳುತ್ತಲೇ ಇರುತ್ತದೆ. ಬಳಕೆದಾರ ದೃಢೀಕರಣ ನೀಡದೇ ಇದ್ದರೆ, ಸಂಪರ್ಕ ಸಂವಹನ ತಕ್ಷಣವೇ ಸ್ಥಗಿತಗೊಳ್ಳುತ್ತದೆ. ವಾಟ್ಸಾಪ್ ವೆಬ್ ಕೂಡಾ ಹೀಗೆ ಪ್ರತಿ 6 ಗಂಟೆಗೊಮ್ಮೆ ಲಾಗೌಟ್ ಆಗುತ್ತಿರುತ್ತದೆ. ಪ್ರತಿ ಬಾರಿಯೂ ಬಳಕೆದಾರರು ಲಾಗಿನ್ ಆಗುತ್ತಿರಬೇಕು. ಒಂದೊಮ್ಮೆ ಗ್ಯಾಜೆಟ್‌ನಲ್ಲಿ ಸಿಮ್ ಇಲ್ಲದೇ ಇದ್ದರೆ ಲಾಗಿನ್ ಅಸಾಧ್ಯ. ಈ ಮಟ್ಟದ ಸುರಕ್ಷತೆಯನ್ನು ಹೊಸ ನಿಯಮದಡಿ ಕಾಯ್ದುಕೊಳ್ಳಲಾಗಿದೆ.

ಸಿಮ್ ಬೈಂಡಿಂಗ್ ರೂಲ್

ಮೊಬೈಲ್ ಫೋನ್ ಮತ್ತಿತರ ಗ್ಯಾಜೆಟ್‌ಗಳಲ್ಲಿ ವಾಟ್ಸಾಪ್, ಟೆಲಿಗ್ರಾಂ ಮೊದಲಾದ ಸಾಮಾಜಿಕ, ಸಾಮೂಹಿಕ ಸಂಪರ್ಕ ಸೇವೆಗಳನ್ನು ಪಡೆಯಬೇಕಿದ್ದರೆ ಗ್ಯಾಜೆಟ್‌ನಲ್ಲಿ ನೋಂದಾಯಿತ ದೂರಸಂಪರ್ಕ ಕಂಪನಿಯ ಅಧಿಕೃತ 'ಸಿಮ್' ಇರುವುದನ್ನು ಕಡ್ಡಾಯಗೊಳಿಸಿದ ನಿಯಮವನ್ನು ಕೇಂದ್ರದ ದೂರಸಂಪರ್ಕ ಇಲಾಖೆ(ಡಿಒಟಿ) 2025ರ ನ.28ರಂದೇ ಪ್ರಕಟಿಸಿತು. ಆದರೆ, ಹೊಸ ನಿಯಮದ ಅಳವಡಿಕೆಗೆ ದೂರಸಂಪರ್ಕ ಸೇವಾ ಸಂಸ್ಥೆಗಳು ಹೆಚ್ಚಿನ ಸಮಯ ಕೇಳಿದ್ದರಿಂದ 90 ದಿನಗಳ ಸಮಯಾವಕಾಶವನ್ನೂ ನೀಡಿತು. ಈಗ ಆ ಕಾಲಾವಧಿ ಮುಗಿದಿದ್ದು, ಮಾ.1ರಿಂದಲೇ ಸಿಮ್ ಕಡ್ಡಾಯ ನಿಯಮ ಜಾರಿಗೊಂಡಿದೆ. ಈವರೆಗೂ ವಾಟ್ಸಾಪ್, ಟೆಲಿಗ್ರಾಂ ಮೊದಲಾದ ಸಮೂಹ ಸಂವಹನ ಅಪ್ಲಿಕೇಷನ್‌ಗಳನ್ನು ಸರಾಗವಾಗಿ ಬಳಸಲು ಅವಕಾಶವಿತ್ತು. ಹೊಸ ನಿಯಮದ ಜಾರಿ ಪರಿಣಾಮವಾಗಿ ಪ್ರತಿ 6 ಗಂಟೆಗೊಮ್ಮೆ ಈ ಸೇವೆಗಳನ್ನು ನೊಂದಾಯಿತ ಸಿಮ್ ಸಂಖ್ಯೆಗೆ ಬರುವ 'ಒಟಿಪಿ' ಮೂಲಕ ದೃಢೀಕರಿಸಬೇಕಿದೆ. ಸಿಮ್ ಇಲ್ಲದೇ ಇದ್ದರೆ ಈ ದೃಢೀಕರಣ ಅಸಾಧ್ಯ.

ಸಮಾಚಾರ ಸಣ್ಣದಲ್ಲ

ಕುರಿ,ಮೇಕೆ ಘಟಕ ಅರ್ಜಿ ಆಹ್ವಾನ

ಚಿತ್ರದುರ್ಗ: ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ವತಿಯಿಂದ 2025–26ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಜಿಲ್ಲೆಯ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾ. 07 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ಕಾರ್ಯಕ್ರಮದಲ್ಲಿ ಸರಕಾರದ ನಿಯಮದಂತೆ ಮಹಿಳೆಯರಿಗೆ ಶೇ.33.3 ಮತ್ತು ವಿಶೇಷ ಚೇತನರಿಗೆ ಶೇ.3 ಆದ್ಯತೆ ನೀಡಲಾಗುವುದು. ಈ ಯೋಜನೆಯಡಿ 10 ಸುಧಾರಿತ ಹೆಣ್ಣು ಕುರಿ ಅಥವಾ ಮೇಕೆ, ಮತ್ತು 01 ಟಗರು ಅಥವಾ ಹೋತಕ್ಕೆ ಒಟ್ಟು ಘಟಕ ದರ 1 ಲಕ್ಷ ರು.ಗಳಿದ್ದು, ಶೇ.90ರಷ್ಟು ಸಹಾಯಧನ ಹೊಂದಿದೆ. ಅರ್ಜಿಯೊಂದಿಗೆ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಪಶು ಆಸ್ಪತ್ರೆ ಆವರಣ, ಚಿತ್ರದುರ್ಗ ಹಾಗೂ ಮುಖ್ಯ ಪಶುವೈದ್ಯಾಧಿಕಾರಿಗಳು, ಆಯಾ ತಾಲೂಕು ಪಶು ಆಸ್ಪತ್ರೆ ಇವರುಗಳನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಸಹಾಯಕ ನಿರ್ದೇಶಕಿ ಕೆ. ವಾಸಂತಿ ತಿಳಿಸಿದ್ದಾರೆ.

ವಿಶೇಷ ಚೇತನರಿಗೆ ತ್ರಿಚಕ್ರವಾಹನ ವಿತರಣೆ

ಚಿತ್ರದುರ್ಗ: ಜಿಲ್ಲಾಡಳಿತ, ಜಿಪಂ, ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ದಾವಣಗೆರೆ ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆ ಇವರುಗಳ ಸಹಯೋಗದಲ್ಲಿ ವಿಶೇಷ ಚೇತನರಿಗೆ ಮೋಟಾರ್‌ಚಾಲಿತ ತ್ರಿ–ಚಕ್ರವಾಹನಗಳ ವಿತರಣಾ ಕಾರ್ಯಕ್ರಮ ಮಾರ್ಚ 02ರಂದು ಬೆಳಿಗ್ಗೆ 10.30ಕ್ಕೆ ಚಿತ್ರದುರ್ಗ ನಗರದ ಜಿಪಂ ಆವರಣದಲ್ಲಿ ಆಯೋಜಿಸಲಾಗಿದೆ. ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್‌ಉದ್ಘಾಟನೆ ನೆರವೇರಿಸುವರು. ಸಚಿವ ಸಂತೋಷ್ ಲಾಡ್, ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಟಿ.ರಘುಮೂರ್ತಿ, ಹೊಸದುರ್ಗ ಶಾಸಕರು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಅಧ್ಯಕ್ಷ ಬಿ.ಜಿ. ಗೋವಿಂದಪ್ಪ, ಸಂಸದ ಗೋವಿಂದ ಎಂ.ಕಾರಜೋಳ ಘನ ಉಪಸ್ಥಿತರಿರುವರು. ಚಿತ್ರದುರ್ಗ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರು, ಅಧ್ಯಕ್ಷರು, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಗಳು ಭಾಗವಹಿಸುವರು.

ಅಡಕೆ ಕೃಷಿ ಸವಾಲು ಕುರಿತು ಉಪನ್ಯಾಸ

ಹೊನ್ನಾಳಿ: ಕೃಷಿ ಮೇಳದ ಸಮಾರೋಪ ಸಮಾರಂಭದ ಗೋಷ್ಠಿಯಲ್ಲಿ ಅಡಿಕೆ ಕೃಷಿ ಸಮಗ್ರತೆಯ ಸವಾಲುಗಳು ವಿಷಯದ ಅಧ್ಯಕ್ಷತೆ ಶಿವಮೊಗ್ಗ ದುಶ್ಯಂತಕುಮಾರ್ ವಹಿಸಲಿದ್ದಾರೆ. ಆಶಯ ನುಡಿ ದಾವಣಗೆರೆ ಬಸವನಗೌಡ ಉಪನ್ಯಾಸ ಅಡಿಕೆ ಬೆಳೆಯ ಸವಾಲು, ನಾಗರಾಜಪ್ಪ ಹರಿವಪ್ಪರ್‌ಅಡಿಕೆಯಲ್ಲಿ ಅಂತರ ಬೆಳೆ ನಿರ್ವಹಣೆ ಸವಾಲುಗಳು, ಸುದೀಪ್ ಬೆಳೆ ಕೀಟ ನಿರ್ವಹಣೆ, ಸ್ವಾತಿ ರೋಗ ನಿವಾರಣೆ, ಕಿರಣ್‌ನಕುಮಾರ್‌ರವರು ಉಪನ್ಯಾಸ ನೀಡಲಿದ್ದಾರೆ. ಮಧ್ಯಾಹ್ನ 3 ಗಂಟೆಯ ಧರ್ಮ ಸಭೆಯ ಸಮಾರೋಪ ಸಮಾರಂಭದಲ್ಲಿ ವಿವಿಧ ಮಠಾಧೀಶರಾದ ಬೆಂಗಳೂರು ಶಿವಗಂಗಾ ಶ್ರೀಗಳು, ಕಡೆನಂದಿಹಳ್ಳಿ, ತಾವರಕೆರೆ, ಮಾಗಡಿ ಚಕ್ರಬಾವಿ, ನಾಗವಂದ, ಮಕ್ಕಳ ದೇವರ ಮಠ ಕಣನೂರ್ ಸ್ವಾಮಿಗಳು ಭಾಗವಹಿಸಲಿದ್ದಾರೆ.

ಗ್ರಾಮಾಯಣ ಚಿತ್ರ ತಂಡ ತಾಲೂಕಿಗೆ

ಹೊನ್ನಾಳಿ: ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಗ್ರಾಮಾಯಣ ಚಿತ್ರ ತಂಡದ ನಾಯಕ ವಿನಯ್ ರಾಜಕುಮಾರ್, ನಟ ಪ್ರಶಾಂತ್, ನಟಿ ಮೇಘ ಶೆಟ್ಟಿ, ನಿರ್ದೇಶಕ ದೇವನೂರು ಚಂದ್ರು ಭಾಗವಹಿಸಲಿದ್ದಾರೆ. ನಂತರ ಕಿರುತೆರೆಯ ಗಾಯಕರಿಂದ ಮಹಾ ಸಂಗೀತೋತ್ಸವ ಕಾರ್ಯಕ್ರಮ ನಡೆಯಲಿದೆ.

ವಿರಾಮ
ಪ್ರತಿ ಭಾನುವಾರ

ಕುಂಚಿಟಿಗ ಮಠದಲ್ಲಿ 25ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ | ಕಾಯಕಯೋಗಿ ಶ್ರೀ ಶಾಂತವೀರ ಸ್ವಾಮೀಜಿ ಅಭಿಮತ

ಸಾಮಾಜಿಕ ನ್ಯಾಯ ಮಠಾಧೀಶರ ಆಶಯ

ಹೊಸದುರ್ಗ: ಯಾವುದೇ ವರ್ಗದಲ್ಲಿರುವ ಬಡತನದ ಸ್ವಾಮೀಜಿಗಳು ನಮ್ಮ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಬಳಿಗೆ ಬಂದಲ್ಲಿ ಎಲ್ಲರನ್ನು ಒಟ್ಟೊಟ್ಟಿಗೆ ಕರೆದುಕೊಂಡು ಹೋಗುವ ಕೆಲಸವನ್ನು ನಮ್ಮ ಒಕ್ಕೂಟ ಮಾಡುತ್ತಿದೆ. ನಮ್ಮ ಒಕ್ಕೂಟದಲ್ಲಿ ಯಾರಿಗೂ ಸ್ವಾರ್ಥವಿಲ್ಲ. ಆಶ್ರಯ ನೀಡಿ, ಸಂಕಷ್ಟದಲ್ಲಿರುವವರನ್ನು ಮೇಲಕ್ಕೆ ಎತ್ತುವ ಕೆಲಸ ಮಾಡುವುದು ಹಾಗೂ ಸಾಮಾಜಿಕ ನ್ಯಾಯ ಒದಗಿಸುವುದು ನಮ್ಮ ಒಕ್ಕೂಟದ ಆಶಯ ಎಂದು ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಕಾರ್ಯದರ್ಶಿ ಕಾಯಕಯೋಗಿ ಶ್ರೀ ಶಾಂತವೀರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠದ ಆವರಣದಲ್ಲಿ ನಡೆದ 36ನೇ ಶ್ರೀ ಸಂಗಮೇಶ್ವರ ಜಯಂತಿ, 46ನೇ ವರ್ಷದ ಶಾಂತವೀರಶ್ರೀ ಜನ್ಮದಿನೋತ್ಸವ, 28ನೇ ವರ್ಷದ ದೀಕ್ಷಾ ಮಹೋತ್ಸವ ಹಾಗೂ 25 ವರ್ಷದ ಪಟ್ಟಾಧಿಕಾರ ಮಹೋತ್ಸವ ಸಮಾರಂಭ ದಿವ್ಯಸಾನಿಧ್ಯ ವಹಿಸಿ ಮಾತನಾಡಿದರು.

6 ತಿಂಗಳ ಹಿಂದೆ ಹಿಂದುಳಿದ, ದಲಿತ ಒಕ್ಕೂಟದ ಸ್ವಾಮೀ ಜಿಗಳಿಗೆ ಬೆಂಗಳೂರಿನಲ್ಲಿ ನಿವೇಶನ ಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇವು.

ಪಟ್ಟಣದ ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠದ ಆವರಣದಲ್ಲಿ ನಡೆದ ಪಟ್ಟಾಧಿಕಾರ ಮಹೋತ್ಸವ ಸಮಾರಂಭವನ್ನು ಶ್ರೀ ಶಾಂತವೀರ ಸ್ವಾಮೀಜಿ, ಶಾಸಕ ಬಿ.ಜಿ.ಗೋವಿಂದಪ್ಪ ಹಾಗೂ ಮಠಾಧೀಶರು ಉದ್ಘಾಟಿಸಿದರು.

ಅವರು ಮನವಿಗೆ ತಕ್ಷಣವೇ ಸ್ಪಂದಿಸಿ ಸುಮಾರು 900 ಕೋಟಿ ರು. ವೆಚ್ಚದ ನಿವೇಶನ ಕೊಟ್ಟಿರುವುದು ಹೆಮ್ಮೆಯ ಸಂಗತಿ. ಏಕೆಂದರೆ ಈ ಕೆಲಸವನ್ನು 75 ವರ್ಷಗಳಿಂದಲೂ ಯಾವ ಮುಖ್ಯಮಂತ್ರಿಗಳು ಮಾಡಿರಲಿಲ್ಲ ಎಂದರು.

ಅಂತಹ ಮಹತ್ವದ ಕೆಲಸ ಮಾಡಿರುವ ಸಿದ್ದರಾಮಯ್ಯ ಅವರಿಗೆ ಸಮಾರಂಭ ಆಯೋಜಿಸಿ ಅಭಿನಂದನೆ ಸಲ್ಲಿಸಬೇಕು ಎಂದು ಕೇಳಿಕೊಂಡೆವು. ನಿವೇಶನ ಕೊಟ್ಟದ್ದಕ್ಕೆ ನನಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮ ಬೇಡ ಎಂದ ಸಿದ್ದರಾಮಯ್ಯ ಅವರ ಗುಣ ಬಹುದೊಡ್ಡದು.

ಮೂಲ ಸೌಲಭ್ಯ ಇರದವರಿಗೆ ಸೌಲಭ್ಯ ಒದಗಿಸುವ ಸಹೃದಯ ಗುಣ ಸಿಎಂ ಸಿದ್ದರಾಮಯ್ಯ ಅವರದ್ದು. ನಮ್ಮ ಸ್ವಾಮೀಜಿ ಏನು ಮಾಡುತ್ತಿದ್ದಾರೆ ಎಂದು ಯಾರು ಸಹ ಚಕಾರ ಎತ್ತದೆ ಒಪ್ಪಿಗೆ ನೀಡುವ ಕುಂಚಿಟಿಗ ಸಮಾಜ ನಮ್ಮದು. ಜಮೀನು ಮಾರಿದರೆ, ಖರೀದಿಸಿದರೆ ಯಾರು ಪ್ರಶ್ನಿಸಿಲ್ಲ. ಇದರ ಫಲವಾಗಿ ಶ್ರೀಮಠ ಬೆಳೆಯಲು ಸಾಧ್ಯವಾಗಿದೆ.

ನಾನು ಸ್ವಾಮೀಜಿಯಾಗಿ ಇಲ್ಲಿಗೆ ಬಂದಾಗ ಒಂದು ಅಡಿ ಜಾಗ ಶ್ರೀಮಠಕ್ಕೆ ಇರಲಿಲ್ಲ. ಈಗ ಹೆಚ್ಚು ನಿವೇಶನ ಇದೆ. ಕೋಟ್ಯಾಂತರ ವೆಚ್ಚದ ಕಾಮಗಾರಿಗಳು ನಡೆಯುತ್ತಿವೆ. ಇದೆಲ್ಲದೂ ನಮ್ಮ ಬದ್ಧತೆ ಹಾಗೂ ಸಮಾಜದವರ ಸಹಕಾರದ ಫಲ ಎಂದು ತಿಳಿಸಿದರು.

> ಉತ್ತರಾಧಿಕಾರಿ ಕೊಡಿ ಅಂತ ಒಂದು ವರ್ಷದ ಹಿಂದೆಯೇ ನಾನು ಭಕ್ತರಿಗೆ ತಿಳಿಸಿದ್ದರೂ ಯಾರು ಈ ಬಗ್ಗೆ ಮಾಹಿತಿ ನೀಡಿಲ್ಲ. ಈ ಕಾರ್ಯಕ್ಕೆ ಇನ್ನೂ 4 ವರ್ಷ ಸಮಯವಿದೆ. ಉತ್ತರಾಧಿಕಾರಿ ಕರೆದುಕೊಂಡು ಬಾರದಿದ್ದರೆ ನಾವೇ ನೇಮಿಸಬೇಕಾಗುತ್ತದೆ.
> –ಶ್ರೀ ಶಾಂತವೀರ ಸ್ವಾಮೀಜಿ, ಕಾಯಕಯೋಗಿ

ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್ ಮಾತನಾಡಿ, ನಮ್ಮ ಕುಂಚಿಟಿಗ ಸಮಾಜಕ್ಕೆ ಶಕ್ತಿ ತುಂಬುವ ಕೆಲಸವನ್ನು ಎಲ್ಲಾ ಮಠಾಧೀಶರು ಮಾಡಬೇಕು. ಒಬಿಸಿ ಮೀಸಲಾತಿ ಸೌಲಭ್ಯ ಕಲ್ಪಿಸಲು ಸಹಕಾರ ನೀಡಬೇಕು. ನಿಮ್ಮೆಲ್ಲರ ಪ್ರಯತ್ನದಿಂದ ಸರಕಾರ ನಮ್ಮ ಈ ಬೇಡಿಕೆ ಈಡೇರುವಂತಾಗಲಿ ಎಂದು ಮನವಿ ಮಾಡಿದರು.

ಸಮಾರಂಭ ಉದ್ಘಾಟಿಸಿದ ಶಾಸಕ ಬಿ.ಜಿ.ಗೋವಿಂದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಕೆಲ್ಲೋಡು ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಭಗೀರಥಗುರುಪೀಠದ ಶ್ರೀ ಪುರುಷೋತ್ತಮಾನಂದಪುರಿ, ಶ್ರೀ ಬಸವ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಕೃಷ್ಣ ಯಾದವಾನಂದಪುರಿ ಸ್ವಾಮೀಜಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ಶ್ರೀ ಶಾಂತವೀರ ಸ್ವಾಮೀಜಿ ಅವರು ನಮ್ಮ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಕರ್ಯದರ್ಶಿಯಾಗಿ ಎಲ್ಲಾ ಮಠಗಳ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಎಲ್ಲಾ ಸ್ವಾಮೀಜಿಗಳೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದ್ದಾರೆ. ಯಾವುದೇ ಸ್ವಾಮೀಜಿಗೆ ಅನ್ಯಾಯ ಆದರೆ ಸಾಂತ್ವನ ನೀಡುವ ಕೇಂದ್ರ ಸ್ಥಾಪನೆ ಮಾಡಲು ಜಾಗ ಹುಡುಕಿದ್ದಾರೆ. ಇವರಿಂದ ಇನ್ನೂ ಹತ್ತಾರ ಉತ್ತಮ ಅಭಿವೃದ್ಧಿ ಕಾರ್ಯಗಳು ಎಲ್ಲಾ ಸ್ವಾಮೀಜಿಗಳ ಪರವಾಗಿ ನಡೆಯುತ್ತಿವೆ. ಇಂತಹ ಸ್ವಾಮೀಜಿ ಪಡೆದಿರುವ ಕುಂಚಿಟಿಗ ಸಮಾಜ ಪುಣ್ಯ ಮಾಡಿದೆ. ನಾವೆಲ್ಲರೂ ಒಂದೇ ಮಕ್ಕಳಂತೆ ಬದುಕುತ್ತಿದ್ದೇವೆ.
> –ನಿರಂಜನಾನಂದಪುರಿ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠ

ಷಹಾಜೀರಾಜೇ ಜಯಂತ್ಯುತ್ಸವ ಮಾ.29ಕ್ಕೆ

ಚನ್ನಗಿರಿ: ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ಷಹಾಜೀರಾಜೇ ಬೋಂಸ್ಲೆಯವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಮಾ. 29 ರಂದು ಹೊದಿಗೆರೆಯ ಸ್ಮಾರಕದ ಬಳಿ ಅದ್ದೂರಿಯಾಗಿ ಆಚರಣೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಕ್ಷತ್ರೀಯ ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್.ಮರಿಯೋಜಿರಾವ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಖಿಲ ಕರ್ನಾಟಕ ಮರಾಠ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಷಹಾಜೀರಾಜೇ ಬೋಂಸ್ಲೆಯವರ ಜಯಂತ್ಯೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೂ ಅವಿನಾಭಾವ ಸಂಬಂಧವಿದ್ದು ಷಹಾಜೀ ಮಹಾರಾಜರ ಸ್ಮಾರಕ ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮದಲ್ಲಿ ಇರುವುದೇ ಸಾಕ್ಷಿಯಾಗಿದೆ.

ಬೆಂಗಳೂರಿನಲ್ಲಿ ಆಡಳಿತ ನಡೆಸಿರುವ ಮಹಾರಾಜರು ಕಾಡುಮಲ್ಲೇಶ್ವರ ದೇಗುಲದ ನಿರ್ಮಾಣ ಕರ್ತರಾಗಿದ್ದರು ಮತ್ತು ಹಿರೇಉಡದಲ್ಲಿ ತುಳಜಾಭವಾನಿ ದೇಗುಲವನ್ನು ನಿರ್ಮಾಣ ಮಾಡಿದ್ದಾರೆ ಎಂದು ತಿಳಿಸಿದರು.

ಮರಾಠರು ಕರ್ನಾಟಕಕ್ಕೆ ವಲಸೆ ಬಂದವರಲ್ಲ ನಾವು ಕನ್ನಡಿಗ ಮರಾಠಿಗರೇ ಎನ್ನಲು ಸ್ಮಾರಕಗಳ ಕುರುಹುಗಳು ಉಳಿದಿವೆ. ಇದುವರೆಗೂ ಸಮಾಜದ ವತಿಯಿಂದ ಪುಣ್ಯಾರಾಧನೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದ್ದು, ಕಳೆದ 3 ವರ್ಷಗಳಿಂದ ಜಯಂತ್ಯೋತ್ಸವನ್ನು ಹೊದಿಗೆರೆ ಗ್ರಾಮದಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಷಹಾಜೀರಾಜೇ ಬೋಂಸ್ಲೆಯವರ ಜಯಂತ್ಯೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ರಾಜ್ಯ ಕ್ಷತ್ರೀಯ ಮರಾಠ ಅಭಿ ವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್. ಮರಿಯೋಜಿರಾವ್ ಮಾತನಾಡಿದರು.

> ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೂ ಅವಿನಾಭಾವ ಸಂಬಂಧವಿದ್ದು ಷಹಾಜೀ ಮಹಾಾಜರ ಸ್ಮಾರಕ ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮದಲ್ಲಿ ಇರುವುದೇ ಸಾಕ್ಷಿಯಾಗಿದೆ.
> –ಜಿ.ಎಚ್. ಮರಿಯೋಜಿರಾವ್, ಕರ್ನಾಟಕ ರಾಜ್ಯ ಕ್ಷತ್ರೀಯ ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ

ಚಿಕ್ಕಮಗಳೂರು ಕೆ.ಕೆ.ಎಂ.ಪಿ ಜಿಲ್ಲಾಧ್ಯಕ್ಷ ಶ್ರೀನಿವಾಸ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಭೆಯಲ್ಲಿ ಚನ್ನಗಿರಿ ಮರಾಠ ಸಮಾಜದ ಉಪಾಧ್ಯಕ್ಷ ಕುಬೇಂ ದ್ರೋಜಿರಾವ್, ಕೆ.ಕೆ.ಎಂ.ಪಿ. ಚನ್ನಗಿರಿ ತಾಲೂಕು ಅಧ್ಯಕ್ಷ ಸತೀಶ್ ಪವಾರ್, ಕೆ.ಕೆ.ಎಂ. ಪಿ. ಜಿಲ್ಲಾನಿರ್ದೇಶಕ ಅಣ್ಣೋಜಿರಾವ್ ಕಣ ವೆಬಿಳಚಿ, ಮಂಜಣ್ಣ ರಾಜಪ್ಪ, ಕಮಲಾಕ್ಷಿ, ಸಚ್ಚೀನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶಿಕ್ಷಣ ಮಕ್ಕಳ ಭವಿಷ್ಯ ರೂಪಿಸುವ ಅಸ್ತ್ರ

ಹೊಸದುರ್ಗ: ವಿದ್ಯಾರ್ಥಿಗಳು ಭವಿಷ್ಯದಲ್ಲಿ ಸಮಾಜವು ಯಾವ ರೀತಿಯಲ್ಲಿ ಬದಲಾಗಬಹುದು ಎಂಬುದನ್ನು ಅರಿತು, ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಶಿಕ್ಷಣ ಪಡೆಯಿರಿ ಎಂದು ದಾವಣಗೆರೆ ವಿವಿ ಸಿಡಿಸಿಯ ನಿರ್ದೇಶಕ ಪ್ರೊ.ಕೆ.ಬಿ.ರಂಗಪ್ಪ ಅವರು ವಿದ್ಯಾರ್ಥಿ ಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಎಸ್.ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ಇಂದಿರಾಗಾಂಧಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ಸಂಘದ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ರ‍್ಯಾಂಕ್ ವಿಜೇತರಿಗೆ ಅಭಿನಂದನೆ ಹಾಗೂ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ಸಂಸ್ಥೆಯವರ ಶಿಕ್ಷಣ ಪರ ಕಾಳಜಿಯಿಂದ ಅಭಿವೃದ್ಧಿ ಸಾಧ್ಯವಾಗಿದೆ. ಗುಣಮಟ್ಟದ ಶಿಕ್ಷಣ ಕೊಡುತ್ತಿರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಸೇರಿಸುತ್ತಿರುವುದರಿಂದ ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದು ಶ್ಲಾಘನೀಯ.

ಇನ್ನೂ ಹೆಚ್ಚಿನ ಗುಣಮಟ್ಟದ ಶಿಕ್ಷಣ ಕೊಡುವ ಮೂಲಕ ಈ ಸಂಸ್ಥೆ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದರು.

ಈ ಕಾರ್ಯಕ್ರಮದಲ್ಲಿ ಎಸ್. ನಿಜಲಿಂಗಪ್ಪ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ. ಎಸ್. ಕಲ್ಮಠ್ ಪ್ರಾಸ್ತಾವಿಕವಾಗಿ ಮಾತನಾಡಿ ವಿದ್ಯಾಥಿಗಳಿಗೆ ಸಲಹೆ ನೀಡಿದರು.

ಎಸ್. ನಿಜಲಿಂಗಪ್ಪ ಸಂಸ್ಥೆ ಅಧಕ್ಷ ಎಂ. ಶಿವಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು.

ಬಿ.ಇಡಿ ಪದವಿಯಲ್ಲಿ 8ನೇ ರ‍್ಯಾಂಕ್ ಪಡೆದ ಪ್ರತಿಭಾ, 9ನೇ ರ‍್ಯಾಂಕ್ ವಿಜೇತರಾದ ಪರುಶುರಾಮ್, ಆಂಗ್ಲ ವಿಭಾಗದಲ್ಲಿ ಹೆಚ್ಚು ಅಂಕ ಗಳಿಸಿದ ಮಲ್ಲನಗೌಡ್ರು, ಅಶೋಕ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಜೊತೆಗೆ ವಸತಿ ನಿಲಯ ಪಾಲಕಿಯರಾದ ಗೀತಾ, ಲತಾ, ವೇದಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಸಂಸ್ಥೆಯ ಉಪಾಧ್ಯಕ್ಷ ಪುಟ್ಟರಾಜು, ಅಕಾಡೆಮಿಕ್ ಡೈರೆಕ್ಟರ್ ತಿಪ್ಪೇಸ್ವಾಮಿ, ನಿರ್ದೇಶಕ ನೀಲಕಂಠಯ್ಯ, ವಿಜಯಾ ಶಿವಲಿಂಗಪ್ಪ, ಬಸವರಾಜು, ವೇದಮೂರ್ತಿ ಸೇರಿದಂತೆ ಹಲವರಿದ್ದರು.

ತಾಲೂಕಿನಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ರ‍್ಯಾಂಕ್ ವಿಜೇತರಿಗೆ ಅಭಿನಂದನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

> **ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ**
> ಬಿ.ಇಡಿ ಪದವಿಯಲ್ಲಿ 8ನೇ ರ‍್ಯಾಂಕ್ ಪಡೆದ ಪ್ರತಿಭಾ, 9ನೇ ರ‍್ಯಾಂಕ್ ವಿಜೇತರಾದ ಪರುಶುರಾಮ್, ಆಂಗ್ಲ ವಿಭಾಗದಲ್ಲಿ ಹೆಚ್ಚು ಅಂಕ ಗಳಿಸಿದ ಮಲ್ಲನಗೌಡ್ರು, ಅಶೋಕ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಕಾಂಗ್ರೆಸ್ ಸರಕಾರ ದಲಿತರ ಪರ

ಚಳ್ಳಕೆರೆ: ನಮ್ಮ ಕಾಂಗ್ರೆಸ್ ಸರಕಾರ ಬಡವರ ಪರ, ದೀನ ದಲಿತರ ಪರ ಇದೆ, ನ್ಯಾಯ ಸಮ್ಮತವಾಗಿ ಯುವ ಜನತೆ ಗಮನದಲ್ಲಿಟ್ಟು ಕೊಂಡು 56 ಸಾವಿರ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ನೇಮಕಾತಿ ಮಾಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಹೇಳಿದರು.

ತಾಲೂಕಿನಲ್ಲಿ ಕಳೆದ ಎರಡು ದಿನಗಳಿಂದ ತಾಲೂಕು ಕಚೇರಿ ಮುಂದೆ ಸಂಪೂರ್ಣ ಮೀಸಲಾತಿ ಜಾರಿಗೊಳಿಸುವರೆಗೂ 56 ಸಾ. ಹುದ್ದೆ ಗಳನ್ನು ನೇಮಕಾತಿ ಮಾಡಬಾರದು ಮೀಸಲಾತಿ ಸರ್ವರಿಗೂ ಸಿಗಬೇಕು ಎಂಬ ನಿಲುವಿನ ಮೂಲಕ ಸರಕಾರದ ವಿರುದ್ಧ ನಡೆಸುತ್ತಿದ್ದ ಪ್ರತಿಭಟನೆ ಧರಣಿ ಸ್ಥಳಕ್ಕೆ ದಾವಿಸಿ ಧರಣಿ ನಿರತರೊಂದಿಗೆ ಮಾತನಾಡಿದರು.

ಇದೇ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಟಿ. ವಿಜಯ್‌ಕುಮಾರ್ ಮಾತನಾಡಿ, ದಲಿತರಿಗೆ ಸರಕಾರ ಅನ್ಯಾಯವೆಸಗುತ್ತಿದೆ, ಈ ಹಿಂದೆ ಇದ್ದ ಮೀಸಲಾತಿ, ಒಳ ಮೀಸಲಾತಿ ಕೈ ಬಿಟ್ಟು 56,432 ಹುದ್ದೆಗಳ ಭರ್ತಿಗೆ ಮುಂದಾಗಿರುವ ರಾಜ್ಯ ಕಾಂಗ್ರೆಸ್ ಸರಕಾರದ ನಡೆಯಿಂದ ಪರಿಶಿಷ್ಟ ಜಾತಿ, ಪಂಗಡಗಳಿಗೆ ಘೋರ ಅನ್ಯಾಯವಾಗಲಿದೆ , ಶೇ.56 ಮೀಸಲಾತಿ ಮತ್ತು ಒಳ ಮೀಸಲಾತಿ ಹೊರಗಿಟ್ಟು ನೇಮಕಾತಿಗೆ ಮುಂದಾಗಿರುವ ರಾಜ್ಯ ಸರಕಾರದ ಕ್ರಮ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎಂದರು.

ಶೇ.17 ಮತ್ತು ಶೇ.7ಮೀಸಲಾತಿ ಮತ್ತು ಒಳ ಮೀಸಲಾತಿ ಆಶಯಕ್ಕೆ ಅನುಗುಣವಾಗಿಯೇ ನೇಮಕವಾಗಬೇಕು. ಇಲ್ಲವಾದಲ್ಲಿ ಸರಕಾರಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ದಲಿತ ಮುಖಂಡ ಡಿ. ಚಂದ್ರು, ದ್ಯಾವರನಹಳ್ಳಿ ತಿಪ್ಪೇಸ್ವಾಮಿ, ಸುರೇಶ್, ನನ್ನಿವಾಳ ನಾಗರಾಜ್, ಶಿವಮೂರ್ತಿ, ಎನ್. ಪ್ರಕಾಶ್, ಮಲ್ಲೇಶ್, ಕಾಂತರಾಜ್, ನಾಗರಾಜ್, ಕೆ.ಕುಮಾರ್, ರಾಜು, ವೀರಭದ್ರಪ್ಪ, ದಲಿತ ಸಂಘರ್ಷ ಸಮಿತಿಯವರು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ತಾಲೂಕಿನಲ್ಲಿ ಸರಕಾರದ ವಿರುದ್ಧ ನಡೆಸುತ್ತಿದ್ದ ಪ್ರತಿಭಟನೆ ಧರಣಿ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಭೇಟಿ ನೀಡಿದ ಮಾತನಾಡಿದರು.

ನೂತನ ಕೊಠಡಿ ಕಾಮಗಾರಿಗಳಿಗೆ ಸಚಿವರಿಂದ ಶಂಕುಸ್ಥಾಪನೆ

ಹಿರಿಯೂರು ತಾಲುಕಿನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಸಭಾಭವನ ಮತ್ತು ಹೈಟೆಕ್ ಶೌಚಾಲಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಅವರು ಉದ್ಘಾಟಿಸಿ, ನೂತನ ಕೊಠಡಿ ಕಾಮಗಾರಿಗಳಿಗೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದರು.

ಹಿರಿಯೂರು: ನಗರದ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಪ್ರಾಂಶುಪಾಲರಾದ ಡಾ.ಆರ್.ಮಹೇಶ್ ವಯೋನಿವೃತ್ತಿ ಬೀಳ್ಕೊಡಿಗೆ ಸಮಾರಂಭ ಹಾಗೂ ನೂತನವಾಗಿ ನಿರ್ಮಾಣವಾಗಿರುವ ಸಭಾಭವನ ಮತ್ತು ಹೈಟೆಕ್ ಶೌಚಾಲಯ ಉದ್ಘಾಟನೆ, ನೂತನ ಕೊಠಡಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಜಿಲ್ಲಾ ಉಸ್ತುವಾರಿ ಸಚಿವರಾದ ಡಿ. ಸುಧಾಕರ್ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷರು ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಖಾದಿ ರಮೇಶ್, ಪ್ರೊ. ಧರಣೇಂದ್ರಯ್ಯ,ಪ್ರೊ.ಕಾಲೇಜು ಸಲಹಾ ಸಮಿತಿ ಸದಸ್ಯರಾದಂತ ಪ್ರೇಮ್ ಕುಮಾರ್ ,ಅಶೋಕ್ ಗಿಡ್ಡೋಬನಹಳ್ಳಿ ನಗರಸಭೆ ಆಯುಕ್ತರಾದ ಎ. ವಾಸಿಂ, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ಜ್ಞಾನೇಶ್, ವಿ ಶಿವಕುಮಾರ್, ಗಿರೀಶ್ ನಾಯಕ, ಮಧು , ಶಾಹಿದ್ ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

ಆಯುರ್ವೇದ ಪುನರ್ ಪ್ರತಿಷ್ಠಾಪಿಸಿ

ಹೊನ್ನಾಳಿ: ಮನೆಮನೆಗೂ ಯೋಗ ಎಂಬ ವಾಕ್ಯದಂತೆ ಬಾಬಾ ರಾಮದೇವ್‌ರವರ ಮಾರ್ಗದರ್ಶನದಂತೆ ತಾಲೂಕು ಜಿಲ್ಲಾ ಕೇಂದ್ರಗಳ ಪತಂಜಲಿ ಯೋಗ ಸಮಿತಿಯು ವಿವಿಧ ಸಾಮಾಜಿಕ ಕಾರ್ಯಗಳ ಹಮ್ಮಿ ಕೊಂಡು ಬರುತ್ತಿದೆ ಎಂದು ದಾವಣಗೆರೆ ಜಿಲ್ಲಾ ಪತಂಜಲಿ ಪ್ರಭಾರಿ ಸುನಿಲ್ ಕುಮಾರ್ ಹೇಳಿದರು.

ತಾಲೂಕಿನ ಮೋಹನ್ ಎನ್ ಕ್ಲೈವ್‌ನಲ್ಲಿ ನಡೆದ ಪತಂಜಲಿ ಯೋಗ ಸಮಿತಿಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಮೂಲೆ ಗುಂಪಾಗುತ್ತಿದ್ದ ಆಯುರ್ವೇದವನ್ನು ಪುನರ್ ಪ್ರತಿಷ್ಠಾಪಿಸಿ, ಹಿತ್ತಲ ಗಿಡವು ಮದ್ದು ಎನ್ನುವ ನಿಟ್ಟಿನಲ್ಲಿ ಪ್ರಧಾನಿಯವರ ಆಶಯದಂತೆ ಸ್ವದೇಶಿ ಬಳಸಿ ದೇಶ ಉಳಿಸಿ ಎಂಬುದಕ್ಕೆ ಮೆರುಗು ತರುವಂತೆ ಕೃಷಿ ಸೇವಾ ಸಮಿತಿಯು ಕಾರ್ಯನಿರ್ವಹಿಸುತ್ತಿದೆ ಎಂದರು.

ಹೊನ್ನಾಳಿ ತಾಲೂಕು ಪತಂಜಲಿ ಪ್ರಭಾರಿಗಳಾದ ಪ್ರಕಾಶ್ ಹೆಬ್ಬಾರ್ ಮಾತನಾಡಿ, ಕೃಷಿ ಸೇವಾ ಸಮಿತಿ ರಾಜ್ಯಾಧ್ಯಕ್ಷ ಸಂಜಯ್ ಕುಸ್ತಿಗಾರ್ ಹೊನ್ನಾಳಿ ಕೃಷಿ ಮೇಳದ ಸಮಾರೋಪ ಸಮಾರಂಭಕ್ಕೆ ಆಗಮಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಕಳೆದ ಮೂರು ದಿನದ ಕೃಷಿ ಮೇಳದಲ್ಲಿ ಮೊದಲ ದಿನ ದಾವಣಗೆರೆ ಜಿಲ್ಲಾ ಯೋಗ ಉಸ್ತುವಾರಿ ಅಂಜಲಿ ದೇವಿ, ಚಿತ್ರದುರ್ಗ ತಿಪ್ಪೇಸ್ವಾಮಿ ಇಂದು ಜಿಲ್ಲಾ ಪ್ರಭಾರಿ ಸುನಿಲ್‌ಕುಮಾರ್‌ನೇತೃತ್ವದಲ್ಲಿ ಬೆಳಿಗ್ಗೆ 6 ರಿಂದ 7 ರವರೆಗೆ ಕೃಷಿ ಮೇಳದ ವೇದಿಕೆಯಲ್ಲಿ ಯೋಗ ನಡೆಸಿಕೊಂಡು ಬಂದಿದೆ.

ಇಂದು ಬೆಳಿಗ್ಗೆ ಯೋಗ ಗುರು ಭವರ್‌ಲಾಲ್ ಅವರ ನೇತೃತ್ವದಲ್ಲಿ ಯೋಗಾಧ್ಯಾನ ತರಬೇತಿ ನಡೆಯಲಿದ್ದು, ಯೋಗಾಸಕ್ತರು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸಮಿತಿ ಉಪಾಧ್ಯಕ್ಷ ರಾಘವೇಂದ್ರ ವೈಶ್ಯರ್,ಕಾರ್ಯದರ್ಶಿ ಎಂ.ಬಿ ರುದ್ರೇಶ್, ಖಜಾಂಚಿ ಶ್ರೀಕಾಂತ್, ಸಹಕಾರ್ಯದರ್ಶಿಗಳಾದ ಸುರೇಶ್ ಕುಂಬಾರ್, ಜಗದೀಶ್ ಆಚಾರ್, ಸಮಿತಿಯ ಚನ್ನೇಶ್ ಜಕ್ಕಾಳಿ, ಅರುಣ್‌ಕುಮಾರ್, ರವಿ ಕುಮಾರ್‌ಉಪಸ್ಥಿತರಿದ್ದರು.

ತಾಲೂಕಿನ ಮೋಹನ್ ಎನ್ ಕ್ಲೈವ್‌ನಲ್ಲಿ ಹಮ್ಮಿಕೊಂಡ ಪತಂಜಲಿ ಯೋಗ ಸಮಿತಿಯ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ಪತಂಜಲಿ ಪ್ರಭಾರಿ ಸುನೀಲ್ ಕುಮಾರ್ ವಹಿಸಿದ್ದರು. ಕೃಷಿ ಸೇವಾ ಸಮಿತಿ ರಾಜ್ಯಾಧ್ಯಕ್ಷ ಸಂಜಯ್ ಕುಸ್ತಿಗಾರ್ ಹಾಗೂ ಹೊನ್ನಾಳಿ ತಾಲೂಕು ಸಮಿತಿಯವರು ಭಾಗವಹಿಸಿದ್ದರು.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ. ಹರಿಹರ.
ಸಿ.ಆರ್.ಮಿಸ್. ನಂ: 276/2026
ಅರ್ಜಿದಾರರು : ಶ್ರೀಮತಿ ದಿವ್ಯ ಎಂ. ಕೋಂ ಚಂದ್ರಶೇಖರ್ ಬಿನ್ ಲೇಟ್ ಮಲ್ಲಿಕಾರ್ಜುನಪ್ಪ ವಯಸ್ಸು : 33 ವರ್ಷ, ವಾಸ; ಮನೆ ನಂ, 214/1, ವಸಂತ ಟಾಕೀಸ್ ಹತ್ತಿರ ವಕ್ಕಲಿಗರ ಪೇಟೆ, ದಾವಣಗೆರೆ
–:ವಿರುದ್ಧ: –
ಎದುರುದಾರರು : ಮಾನ್ಯ ತಹಶೀಲ್ದಾರ್‌ರು. ಜನನ ಮತ್ತು ಮರಣ ನೊಂದಾಣಾಧಿಕಾರಿಗಳು, ಹರಿಹರ ತಾಲ್ಲೂಕು,ಹರಿಹರ.
ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು
ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ತಮ್ಮ ತಾಯಿಯಾದ ಸಾವಿತ್ರಮ್ಮ ಕೊಂ ಮಲ್ಲಿಕಾರ್ಜುನಪ್ಪ ಇವರು ದಿನಾಂಕ;02–05–1997 ರಂದು ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದಲ್ಲಿ ಮರಣ ಹೊಂದಿದ್ದು, ಸದರಿಯವರ ಇವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದ್ದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ; 18–04–2026 ರಂದು ಖುದ್ದು ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷಿಯವಾಗಿ ತಿರ್ಮಾನಿಸಲಾಗುವುದು.
ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ: 25-02-2026 ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಅರ್ಜಿದಾರರ ಪರ ವಕೀಲರು
ರಘು ಹೆಚ್
ಶಿರಸ್ತೇದಾರರು
ಸ್ಥಳ : ಹರಿಹರ
ದಿನಾಂಕ;25-02-2026
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.

ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ | ವಿದ್ಯಾರ್ಥಿಗಳಿಗೆ ಎಸ್.ಪಿ ಶೇಖರ್ ಸಲಹೆ

ಇಂದಿನ ಜ್ಞಾನ ನಾಳಿನ ತಂತ್ರಜ್ಞಾನದ ಬೆಳವಣಿಗೆಗೆ ಪೂರಕವಾಗಿರಲಿ

ದಾವಣಗೆರೆ: ವಿಜ್ಞಾನ ಕೇವಲ ಪಠ್ಯಪುಸ್ತಕಕ್ಕೆ ಮಾತ್ರ ಸೀಮಿತವಲ್ಲ ಇಂದಿನ ಈ ಜ್ಞಾನ ನಾಳಿನ ತಂತ್ರಜ್ಞಾನದ ಬೆಳವಣಿಗೆಗೆ ಪೂರಕವಾಗಬೇಕು. ವಿದ್ಯಾರ್ಥಿಗಳು ವಿಜ್ಞಾನವನ್ನು ಕೇವಲ ಪರೀಕ್ಷೆಗೆ ಮಾತ್ರ ಓದದೆ ಪ್ರಶ್ನಿಸುವ ಮನೋಭಾವ ಮತ್ತು ಸಂಶೋಧನಾ ಚಿಂತನೆ ಬೆಳೆಸಿಕೊಳ್ಳಲು ಬಳಸಿಕೊಳ್ಳಬೇಕು ಎಂದು ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಎಚ್ .ಟಿ ಹೇಳಿದರು.

ಹರಿಹರ ತಾಲೂಕಿನ ಕೊಂಡಜ್ಜಿಯ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ದೇಶದ ಭವಿಷ್ಯ ಮಕ್ಕಳಲ್ಲಿದೆ. ಮಕ್ಕಳಲ್ಲಿ ಕುತೂಹಲ, ಪರಿಶ್ರಮ, ಸತ್ಯನಿಷ್ಠೆ ಹಾಗೂ ಪೋಷಕರನ್ನು ಗೌರವಿಸುವ ಮನೋಭಾವ ಇರಬೇಕು.

ಅಷ್ಟೇ ಅಲ್ಲದೆ ಜೀವನದಲ್ಲಿ ಬರುವಂತಹ ಕಷ್ಟಗಳನ್ನು ಮೆಟ್ಟಿ ನಿಲ್ಲುವ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಿಜ್ಞಾನವು ಸಮಾಜದ ಅಭಿವೃದ್ಧಿಗೆ ದಾರಿ ತೋರಿಸುವ ಬೆಳಕು ಅದನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳಿ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ನಗರದ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಉದ್ಘಾಟಿಸಿದ ನಂತರ ಮಕ್ಕಳು ಪ್ರದರ್ಶಿಸಿದ ಮಾದರಿಗಳನ್ನು ಪ್ರಶಂಶಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಲಿಂಗರಾಜ್ ಮಾತನಾಡಿ, ಸರ್ ಸಿ.ವಿ ರಾಮನ್‌ರ ಪರಿಣಾಮವಾಗಿ ಇಂದು ನಾವು ಆಚರಿಸುತ್ತಿರುವ ವಿಜ್ಞಾನ ದಿನಾಚರಣೆ ಕೇವಲ ಒಂದು ದಿನಾಚರಣೆ ಅಲ್ಲ, ಇದು ಜ್ಞಾನಕ್ಕೆ, ಸಂಶೋಧನೆಗೆ ಹಾಗೂ ಚಿಂತನೆಗೆ ನೀಡುವ ಗೌರವಾಗಿದೆ.

ಹಾಗಾಗಿ, ಈ ಎಲ್ಲಾ ಮನೋಭಾವಗಳು ನಮ್ಮಲ್ಲಿ ಬೆಳೆಯಬೇಕಾದರೆ ನಮಗೆ ವ್ಯವಸ್ಥಿತವಾದ ಜ್ಞಾನ ಬೇಕು. ಆದ್ದರಿಂದ ವಿದ್ಯಾರ್ಥಿಗಳು ಪ್ರಶ್ನೆಯನ್ನು ಕೇಳುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದರು.

ಪ್ರಶ್ನೆಯೇ ಸಂಶೋಧನೆಯ ಮೊದಲ ಹೆಜ್ಜೆ. ಉತ್ತಮ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕುತೂಹಲ ಹುಟ್ಟಿಸುತ್ತಾ ಗುರಿಯಡೆಗೆ ದಾರಿ ತೋರಿಸಬೇಕು. ವಿದ್ಯಾರ್ಥಿಗಳು ತಮ್ಮ ಕನಸುಗಳನ್ನು ದೊಡ್ಡದಾಗಿಸಿಕೊಂಡು ತಮ್ಮ ಗುರಿ ಕಡೆಗೆ ಸಾಗಬೇಕು. ಗುರಿ ಇಲ್ಲದ ಜೀವನ ಚುಕ್ಕಾಣಿ ಇಲ್ಲದ ಹಡಗಿನಂತೆ ಎಂದರು.

ಈ ಸಂಸರ್ಭದಲ್ಲಿ ಶಾಲೆಯಲ್ಲಿರುವ ಮಕ್ಕಳು ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ರೀತಿಯ ಮಾದರಿಗಳನ್ನು ಪ್ರದರ್ಶಿಸಿದನ್ನು ವಿಕ್ಷಿಸಿದ ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಎಚ್ .ಟಿ. ಅವರು ಮಕ್ಕಳನ್ನು ಪ್ರಶಂಶಿಸಿದರು.

ಈ ಕಾರ್ಯಕ್ರಮದಲ್ಲಿ ದಾವಣಗೆರೆ ಡಿಎಆರ್ ಪೊಲೀಸ್ ಉಪಾಧೀಕ್ಷ ಪ್ರಕಾಶ್ ಪಿ. ಬಿ., ಪ್ರಾಂಶುಪಾಲರಾದ ಚಂಪಸತೀಶ್ ಸೇರಿದಂತೆ ಅತಿಥಿಗಳಾಗಿ ಆಗಮಿಸಿದ ಮುಖ್ಯಸ್ಥರು, ಶಾಲೆಯ ಶಿಕ್ಷಕ ವೃಂದದವರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> ದೇಶದ ಭವಿಷ್ಯ ಮಕ್ಕಳಲ್ಲಿದೆ. ಮಕ್ಕಳಲ್ಲಿ ಕುತೂಹಲ, ಪರಿಶ್ರಮ, ಸತ್ಯನಿಷ್ಠೆ ಹಾಗೂ ಪೋಷಕರನ್ನು ಗೌರವಿಸುವ ಮನೋಭಾವ ಇರಬೇಕು. ಜೀವನದಲ್ಲಿ ಬರುವಂತಹ ಕಷ್ಟಗಳನ್ನು ಮೆಟ್ಟಿ ನಿಲ್ಲುವ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ವಿಜ್ಞಾನವು ಸಮಾಜದ ಅಭಿವೃದ್ಧಿಗೆ ದಾರಿ ತೋರಿಸುವ ಬೆಳಕು ಅದನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸಬೇಕು.
> –ಶೇಖರ್ ಎಚ್.ಟಿ, ಪೊಲೀಸ್ ವರಿಷ್ಠಾಧಿಕಾರಿ

> **ಮಕ್ಕಳಿಗೆ ವ್ಯವಸ್ಥಿತವಾದ ಜ್ಞಾನ ಅವಶ್ಯಕ**
> ಸರ್ ಸಿ.ವಿ. ರಾಮನ್‌ರ ಪರಿಣಾಮವಾಗಿ ಇಂದು ನಾವು ಆಚರಿಸುತ್ತಿರುವ ವಿಜ್ಞಾನ ದಿನಾಚರಣೆ ಕೇವಲ ಒಂದು ದಿನಾಚರಣೆ ಅಲ್ಲ. ಇದು ಜ್ಞಾನಕ್ಕೆ, ಸಂಶೋಧನೆಗೆ ಹಾಗೂ ಚಿಂತನೆಗೆ ನೀಡುವ ಗೌರವ. ಹಾಗಾಗಿ, ಈ ಎಲ್ಲಾ ಮನೋಭಾವಗಳು ನಮ್ಮಲ್ಲಿ ಬೆಳೆಯಬೇಕಾದರೆ ನಮಗೆ ವ್ಯವಸ್ಥಿತವಾದ ಜ್ಞಾನ ಬೇಕು. ಆದ್ದರಿಂದ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವ ಅಭ್ಯಾಸ ಬೆಳೆಸಿಕೊಳ್ಳಬೇಕು.

ಸಮಾಚಾರ ಸಣ್ಣದಲ್ಲ

ರಿಕ್ಷಾ ಚಾಲಕರ ಮಾಲಕರ ಸಂಘದ ಅಧ್ಯಕ್ಷರ ಆಯ್ಕೆ

ಉಡುಪಿ: ಕಾರ್ಕಳ ಆಟೋ ರಿಕ್ಷಾ ಚಾಲಕರ – ಮಾಲಕರ ಸಂಘ ಅಧ್ಯಕ್ಷರಾಗಿ ನ್ಯಾಯವಾದಿ, ಬೈಲೂರು ಸದಾನಂದ ಸಾಲಿಯಾನ್ ಅವರು ಆಯ್ಕೆಯಾಗಿದ್ದಾರೆ.

ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವ ಸದಾನಂದ ಸಾಲಿಯಾನ್ ಅವರು ಕಾರ್ಕಳ ವಕೀಲರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಬೈಲೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಕಾರ್ಯದರ್ಶಿಯಾಗಿ, ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಕರಕರಿ ಫ್ರೆಂಡ್ಸ್‌ನಲ್ಲೂ ತೊಡಗಿಸಿಕೊಂಡಿದ್ದಾರೆ. ವೈಕುಂಠ ಬಾಳಿಗ ಲಾ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದು 2005ರಲ್ಲಿ ಕಾರ್ಕಳದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿರುತ್ತಾರೆ.

ಚಿನ್ನದ ಒಡವೆ ಪಾಲೀಶ್ ವಂಚನೆ: ಬಂಧನ

ವೇಣೂರು: ಚಿನ್ನದ ಒಡವೆಗಳನ್ನು ಪಾಲೀಶ್ ಮಾಡಿಕೊಡುವುದಾಗಿ ನಂಬಿಸಿ ಸಾರ್ವಜನಿಕರಿಗೆ ವಂಚಿಸುತ್ತಿದ್ದ ಬಿಹಾರ ಮೂಲದ ವ್ಯಕ್ತಿಯೊಬ್ಬನನ್ನು ವೇಣೂರು ಪೊಲೀಸರು ಬಂಧಿಸಿದ್ದಾರೆ. ಬಿಹಾರದ ಸುಪೌಲ್ ಜಿಲ್ಲೆಯ ನಿವಾಸಿ ಚಂದನ್ ಕುಮಾರ್(30) ಬಂಧಿತ ಆರೋಪಿ. ಈತ ಫೆಬ್ರವರಿ 10ರಂದು ಬೆಳ್ತಂಗಡಿ ತಾಲೂಕಿನ ಕಾಶಿಪಟ್ಣ ಗ್ರಾಮದ ಪಣಿಲಾಜೆ ಎಂಬಲ್ಲಿ ಸೇಲ್ಸ್‌ಮ್ಯಾನ್ ಸೋಗಿನಲ್ಲಿ ಮನೆಗೆ ತೆರಳಿ, ದ್ರಾವಣವೊಂದನ್ನು ಬಳಸಿ ಚಿನ್ನವನ್ನು ಕರಗಿಸಿ ವಂಚಿಸಿದ್ದ ಎನ್ನಲಾಗಿದೆ. ಈ ಬಗ್ಗೆ ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಾರ್ಯಾಚರಣೆ ನಡೆಸಿದ ವೇಣೂರು ಉಪನಿರೀಕ್ಷಕರಾದ ಅಕ್ಷಯ್ ಡವಗಿ ಹಾಗೂ ಓಮನ ಎನ್. ನೇತೃತ್ವದ ತಂಡ ಆರೋಪಿಯನ್ನು ದಸ್ತಗಿರಿ ಮಾಡಿದೆ. ಬಂಧಿತನಿಂದ ಸುಮಾರು 75,000 ರೂ. ಮೌಲ್ಯದ 7 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದು, ಈ ಪತ್ತೆ ಕಾರ್ಯದಲ್ಲಿ ಎಎಸ್‌ಐಗಳಾದ ವೆಂಕಟೇಶ್ ನಾಯ್ಕ, ಬೆನ್ನಿಚ್ಚನ್ ಹಾಗೂ ಸಿಬ್ಬಂದಿಗಳಾದ ಕೃಷ್ಣ, ಕೇಶವತಿ, ಬಸವರಾಜ್, ಮೋಹನ್ ಮತ್ತು ರಾಕೇಶ್ ಭಾಗವಹಿಸಿದ್ದರು.

ಮ್ಯಾರಥಾನ್ ವೇಳೆ ಕುಸಿದು ಎಸ್‌ಐ ಸಾವು

ಉಡುಪಿ: ಕುಂದಾಪುರ ಕಂಡ್ಲೂರು ಪೊಲೀಸ್ ಠಾಣೆಯ ಎಸ್‌ಐ ನಾಸೀರ್‌ಹುಸೇನ್ (58) ಮಾ.1 ರಂದು ಹೃದಯಾಘಾತದಿಂದ ನಿಧನ ಹೊಂದಿದರು. ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಉಡುಪಿ ಅಜ್ಜರಕಾಡು ಮೈದಾನದಲ್ಲಿ ನಡೆಯುತ್ತಿದ್ದ ನಮ್ಮ ಪೊಲೀಸ್ ನಮ್ಮ ಹೆಮ್ಮೆ, ಎಲ್ಲರಿಗೂ ಫಿಟ್ನೆಸ್ ಡಬ್ ಫ್ರೀ ಕರ್ನಾಟಕ ಸೈಬರ್‌ಜಾಗೃತಿಗಾಗಿ ನಡೆದ 5 ಕಿ.ಮೀ ಮ್ಯಾರಥಾನ್ ಓಟದಲ್ಲಿ ಪಾಲ್ಗೊಂಡಿದ್ದ ವೇಳೆ ಕುಸಿದು ಬಿದ್ದಿದ್ದರು. ಕೂಡಲೇ ಅವರನ್ನು ಉಡುಪಿ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಈ ವೇಳೆಗಾಗಲೇ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರಿನವರಾದ ನಾಸಿರ್‌ಹುಸೇನ್ ಅವರು ಉಡುಪಿ ಜಿಲ್ಲೆಯ ಅಮಾಸೆಬೈಲು, ಕುಂದಾಪುರ ನಗರ, ಕುಂದಾಪುರ ಸಂಚಾರ ಠಾಣೆ, ಶಂಕರನಾರಾಯಣ, ಕಾರ್ಕಳ ಗ್ರಾಮಾಂತರ ಸೇರಿದಂತೆ ವಿವಿಧ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ಕಂಡ್ಲೂರಿನ ಗ್ರಾಮಾಂತರ ಪೊಲೀಸ್ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪನಿರೀಕ್ಷಕರಾಗಿ ಕರ್ತವ್ಯ ಸಲ್ಲಿಸುತ್ತಿದ್ದರು. ಮೃತರು ಪತ್ನಿ, ಒಬ್ಬ ಪುತ್ರಿ ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

ಬೈಕಿಗೆ ಇಕೋ ಕಾರು ಡಿಕ್ಕಿ: ಇಬ್ಬರ ಮರಣ

ಉಡುಪಿ: ಬೈಕ್ಗೆ ಕಾರು ಡಿಕ್ಕಿಯಾಗಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ದಾರುಣ ಘಟನೆ ಫೆ. 28ರಂದು ಕುಕ್ಕುಂದೂರು ಗ್ರಾಮದ ಅಯ್ಯಪ್ಪನಗರದಲ್ಲಿ ಸಂಭವಿಸಿದೆ. ಉಡುಪಿಯಿಂದ ಕಾರ್ಕಳದ ಕಡೆಗೆ ವೇಗವಾಗಿ ಬರುತ್ತಿದ್ದ ಇಕೋ ಕಾರು ಮತ್ತು ಕಾರ್ಕಳದಿಂದ ಬೈಲೂರಿನತ್ತ ಸಾಗುತ್ತಿದ್ದ ಬೈಕ್ ನಡುವೆ ಅಯ್ಯಪ್ಪ ನಗರದ ವಿಜೇತ ವಿಶೇಷ ಶಾಲಾ ಮುಂಭಾಗ ಅಪಘಾತ ಸಂಭವಿಸಿದೆ. ಪರಿಣಾಮವಾಗಿ ಬೈಕ್ ಸವಾರರಾದ ಎರ್ಲಪಾಡಿ ಗೋವಿಂದೂರಿನ ಶಿವಾನಂದ (19) ಹಾಗೂ ಮತ್ತವರ ಸಂಬಂಧಿ ರಕ್ಷಿತ್ (18) ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಸಹಕಾರಿ ವ್ಯವಸ್ಥೆಯಲ್ಲಿ ಎಸ್ಸಿಡಿಸಿಸಿ ಅಗ್ರಸ್ಥಾನ

ಮಂಗಳೂರು: ದೇಶದ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎಸ್ಸಿಡಿಸಿಸಿ ಬ್ಯಾಂಕ್ ಅಗ್ರಸ್ಥಾನದಲ್ಲಿದೆ. ಉತ್ಕೃಷ್ಟ ಬ್ಯಾಂಕಿಂಗ್ ವ್ಯವಸ್ಥೆಯ ಜತೆಗೆ ಇದೀಗ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಮೂಲಕ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಅಳವಡಿಸಿರುವ ಎಸ್ಸಿಡಿಸಿಸಿ ಬ್ಯಾಂಕ್, ಡಾ.ಎಂ.ಎನ್. ರಾಜೇಂದ್ರ ಕುಮಾರ ಅವರ ಸಮರ್ಥ ಅಧ್ಯಕ್ಷತೆಯಲ್ಲಿ ಗಣನೀಯ ಪ್ರಗತಿಯನ್ನು ಕಂಡು ದೇಶಕ್ಕೆ ಮಾದರಿ ಯಾಗಿದೆ ಎಂದು ನಬಾರ್ಡ್ ಸಿಜಿಎಂ. ಡಾ. ಸುರೇಂದ್ರ ಬಾಬು ಹೇಳಿದ್ದಾರೆ.

{ ಡಿ.ಕೆ.ಸುರೇಶ್ } ಬಮೂಲ್ ಅಧ್ಯಕ್ಷ

ಕೃಷಿ ಕ್ಷೇತ್ರದಲ್ಲಿ ರೈತರಿಗೆ ಆದಾಯ ತಂದು ಕೊಡುತ್ತಿರುವುದು ಹಾಲು ಮತ್ತು ರೇಷ್ಮೆ ಕ್ಷೇತ್ರ ಮಾತ್ರ. ಕ್ಷೀರ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆ ತರುವ ಕೆಲಸ ಆಗುತ್ತಿವೆ. ಇನ್ನು ಮುಂದೆ ಸರಕಾರಿ, ಖಾಸಗಿ ವಲಯದಲ್ಲಿ ಯುವಕರಿಗೆ ಎಲ್ಲೂ ಕೆಲಸ ಸಿಗಲ್ಲ. ಹಾಗಾಗಿ ದುಡಿಯುವ ಕೈಗಳಿಗೆ ಮಾತ್ರ ಆದಾಯ ಸಿಗುತ್ತದೆ. ಕೃಷಿ ಕ್ಷೇತ್ರವೇ ಜೀವನಾಧಾರವೂ ಆಗುತ್ತದೆ.

ವಿಶೇಷ ಚೇತನರಿಗೆ ಸೌಲಭ್ಯ ಒದಗಿಸಿ

ಪದವಿನಂಗಡಿ ದೇವಿನಗರದಲ್ಲಿ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮ

ಮಂಗಳೂರು: ಸಮಾಜದಲ್ಲಿ ಸಮಾನವಾಗಿ ಪ್ರಗತಿ ಸಾಧಿಸಲು ವಿಶೇಷಚೇತನರಿಗೆ ಅರ್ಹವಾಗಿ ದೊರಕಬೇಕಾದ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಒದಗಿಸಬೇಕು ಎಂದು ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ ಶಾಹೀದ್ ತೆಕ್ಕಿಲ್ ತಿಳಿಸಿದರು.

ಪದವಿನಂಗಡಿ ದೇವಿನಗರದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಕಾರ್ಖಾನೆಗಳು, ಬಾಯ್ಲರ್ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಸಾರಿಗೆ ಇಲಾಖೆ ಇವರ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಚೇತನರಿಗೆ ವಿವಿಧ ಉದ್ಯೋಗದಾತರ ಪ್ರಾಯೋಜಿತ ಯಾಂತ್ರಿಕ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಶೇಷ ಚೇತನರು ಸಮಾಜದಲ್ಲಿ ಯಾವುದೇ ಕೊರತೆಯಾಗದಂತೆ ಪ್ರಗತಿ ಸಾಧಿಸಬೇಕು. ವಿವಿಧ ಇಲಾಖೆಗಳು ಸೌಲಭ್ಯಗಳನ್ನು ವಿಳಂಬವಿಲ್ಲದೆ ನೀಡಬೇಕು. ಇತರರಂತೆ ಅವರು ದುಡಿಯಲು ಈ ಸೌಲಭ್ಯಗಳು ಪೂರಕವಾಗಬೇಕು. ಕಾರ್ಮಿಕರ ಜೀವನ ಉತ್ತಮವಾಗಿರಲು ಅವರಿಗೆ ಕನಿಷ್ಠ ವೇತನ ಒದಗಿಸಲು ರಾಜ್ಯ ಸರಕಾರ ಬದ್ಧವಾಗಿದೆ ಎಂದರು.

ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಲವೀನಾ ಪಿಂಟೋ ಮಾತನಾಡಿ, ವಿಶೇಷಚೇತನರು ಮುಕ್ತವಾಗಿ ಸಂಚರಿಸಲು ಅವರಿಗೆ ತ್ರಿಚಕ್ರ ವಾಹನ ನೀಡುತ್ತಿರುವುದು ಶ್ಲಾಘನೀಯ ಎಂದರು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಮಾತನಾಡಿ, ಹೊರಗುತ್ತಿಗೆಯಲ್ಲಿರುವ ಮಹಿಳಾ ನೌಕರರಿಗೆ ಹೊರಗುತ್ತಿಗೆ ಸಂಸ್ಥೆಗಳು ಮಾತೃತ್ವ ರಜೆ ಹಾಗೂ ಋತುಮತಿ ರಜೆಯನ್ನು ನೀಡಲು ನಿರಾಕರಿಸುತ್ತಿರುವ ಪ್ರಕರಣಗಳು ಕಂಡುಬಂದಿದ್ದು, ಅಂತಹ ಏಜೆನ್ಸಿಗಳ ವಿರುದ್ಧ ಕಾರ್ಮಿಕ ಇಲಾಖೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕೊಂಕಣಿ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನ್ಲಿ ಅಲ್ವಾರಿಸ್, ನಗರಾಭಿವೃದ್ಧಿ ಪ್ರಾಧಿಕಾರ ಸದಾಶಿವ ಉಳ್ಳಾಲ, ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ, ಕಾರ್ಖಾನೆಗಳ ಉಪನಿರ್ದೇಶಕ ರಾಜೇಶ್ ಮಿಶ್ರಿಕೋಟಿ, ಎಂ.ಆರ್.ಪಿ.ಎಲ್ ಆಡಳಿತ ಸಿಜಿಎಂ ಪ್ರಶಾಂತ್ ಬಾಳಿಗ ಉಪಸ್ಥಿತರಿದ್ದರು.

ಕಾರ್ಮಿಕ ಅಧಿಕಾರಿ ಕುಮಾರ್‌ಸ್ವಾಗತಿಸಿದರು, ವಿಲ್ಮಾ ಎಲಿಜಬೆತ್ ವಂದಿಸಿದರು. ಸಮಾರಂಭದಲ್ಲಿ ಸುಮಾರು 90 ತ್ರಿಚಕ್ರ ಸ್ಕೂಟರ್‌ವಿತರಿಸಲಾಯಿತು.

ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ ಶಾಹೀದ್ ತೆಕ್ಕಿಲ್ ಅವರು ವಿಶೇಷಚೇತನರಿಗೆ ಯಾಂತ್ರಿಕ ತ್ರಿಚಕ್ರ ವಾಹನಗಳನ್ನು ವಿತರಿಸಿದರು.

ರಕ್ತನಿಧಿ ಕೇಂದ್ರದಿಂದ ಪ್ರಮಾಣ ಪತ್ರ ವಿತರಣೆ

ಮಂಗಳೂರು: ನಗರದ ಲೇಡಿಗೋಶನ್ ಆಸ್ಪತ್ರೆ ಆವರಣದಲ್ಲಿರುವ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ರಕ್ತನಿಧಿ ಕೇಂದ್ರದಲ್ಲಿ ಒಂದು ತಿಂಗಳು ಪ್ರಾಯೋಗಿಕ ತರಬೇತಿ ಪಡೆದ ದ್ವಿತೀಯ ಬ್ಯಾಚ್ನ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಪ್ರಮಾಣ ಪತ್ರ ವಿತರಿಸಿದ ಉಪನ್ಯಾಸಕಿ, ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿಯ ಸದಸ್ಯೆ ಡಾ. ಸುಮನ.ಬಿ. ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯರು ನೀಡುವ ಸೇವೆಯೊಂದಿಗೆ ದಾದಿಯರು ಹಾಗೂ ಸಹಾಯಕ ಸಿಬ್ಬಂದಿ ನೀಡುವ ಸೇವೆಯೂ ಅತ್ಯಮೂಲ್ಯವಾಗಿದೆ. ಅರೆ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಸಂಬಂಧಿಸಿ ಪಡೆಯುವ ತರಬೇತಿ ಹಾಗೂ ಕೌಶಲ್ಯಾಭಿವೃದ್ಧಿ ಭವಿಷ್ಯದಲ್ಲಿ ವೃತ್ತಿ ಜೀವನಕ್ಕೆ ನೆರವಾಗುತ್ತದೆ ಎಂದರು.

ರಕ್ತನಿಧಿ ಕೇಂದ್ರದ ತಾಂತ್ರಿಕ ಮೇಲ್ವಿಚಾರಕಿ ಮರಿಯಾ ಆರತಿ ಸೋನ್ಸ್ ಮಾತನಾಡಿ, ವಿದ್ಯಾರ್ಥಿಗಳು ರಕ್ತ ಸಂಗ್ರಹ, ವರ್ಗೀಕರಣ, ರಕ್ತ ಹೊಂದಾಣಿಕೆ ಪರೀಕ್ಷೆ, ರಕ್ತದ ಘಟಕಗಳ ವರ್ಗೀಕರಣ ಸಹಿತ ಬ್ಲಡ್‌ಬ್ಯಾಂಕ್ಗೆ ಪೂರಕವಾದ ಪ್ರಾಯೋಗಿಕ ತರಬೇತಿ ಪಡೆದಿದ್ದು ಉದ್ಯೋಗಕ್ಕೆ ನೆರವಾಗಲು ಪ್ರಮಾಣ ಪತ್ರ ನೀಡಲಾಗಿದೆ ಎಂದರು.

ರೆಡ್‌ಕ್ರಾಸ್ ಜಿಲ್ಲಾ ಘಟಕದ ಆಡಳಿತ ಮಂಡಳಿ ಸದಸ್ಯರಾದ ಗುರುದತ್ ನಾಯಕ್, ಪಿ.ಬಿ. ಹರೀಶ್ ರೈ, ಕಾರ್ಯದರ್ಶಿ ಕಿಶೋರ್ಚಂದ್ರ ಹೆಗ್ಡೆ, ರಕ್ತನಿಧಿ ಕೇಂದ್ರದ ತಂತ್ರಜ್ಞರಾದ ಪ್ರಿಯಾ, ಪ್ರತ್ಯಕ್ಷಿ, ನಾಗಭೂಷಣ್, ಪ್ರಿಯದರ್ಶಿನಿ, ವತ್ಸಲಾ ಉಪಸ್ಥಿತರಿದ್ದರು.

ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ರಕ್ತನಿಧಿ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಯುದ್ಧ: ನೆರವಿಗೆ ಸಹಾಯವಾಣಿ

ದಾವಣಗೆರೆ: ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು ಮಾರ್ಚ್ 2ರವರೆಗೆ ಮುಚ್ಚಲಾಗಿದೆ. ಈ ಅಡಚಣೆಯಿಂದಾಗಿ ಹಾಗೂ ಕರ್ನಾಟಕದ ಅನೇಕ ಪ್ರಯಾಣಿಕರು ಯುಎಇ (ದುಬೈ) ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 247 ಕಾರ್ಯನಿರ್ವಹಿಸುತ್ತಿವೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ರಾಯಭಾರಿ ಕಚೇರಿಗಳು ನೀಡುವ ಸೂಚನೆಗಳನ್ನು ಜಿಲ್ಲಾಡಳಿತ ನಿರಂತರವಾಗಿ ಗಮನಿಸುತ್ತಿದೆ. ಜಿಲ್ಲೆಯ ನಿವಾಸಿಗಳು ಸಹಾಯವಾಣಿ ಸಂಖ್ಯೆಗಳಿಗೆ ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ದಾವಣಗೆರೆ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 08192-234034 ಸಂಪರ್ಕಿಸಬಹುದು:

1077 ಟೋಲ್ ಫ್ರೀ ರ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080-22340676, 080-22253707 , ಟೋಲ್ ಫ್ರೀ ಸಂಖ್ಯೆ: 1070 ಗೆ ಕರೆ ಮಾಡಿ ಮಾಹಿತಿ ಹಾಗೂ ಸಹಾಯ ಪಡೆಯಬಹುದು.

ಮಧ್ಯಪ್ರಾಚ್ಯ ದೇಶಗಳಲ್ಲಿರುವ ಕರ್ನಾಟಕದ ನಿವಾಸಿಗಳು ಹಾಗೂ ದಾವಣಗೆರೆ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆ ಮಾಡಬೇಕು ಅಥವಾ ''ಸಾರಥಿ ಸಹಾಯ'' ಪೋರ್ಟಲ್ನಲ್ಲಿ ನೋಂದಾಯಿಸಿಕೊಳ್ಳಬೇಕು. ವಿಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್.ಆರ್.ಆರ್.ಓ ಕಚೇರಿಯನ್ನು ಸಂಪರ್ಕಿಸಬೇಕೆಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಬಾಕಿಯ ನೆಪದಲ್ಲಿ ವಿದ್ಯುತ್ ಕಡಿತ: ಶಾಸಕ ಸುನಿಲ್ ಕಿಡಿ

ಉಡುಪಿ: ಎಣ್ಣೆಹೊಳೆ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಸ್ಥಗಿತವಾಗಿರುವ ಕುರಿತು ಶಾಸಕ ವಿ. ಸುನಿಲ್ ಕುಮಾರ್‌ಸರಕಾರದ ವಿರು ದ್ಧ ಹರಿಹಾಯ್ದಿದ್ದಾರೆ. ಆಳುವ ಸರಕಾರ ದಿವಾಳಿಯಾದಾಗ ಅಥವಾ ದೃಷ್ಟಿ, ಶ್ರವಣ ದೋಷ ಪೀಡಿತವಾದಾಗ ಮಾತ್ರ ಇಂಥದೊಂದು ಜನವಿರೋಧಿ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂದು ಸುನಿಲ್ ಕುಮಾರ್‌ಟ್ವೀಟ್ ಮಾಡಿದ್ದಾರೆ.

ಈ ಯೋಜನೆಯ ಸ್ಥಾಪನೆಯ ಉದ್ದೇಶವೇ ನೀರಾವರಿ ಹಾಗೂ ರೈತ ಕಲ್ಯಾಣ.

ರಾಜ್ಯದಲ್ಲಿ ಈಗ ಬೇಸಿಗೆ ಪ್ರಾರಂಭವಾಗಿದ್ದು ನೀರಿನ ಸಮಸ್ಯೆ ಹಿಂದಿನ ವರ್ಷಗಳಿಗಿಂತ ತೀವ್ರ ಪ್ರಮಾಣದಲ್ಲಿ ಬಾಧಿಸುವ ಸಾಧ್ಯತೆ ಇದೆ. ಇಂಥ ಸಂದರ್ಭದಲ್ಲಿ ಈ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ 2 ಕೋಟಿ ರೂ.ಗೂ ಅಧಿಕ ವಿದ್ಯುತ್ ಬಾಕಿ ನೆಪದಲ್ಲಿ ಸಂಪರ್ಕ ಕಡಿತ ಮಾಡಿರುವುದು ರೈತ ವಿರೋಧಿ ಕ್ರಮ ಎಂದು ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಇಂಧನ ಇಲಾಖೆಯ ನಿರ್ವಹಣೆ ಹಾಳು ಬಿದ್ದು ಹೋಗಿದೆ. ಹೀಗಾಗಿ ಮೆಸ್ಕಾಂ ಏತ ನೀರಾವರಿ ಯೋಜನೆಯ ಸಂಪರ್ಕ ಕಡಿತಗೊಳಿಸಿ ಮೂರು ದಿನ ಕಳೆದರೂ ಸರಕಾರ ಮೌನಕ್ಕೆ ಶರಣಾಗಿದೆ. ಸರಕಾರದ ಈ ಕ್ರಮವನ್ನು ಉಗ್ರವಾಗಿ ಖಂಡಿಸುತ್ತೇನೆ. ಅನ್ನದಾತರ ಬದುಕಿನೊಟ್ಟಿಗೆ ಆಟವಾಡಬೇಡಿ ಎಂದು ಸುನಿಲ್ ಕಿಡಿಕಾರಿದ್ದಾರೆ.

ಕಟೀಲು ಶಿವಳ್ಳಿ ಸ್ಪಂದನಕ್ಕೆ ಆಯ್ಕೆ

ಮಂಗಳೂರು: ಕಟೀಲು ಶಿವಳ್ಳಿ ಸ್ಪಂದನ ವಲಯದ ನೂತನ ಕಾರ್ಯಕಾರಿ ಮಂಡಳಿಯ ಆಯ್ಕೆ ನಡೆದಿದ್ದು, ಅಧ್ಯಕ್ಷರಾಗಿ ಶ್ರೀನಿವಾಸ ಉಡುಪ ಶರಣ ಆಯ್ಕೆ ಆಗಿದ್ದಾರೆ.

ಅಧ್ಯಕ್ಷರು: ಶ್ರೀನಿವಾಸ ಉಡುಪ ಶರಣ ಕಾರ್ಯದರ್ಶಿ: ಹರಿ ಉಡುಪ ಶರಣ ಕೋಶಾಧಿಕಾರಿ: ಗುರುರಾಜ ಭಟ್ ಗೋಪಾಲಕೃಷ್ಣ ನಗರ. ಗೌರವಾಧ್ಯಕ್ಷರು ಮತ್ತು ಮಾರ್ಗದರ್ಶಕರು:



ವೇದಮೂರ್ತಿ ವೆಂಕಟರಾಜ ಉಡುಪ ಅತ್ತೂರು ಬೈಲು, ವೇದಮೂರ್ತಿ ಅಂಗಡಿಮಾರು ವಿಶ್ವೇಶ ಭಟ್, ಭುವನಾಭಿರಾಮ ಉಡುಪ ಯುಗಪುರುಷ ಕಿನ್ನಿಗೋಳಿ, ಪ್ರಸನ್ನ ಭಟ್ ನೆಲ್ಲಿತೀರ್ಥ,ಶ್ರೀನಿವಾಸ ಭಟ್ ಮುಚ್ಚೂರು, ವೆಂಕಟೇಶ್ ಭಟ್ ಪಂಜ ಸುರಿಗಿರಿ, ದಿನೇಶ್ ರಾವ್ ಎಕ್ಕಾರು. ಉಪಾಧ್ಯಕ್ಷರು: ಪಾರ್ಥಸಾರಥಿ, ಪಂಜನಾಗ ಭಟ್ ಎಳತ್ತೂರು, ಹಯವದನ ಭಟ್, ಕೆಮ್ಮಾಲ್ರಂಗನಾಥ ರಾವ್ ಕೊನಿಕಾ, ಪಕ್ಷಿಕೆರೆಕಾರ್ತಿಕ್ ಬೆಳ್ಳಿರಾಯ, ಕಿನ್ನಿಗೋಳಿ ಪ್ರಸಾದಿನಿ ಭಟ್, ಕೆಮ್ಮಾಲ್, ಸಂಘಟನಾ ಕಾರ್ಯದರ್ಶಿ: ಸುರೇಶ್ ರಾವ್ ಭಟ್ ಕೋಡು, ತಾಲೂಕು ಪ್ರತಿನಿಧಿ ಮತ್ತು ಸಮನ್ವಯ ಸಂಯೋಜಕ: ಡಾ. ಗುರುರಾಜ ಉಡುಪ ಕಿಲಂಜೂರು

ಪದಾಧಿಕಾರಿಗಳು: ಭರತ್ ಬಿ. ರಾವ್ ಕೆಮ್ಮಾಲ್, ಗಣೇಶ್ ರಾವ್ ಎಸ್. ಕೋಡಿ, ಟಿ. ಆರ್‌ಪ್ರಕಾಶ್ ಭಟ್ ತಾಳಿಪಾಡಿ, ನಾರಾಯಣ ಭಟ್ ಕೋಡು, ರವೀಂದ್ರ ರಾವ್ ಪುಚ್ಚಾಡಿ, ವೇಣುಗೋಪಾಲ್ ಮುಚಿಂತಾಯ ಪದ್ಮನೂರು, ವಿನಯ ಉಡುಪ ಗೋಳಿಜೋರ, ಟಿ. ರಾಮ್ಕುಮಾರ್‌ರಾವ್ ಸುರಿಗಿರಿ, ವೆಂಕಟೇಶ್ ಉಡುಪ ಕೋಡು, ಗುರುಪ್ರಸಾದ್ ಪೆರ್ಮುದೆ, ಶ್ರೀನಿವಾಸ ಉಡುಪ, ಮಾಡವಿಘ್ನೇಶ್ ಉಡುಪ ಕೆರೆಮನೆ. ಅಧ್ಯಕ್ಷರು: ಶ್ರೀನಿವಾಸ ಉಡುಪ ಶರಣ.

ಸಂಘ ಸಂಸ್ಥೆಗಳಿಂದ ಸ್ವಾಸ್ಥ್ಯ ಸಮಾಜ ಕಟ್ಟಲು ಸಾಧ್ಯ

ಉಡುಪಿ: ಸ್ವಾಸ್ಥ್ಯ ಸಮಾಜ ನಿರ್ಮಾಣದಲ್ಲಿ ಸಂಘ ಸಂಸ್ಥೆಗಳ ಪಾತ್ರ ಹಿರಿದಾದುದು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಕಾರ್ಕಳ ತಾಲೂಕು ಯೋಜನಾಧಿಕಾರಿ ಬಾಲಕೃಷ್ಣ ಹಿರಿಂಜ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಯುವಸ್ಪಂದನ ಗೆಳೆಯರ ಬಳಗ ಜಾರ್ಕಳ ಮುಂಡ್ಲಿ, ಡಾ.ಟಿ.ಎಂ.ಎ. ಪೈ ರೋಟರಿ ಆಸ್ಪತ್ರೆ ಕಾರ್ಕಳ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಜಾರ್ಕಳ ಮುಂಡ್ಲಿ ಒಕ್ಕೂಟದ ಸಹಯೋಗದೊಂದಿಗೆ ಯುವಸ್ಪಂದನ ಗೆಳೆಯರ ಬಳಗ ಕಚೇರಿಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ನಿವೃತ್ತ ಶಿಕ್ಷಕ ಸಂಜೀವ ದೇವಾಡಿಗ ಮಾತನಾಡಿ, ಗ್ರಾಮದ ಅಭಿವೃದ್ಧಿಯಲ್ಲಿ ಸಂಘ ಸಂಸ್ಥೆಗಳು ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಪ್ರತಿಯೊಂದು ಗ್ರಾಮದಲ್ಲೂ ಯುವ ಸ್ಪಂದನದಂತಹ ತಂಡ ನಿರ್ಮಾಣವಾಗಲಿ ಎಂದರು.

ಹೆರ್ಮುಂಡೆ ತರುಣ ಭಾರತ ಟ್ರಸ್ಟ್ ಅಧ್ಯಕ್ಷ ಸತೀಶ್ ಹೆಗ್ಡೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಡಾ.ಟಿ.ಎ. ಪೈ ರೋಟರಿ ಆಸ್ಪತ್ರೆಯ ವೈದ್ಯ ಸಮರ್ಥ್ ಅವರನ್ನು ಸನ್ಮಾನಿಸಲಾಯಿತು. ಒಕ್ಕೂಟದ ಅಧ್ಯಕ್ಷ ರವಿ ಬನಾನ್, ಯುವಸ್ಪಂದನ ಗೆಳೆಯರ ಬಳಗದ ಅಧ್ಯಕ್ಷ ದಿವಾಕರ್ ಪೂಜಾರಿ, ಸಂಪತ್ ಕುಮಾರ್‌ಜೈನ್, ರಘುರಾಮ ಶೆಟ್ಟಿ, ಸಂಜೀವ ಶೆಟ್ಟಿ, ಮಲ್ಲಿಕಾ ಜೈನ್, ರೋಟರಿ ಆಸ್ಪತ್ರೆಯ ವೈದ್ಯರು ಉಪಸ್ಥಿತರಿದ್ದರು. ಅಭಿನಂದನ್ ಜೈನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಜ್ವಲ್ ಜೈನ್ ಕಾರ್ಯಕ್ರಮ ನಿರೂಪಿಸಿ, ವಲಯ ಮೇಲ್ವಿಚಾರಕಿ ಗೀತಾ ವಂದಿಸಿದರು.

ಯುವಸ್ಪಂದನ ಗೆಳೆಯರ ಬಳಗದ ಕಚೇರಿಯಲ್ಲಿ ನಡೆದ ಆರೋಗ್ಯ ಶಿಬಿರವನ್ನು ಯೋಜನಾಧಿಕಾರಿ ಬಾಲಕೃಷ್ಣ ಹಿರಿಂಜ ಉದ್ಘಾಟಿಸಿದರು.

ಎಂಸಿಸಿ ಬ್ಯಾಂಕ್ ಬೆಳ್ಮಣ್ ಶಾಖೆ ವಾರ್ಷಿಕೋತ್ಸವ

ಎಂಸಿಸಿ ಬ್ಯಾಂಕಿನ ಬೆಳ್ಮಣ್ ಶಾಖೆಯ ಪ್ರಥಮ ವಾರ್ಷಿಕೋತ್ಸವ – ಸಾಧನೆಯ ಸಂಭ್ರಮಾಚರಣೆ ಶಾಖಾ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಬೆಳ್ಮಣ್: ಎಂಸಿಸಿ ಬ್ಯಾಂಕಿನ ಬೆಳ್ಮಣ್ ಶಾಖೆಯ ಪ್ರಥಮ ವಾರ್ಷಿಕೋತ್ಸವ ಹಾಗೂ ₹10 ಕೋಟಿ ವ್ಯವಹಾರದ ಗುರಿ ಸಾಧನೆಯ ಸಂಭ್ರಮಾಚರಣೆ ಶಾಖಾ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷ, ಸಹಕಾರ ರತ್ನ ಅನಿಲ್ ಲೋಬೋ ಮಾತನಾಡಿ, 'ಕೇವಲ ಒಂದು ವರ್ಷದಲ್ಲಿ ₹10 ಕೋಟಿ ಮೈಲಿಗಲ್ಲು ದಾಟಿರುವುದು ಗ್ರಾಹಕರ ಅಚಲ ನಂಬಿಕೆಗೆ ಸಾಕ್ಷಿ. ಡಿಸೆಂಬರ್ನಲ್ಲೇ ಈ ಗುರಿ ತಲುಪಿದ್ದ ಶಾಖೆಯು ಪ್ರಸ್ತುತ ₹12 ಕೋಟಿ ವ್ಯವಹಾರ ನಡೆಸುತ್ತಿದೆ. ತೃಪ್ತ ಗ್ರಾಹಕರೇ ಬ್ಯಾಂಕಿನ ನಿಜವಾದ ರಾಯಭಾರಿಗಳು,' ಎಂದರು.

ಇದೇ ವೇಳೆ ಬ್ಯಾಂಕಿನ ವಿಸ್ತರಣಾ ಯೋಜನೆಗಳನ್ನು ಘೋಷಿಸಿದ ಅವರು, ಶಾಖೆಗಳ ಸಂಖ್ಯೆಯನ್ನು 25ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದ್ದು, ಶೀಘ್ರದಲ್ಲೇ ಯುಪಿಐ ಮತ್ತು ಗೂಗಲ್ ಪೇ ಸೇವೆಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪರಪ್ಪಾಡಿಯ ಚರ್ಚ್ನ ಧರ್ಮಗುರು ವಂದನೀಯ ಫಾ. ಡೇನಿಸ್ ಡಿಸೋಜ ಮಾತನಾಡಿ, 'ಎಂಸಿಸಿ ಬ್ಯಾಂಕ್ ನೈತಿಕ ಮೌಲ್ಯ ಮತ್ತು ಪಾರದರ್ಶಕತೆಗೆ ಹೆಸರಾಗಿದೆ. ಸಂಕಷ್ಟದ ಸಮಯದಲ್ಲಿ ಸಾಲ ನೀಡಿ ಬೆಂಬಲಿಸಿದ ಬ್ಯಾಂಕಿನ ಮಾನವೀಯತೆಯನ್ನು ನಾನು ಸ್ಮರಿಸುತ್ತೇನೆ. ಸಮರ್ಥ ನಾಯಕತ್ವದಲ್ಲಿ ಬ್ಯಾಂಕ್ ಖಾಸಗಿ ಬ್ಯಾಂಕುಗಳಿಗಿಂತಲೂ ಉತ್ತಮ ಸೇವೆ ನೀಡುತ್ತಿದೆ,' ಎಂದು ಶ್ಲಾಘಿಸಿದರು.

ಅತಿಥಿ, ಶಿಕ್ಷಕಿ ಲೈಲಾ ಬಬಿತಾ ನೊರೊನ್ಹಾ ಮಾತನಾಡಿ, 'ಒಂದು ವರ್ಷದ ಮಗು ತೆವಳುವ ಬದಲು ಇಲ್ಲಿ ಓಡಲು ಆರಂಭಿಸಿದೆ. ಸ್ಥಳೀಯರ ಭಾಷೆ ಮತ್ತು ಸಂಸ್ಕೃತಿಗೆ ಸ್ಪಂದಿಸುವ ಬ್ಯಾಂಕಿನ ಶೈಲಿ ಜನಮನ ಗೆದ್ದಿದೆ,' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಬ್ಯಾಂಕಿನ ಸ್ಥಾಪಕ ಗ್ರಾಹಕರನ್ನು ಹಾಗೂ ಹುಟ್ಟುಹಬ್ಬ ಆಚರಿಸಿಕೊಂಡ ಹಿರಿಯ ಗ್ರಾಹಕರನ್ನು ಸನ್ಮಾನಿಸಲಾಯಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗ್ರಾಹಕರ ಮಕ್ಕಳಾದ ಜನೀಶ್ ಮೆನೆಜೆಸ್, ಪಿಷ್ಮಾ ಡಿ''ಕ್ರೂಜ್, ರಿಯಾ ರಾಚೆಲ್ ರೊಡ್ರಿಗಸ್, ಪರ್ಲ್ ಮಾರಿಸಾ ಕಾರ್ಡೋಜಾ (ಎಸ್ಸೆಸ್ಸೆಲ್ಸಿ) ಹಾಗೂ ಜೋಶ್ವಾ ಹೆರಾಲ್ಡ್ ಫೆರ್ನಾಂಡಿಸ್,ಇದ್ದರು.

ಕೃತಕ ಬುದ್ಧಿಮತ್ತೆ ಸಾಧನಗಳ ಎಚ್ಚರದಿಂದ ಬಳಸಿ

ಮಂಗಳೂರು: ದೇರಳಕಟ್ಟೆಯ ಯೆನೆಪೋಯ ಪರಿಗಣಿತ ವಿ.ವಿ.ಯ ಯೆನೆಪೋಯ ನರ್ಸಿಂಗ್ ಕಾಲೇಜಿನ ನರ್ಸಿಂಗ್ ಶಿಕ್ಷಣ ವಿಭಾಗ ಮತ್ತು ಪ್ರಥಮ ವರ್ಷದ ಎಂ.ಎಸ್ಸಿ ನರ್ಸಿಂಗ್ ವಿಭಾಗದ ವತಿಯಿಂದ ಡಿಜಿಟಲ್ ಶಿಕ್ಷಣಶಾಸ್ತ್ರ ಬೋಧನ -ಕಲಿಕೆಯಲ್ಲಿ ಕಲೆ ವಿಷಯದ ಬಗ್ಗೆ ಸಂಸ್ಥೆಯ ಯೆಂಡೋರೆನ್ಸ್ ಸಭಾಂಗಣದಲ್ಲಿ ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಲಕ್ಷ್ಮಿ ಮೆಮೋರಿಯಲ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲರಿಸ್ಸಾ ಮಾರ್ಥಾ ಸ್ಯಾಮ್ಸ್ ಮಾತನಾಡಿ 'ವಿದ್ಯಾರ್ಥಿಗಳು ಮತ್ತು ಬೋಧಕರು ಕೃತಕ ಬುದ್ಧಿಮತ್ತೆ ಸಾಧನಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳಬೇಕು . ಡಿಜಿಟಲ್ ನೈತಿಕತೆ ಮತ್ತು ಆಧುನಿಕ ಶಿಕ್ಷಣದಲ್ಲಿ ಲಭ್ಯವಿರುವ ತಾಂತ್ರಿಕ ಸೌಲಭ್ಯಗಳ ಬಗ್ಗೆ ಅರಿವು ಹೊಂದಿರುವುದು ಅತ್ಯಗತ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಯೆನೆಪೋಯ ಪರಿಗಣಿತ ವಿವಿ ಕುಲಸಚಿವ ಡಾ. ಅಶ್ವಿನಿ ದತ್ .ಆರ್.ಅವರು ಪರಿವರ್ತನಾಶೀಲ ಶಿಕ್ಷಣದ ಮಹತ್ವದ ಬಗ್ಗೆ ಮಾತನಾಡಿದರು.

ಯೆನೆಪೋಯ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲೀನಾ ಕೆ.ಸಿ. ಅಧ್ಯಕ್ಷತೆ ವಹಿಸಿದ್ದರು. ವಿವಿಧ ರಾಜ್ಯಗಳ 350 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದ ಅಧ್ಯಕ್ಷೆ ಡಾ. ಪ್ರಿಯಾ ರೇಷ್ಮಾ ಅರಾನ್ಹಾ ಸ್ವಾಗತಿಸಿ, ಕಾರ್ಯದರ್ಶಿ ನಿತ್ಯಶ್ರೀ ಬಿ.ವಿ.ವಂದಿಸಿದರು.

ದೇರಳಕಟ್ಟೆಯ ಯೆನೆಪೋಯ ಯೆಂಡೋರೆನ್ಸ್‌ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನವನ್ನು ಡಾ. ಲರಿಸ್ಸಾ ಮಾರ್ಥಾ ಸ್ಯಾಮ್ಸ್‌ಉದ್ಘಾಟಿಸಿದರು.

ಸುಳ್ಳು ಸುದ್ದಿ ಹರಡುವವರು ದೇಶದ್ರೋಹಿಗಳು: ರಮಾನಾಥ ರೈ

ಮಂಗಳೂರು: ಸುಳ್ಳು ಸುದ್ದಿ ಹರಡಿಸುವುದು ಅಪಾಯಕಾರಿ. ಅಂಥವರು ದೇಶದ್ರೋಹಿಗಳು, ಇದರಿಂದಾಗಿ ಜನಾಂಗೀಯ ಘರ್ಷಣೆ ಉಂಟಾಗಬಹುದು. ಎಂದು ರಮಾನಾಥ ರೈ ಹೇಳಿದ್ದಾರೆ.

ನಗರದ ಸಹೋದಯ ಸಭಾಂಗಣದಲ್ಲಿ ಭಾನುವಾರ, ಲೇಖಕ, ಕಾಂಗ್ರೆಸ್ ರಾಜ್ಯ ವಕ್ತಾರ ಎಂ.ಜಿ. ಹೆಗಡೆ ಅವರ 'ಭಾರತ ಮುಸ್ಲಿಂ ರಾಷ್ಟ್ರವಾಗುವುದೇ' ಕೃತಿ ಬಿಡುಗಡೆ ಮತ್ತು 'ಗಾಂಧಿ ಮನೆಯ ಅವಲಕ್ಕಿ ಸರ' ಕಾದಂಬರಿ ಪರಿಚಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸುಳ್ಳು ಸುದ್ದಿ, ಅಪಪ್ರಚಾರಗಳಿಗೆ ಕಡಿವಾಣ ಹಾಕುವ ಕೆಲಸವನ್ನು ಸ್ವಸ್ಥ ಸಮಾಜ ಮಾಡಬೇಕು ಸುಳ್ಳು ಸುದ್ದಿಗಳನ್ನು ಹರಡಿಸುವ ಮನೋಭಾವ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದ್ದು, ಇದು ಜನರ ನಡುವೆ ಅಪನಂಬಿಕೆಗೆ ಕಾರಣವಾ ಗುತ್ತಿದೆ. ಇದೇ ಮುಂದೆ ಜನಾಂಗೀಯ ಘರ್ಷಣೆಗೆ ಕಾರಣವಾಗಬಹುದು. ನಮ್ಮ ದೇಶಕ್ಕೆ ಅಂತಹ ಪರಿಸ್ಥಿತಿ ಬರಬಾರದು ಎಂದು ಮಾಜಿ ಸಚಿವ ಬಿ. ರಮಾನಾಥ ರೈ ಎಚ್ಚರಿಸಿದರು. ದೇಶದಲ್ಲೀಗ 100- 110 ಕೋಟಿಯಷ್ಟು ಹಿಂದೂಗಳ ಜನಸಂಖ್ಯೆ ಇದ್ದರೆ ಉಳಿದೆಲ್ಲ ಧರ್ಮಗಳ ಜನಸಂಖ್ಯೆ ಇರುವುದು ಕೇವಲ 30 ಕೋಟಿ ಆಸುಪಾಸು. ಆದರೆ ಕೆಲವರು ಸುಳ್ಳು ಲೆಕ್ಕಾಚಾರಗಳನ್ನು ಮುಂದಿಡುತ್ತಾ ಭಾರತ ಮುಸ್ಲಿಂ ರಾಷ್ಟ್ರವಾಗಲಿದೆ ಎನ್ನುತ್ತಾರೆ. ಇಂಥ ಪರಾಕಾಷ್ಠೆಯ ಭಾವನೆಗಳು, ಸುಳ್ಳುಗಳಿಗೆ 'ಭಾರತ ಮುಸ್ಲಿಂ ರಾಷ್ಟ್ರವಾಗುವುದೇ?' ಎಂಬ ಪುಸ್ತಕ ಕಡಿವಾಣ ಹಾಕಲಿದೆ. ಈ ಪುಸ್ತಕವು ಭಾರತದ ಸಾಮರಸ್ಯದ, ಭಾವೈಕ್ಯತೆಯ ಪರಿಕಲ್ಪನೆಗೆ ಪೂರಕವಾಗಿದೆ ಎಂದು ಹೇಳಿದರು. ಬಿ. ರಮಾನಾಥ ರೈ ಅವರು ಎಂ.ಜಿ. ಹೆಗಡೆ 'ಭಾರತ ಮುಸ್ಲಿಂ ರಾಷ್ಟ್ರವಾಗುವುದೇ' ಕೃತಿ ಬಿಡುಗಡೆಗೊಳಿಸಿದರು.

ಜನರ ಚಿಂತನೆ ಬದಲಾಗಲಿ: ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಮಾತನಾಡಿ, ಕೆಲವರು ಹತ್ತತ್ತು ಮಕ್ಕಳನ್ನು ಹುಟ್ಟಿಸಿ ಎಂದು ಕರೆ ನೀಡುತ್ತಾರೆ. ಆದರೆ ಇರುವ ಮಕ್ಕಳಿಗೆ ಸರಕಾರ ಎಷ್ಟು ಉದ್ಯೋಗ ಸೃಷ್ಟಿ ಮಾಡಿದೆ? ಉದ್ಯೋಗ ನೀಡಲು ಸಾಧ್ಯವಾಗದೆ ಇರುವ ಪರಿಸ್ಥಿತಿಯಲ್ಲಿ ಜನಸಂಖ್ಯೆ ಹೆಚ್ಚಾದರೆ ಇನ್ನೆಂಥ ಪರಿಸ್ಥಿತಿ ಉಂಟಾಗಬಹುದು ಎಂದು ಪ್ರಶ್ನಿಸಿದರು. ಭಾರತದಲ್ಲಿ ಮೊಘಲರ ಕಾಲದಿಂದ ಮುಸ್ಲಿಮರ ಜನಸಂಖ್ಯೆ ಎಷ್ಟು ಏರಿಕೆಯಾಗಿದೆ ಎನ್ನುವ ಎಲ್ಲ ವಿವರಗಳು ಈ ಪುಸ್ತಕದಲ್ಲಿದೆ. ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಆಗದಿದ್ದರೆ ವರ್ತಮಾನವನ್ನೂ, ಭವಿಷ್ಯವನ್ನೂ ಕಟ್ಟಲಾ ಗದು. ಈ ನಿಟ್ಟಿನಲ್ಲಿ ಜನರ ಚಿಂತನೆ ಬದಲಾವಣೆ ಆಗಬೇಕಾಗಿದೆ. ಬದಲಾವಣೆ ನಮ್ಮಿಂದಲೇ ಶುರುವಾಗಲಿ ಎಂದರು. ಪತ್ರಕರ್ತ,ಚಿಂತಕ ಎ.ಕೆ. ಕುಕ್ಕಿಲ ಅವರು 'ಭಾರತ ಮುಸ್ಲಿಂ ರಾಷ್ಟ್ರವಾಗುವುದೇ?' ಕೃತಿಯ ಕುರಿತು ಹಾಗೂ ಮಂಗಳೂರು ವಿವಿ ನಿವೃತ್ತ ಉಪಕುಲಸಚಿವ ಡಾ. ಪ್ರಭಾಕರ ನೀರುಮಾರ್ಗ ಅವರು 'ಗಾಂಧಿ ಮನೆಯ ಅವಲಕ್ಕಿ ಸರ' ಕಾದಂಬರಿಯ ಕುರಿತು ಮಾತನಾಡಿದರು. ಮಂಜುಳಾ ನಾಯಕ್ ಸ್ವಾಗತಿಸಿದರು. ರಹ್ಮಾನ್ ಕುಂಜತ್ತಬೈಲ್ ವಂದಿಸಿದರು.

ನಗರದ ಸಹೋದಯ ಸಭಾಂಗಣದಲ್ಲಿ ಕಾಂಗ್ರೆಸ್ ರಾಜ್ಯ ವಕ್ತಾರ ಎಂ.ಜಿ. ಹೆಗಡೆ ಅವರ 'ಭಾರತ ಮುಸ್ಲಿಂ ರಾಷ್ಟ್ರವಾಗುವುದೇ' ಕೃತಿ ಬಿಡುಗಡೆ ಮತ್ತು 'ಗಾಂಧಿ ಮನೆಯ ಅವಲಕ್ಕಿ ಸರ' ಕಾದಂಬರಿ ಪರಿಚಯ ಕಾರ್ಯಕ್ರಮ ನಡೆಯಿತು.

'ಭಾರತ ಮುಸ್ಲಿಂ ರಾಷ್ಟ್ರ' ಸಾಧ್ಯವೇ?

ಕೃತಿಕಾರ ಎಂ.ಜಿ. ಹೆಗಡೆ ಮಾತನಾಡಿ, ಭಾರತದ ಜನಗಣತಿ ಪ್ರಕಾರ ಮುಸ್ಲಿಮರ ಜನಸಂಖ್ಯೆ ಇರೋದು 25 ಕೋಟಿ. ಮುಂದಿನ 25 ವರ್ಷಗಳಲ್ಲಿ ಭಾರತ ಮುಸ್ಲಿಂ ರಾಷ್ಟ್ರ ಆಗಲಿದೆ ಎಂದು ಕೆಲವರು ಹೇಳುತ್ತಾರೆ. ಅದು ಸಾಧ್ಯವಾಗಬೇಕಾದರೆ ಮುಸ್ಲಿಮರ ಜನಸಂಖ್ಯೆ 125 ಕೋಟಿ ಆಗಬೇಕು. ನೂರಾರು ವರ್ಷಗಳಲ್ಲೇ ಇದು ಸಾಧ್ಯವಾಗಿಲ್ಲ, ಕೇವಲ 25 ವರ್ಷಗಳಲ್ಲಿ ಸಾಧ್ಯವಾ? ಈ ರೀತಿಯ ಸುಳ್ಳು ನರೇಟಿವ್ಗಳನ್ನು ಸೃಷ್ಟಿಸುವ ಮೂಲಕ ಧರ್ಮಗಳ ನಡುವೆ ದ್ವೇಷ, ಸಂಶಯ ಹುಟ್ಟು ಹಾಕುತ್ತಿದ್ದಾರೆ. ಇದನ್ನು ನಿಲ್ಲಿಸಬೇಕಾದರೆ ನಾವೆಲ್ಲರೂ ಮಾತನಾಡ ಬೇಕು, ಬರೆಯಬೇಕು. ಇದು ಚಳವಳಿಯ ರೂಪದಲ್ಲಿ ಮುಂದುವರಿಯಬೇಕು ಎಂದು ಆಶಿಸಿದರು.

ಜಿಲ್ಲಾ ಗ್ಯಾರಂಟಿ ಕಾರ್ಯಾಗಾರ 4ಕ್ಕೆ

ದಾವಣಗೆರೆ: ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಮಾ.4ರಂದು ಜಿಲ್ಲಾ ಮಟ್ಟದ ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಇಂಧನ ಇಲಾಖೆ, ಸಾರಿಗೆ ಇಲಾಖೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಜಿಲ್ಲಾ ಮತ್ತು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಜರುಗಲಿದೆ ಎಂದರು. ಅಂದು ಬೆಳಗ್ಗೆ 11.30ಕ್ಕೆ ನಡೆಯುವ ಕಾರ್ಯಾಗಾರವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು ಎಂದು ಹೇಳಿದರು. ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣರ ಘನ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಾಗಾರದಲ್ಲಿ ಅತಿಥಿಗಳಾಗಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ರಾಜ್ಯ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಭಾಗವಹಿಸುವರು. ಜಿಲ್ಲೆಯ ಶಾಸಕರು, ನಾನಾ ನಿಗಮ ಅಧ್ಯಕ್ಷರು ಉಪಸ್ಥಿತರಿರಲಿದ್ದಾರೆ. ಸರಕಾರದ ಕಾರ್ಯದರ್ಶಿ ಡಾ.ಶಮ್ಲಾ ಇಕ್ಬಾಲ್ ಪಾಲ್ಗೊಳ್ಳುವರು ಎಂದರು.

ಲಾರಿಗೆ ಕಾರು ಡಿಕ್ಕಿ: ನವದಂಪತಿ ಸಾವು



ಹಾವೇರಿ: ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕೇವಲ 15 ದಿನಗಳ ಹಿಂದೆ ಮದುವೆ ಆಗಿದ್ದ ನವದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲೂಕಿನ ಕಡಹಳ್ಳಿ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆದಿದೆ.

ಇಬ್ಬರು ಗಂಭೀರ ಗಾಯಗೊಂಡಿದ್ದು, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಮೃತರನ್ನ ಪತಿ ಕಾರ್ತಿಕ್ ಹೂಗಾರ (34), ಪತ್ನಿ ಐಶ್ವರ್ಯ (30) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತರಿಬ್ಬರು ಹಾವೇರಿ ನಗರದ ನಿವಾಸಿಗಳಾಗಿದ್ದು, ಶನಿವಾರ ದೇವರ ದರ್ಶನಕ್ಕೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಮದುವೆಯಾಗಿ ಕೇವಲ 15 ದಿನಗಳು ಆಗಿತ್ತು ಅಷ್ಟೇ. ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಕಾರ್ಯಾಚರಣೆ ನಡೆಸಿ ಕಾರಿನಿಂದ ಮೃತದೇಹ ಹೊರಕ್ಕೆ ತೆಗೆದಿದ್ದಾರೆ. ಸ್ಥಳಕ್ಕೆ ತಡಸ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮ್ಯಾರಥಾನ್ ವೇಳೆ ಕುಸಿದು ಎಸ್ಐ ಸಾವು

ಉಡುಪಿ: ಪೊಲೀಸ್ ಮ್ಯಾರಥಾನ್ ವೇಳೆ ಕುಸಿದು ಬಿದ್ದು ಎಸ್ಐ ಸಾವನ್ನಪ್ಪಿರುವ ಘಟನೆ ಉಡುಪಿಯಲ್ಲಿ ನಡೆದಿದೆ.ಕುಂದಾಪುರ ಗ್ರಾಮಾಂತರ ಠಾಣಾಧಿಕಾರಿ ನಾಸಿರ್ ಹುಸೇನ್ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಹೃದಯಾಘಾತದಿಂದ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ಭಾನುವಾರ ಪೊಲೀಸ್ ಇಲಾಖೆ ಮ್ಯಾರಥಾನ್ ಆಯೋಜಿಸಿತ್ತು. ಜಿಲ್ಲಾ ಪೊಲೀಸ್ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಘೋಷ ವಾಕ್ಯದೊಂದಿಗೆ ಮ್ಯಾರಥಾನ್ ಆಯೋಜಿ ಸಲಾಗಿತ್ತು. ಡ್ರಗ್ಸ್ ಮುಕ್ತ ಕರ್ನಾಟಕ ಧ್ಯೇಯದೊಂದಿಗೆ ಓಟ ಆರಂಭಗೊಂಡಿತ್ತು. ನಗರದ ತಾಲೂಕು ಪಂಚಾಯತ್ ಮುಂಭಾಗದ ರಸ್ತೆಯಲ್ಲಿ ಎಸ್ಐ ಕುಸಿದುಬಿದ್ದಿದ್ದಾರೆ. ಕೂಡಲೇ ಅವರನ್ನು ಪಕ್ಕದಲ್ಲೇ ಇದ್ದ ಡಾ.ಟಿಎಂಎ ಪೈ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಸಿರ್ ಹುಸೇನ್ ಸಾವನ್ನು ಆಸ್ಪತ್ರೆ ವೈದ್ಯರು ದೃಢಪಡಿಸಿದರು. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ನಾಸಿರ್ 2010 ಬ್ಯಾಚ್‌ನ ಪೊಲೀಸ್ ಅಧಿಕಾರಿ. 58 ವರ್ಷದ ನಾಸಿರ್ ಹುಸೇನ್ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಹೊಂದಿದ್ದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಣೆ
ಸಂಖ್ಯೆ/ಮೈ.ಅ.ಪ್ರಾ/ಇ.ಹ.ಪ್ರ/02/2025-26 ದಿನಾಂಕ: 27.02.2026,ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ-ಹರಾಜನ್ನು ಆರಂಭಿಸುವ ದಿನಾಂಕ: 11.03.2026 ರ ಭಾರತೀಯ ಕಾಲಮಾನ ಸಂಜೆ 6.00 ಗಂಟೆಯ ನಂತರ
2) ಕ್ರ.ಸಂ.1 ರಿಂದ 50 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 26.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 27.03.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರ.ಸಂ.51 ರಿಂದ 100 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 30.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 01.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
4) ಕ್ರ.ಸಂ.101 ರಿಂದ 150 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 02.04.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 04.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
5) ಕ್ರ.ಸಂ.151 ರಿಂದ 200 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 06.04.2026ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 07.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ-ದ	ಅಳತೆ ಮೀ ಗಳಲ್ಲಿ ಪೂ-ಪ	ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
	ಮೂಲೆ ಹಾಗೂ ಮಧ್ಯಂತರ ನಿವೇಶನಗಳು								
1	ನಾಚಹನಹಳ್ಳಿ-ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್	99	ಮೂಲೆ	ಪಶ್ಚಿಮ 9.00	13.00	18.00	234.00	79256.00	185.46
2	ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್	72	ಮೂಲೆ	ಪೂ-ಉ 9.00	24.00	(18.00+19.00)/2	444.00	79256.00	351.90
3	ದಟ್ಟಗಳ್ಳಿ 3ನೇ ಹಂತ	754	ಮೂಲೆ	12-9 ಪೂ-ಉ	11.20	18.00	201.06	64986.00	131.02
4	ದಟ್ಟಗಳ್ಳಿ 3ನೇ ಹಂತ	1025/ಬಿ	ಮಧ್ಯಂತರ	ಪೂರ್ವ 9.00	6.00	9.00	54.00	58003.00	31.32
5	ದಟ್ಟಗಳ್ಳಿ 3ನೇ ಹಂತ	1050/ಬಿ	ಮಧ್ಯಂತರ	ಪಶ್ಚಿಮ 9.00	6.00	9.00	54.00	58003.00	31.32
6	ದಟ್ಟಗಳ್ಳಿ 3ನೇ ಹಂತ	1229	ಮಧ್ಯಂತರ	ದಕ್ಷಿಣ 9.00	12.00	9.00	108.00	58003.00	62.64
7	ದಟ್ಟಗಳ್ಳಿ 3ನೇ ಹಂತ	1615	ಮೂಲೆ	18-9 ಉ-ಪೂ	12.00	9.00	108.00	64986.00	70.18
8	ದಟ್ಟಗಳ್ಳಿ 3ನೇ ಹಂತ	1616	ಮೂಲೆ	9.00 ಪೂ-ದ	12.00	9.00	108.00	64986.00	70.18
9	ದಟ್ಟಗಳ್ಳಿ 3ನೇ ಹಂತ	1631	ಮೂಲೆ	12-9 ಪೂ-ಉ	12.00	8.50	102.00	64986.00	66.29
10	ದಟ್ಟಗಳ್ಳಿ 3ನೇ ಹಂತ	1631/ಎಫ್	ಮೂಲೆ	9.00 ಉ-ಪ	12.00	(13.00+14.60)/2	165.60	64986.00	107.62
11	ದಟ್ಟಗಳ್ಳಿ 3ನೇ ಹಂತ	1632	ಮೂಲೆ	12-9 ಪೂ-ದ	12.00	8.50	102.00	64986.00	66.29
12	ದಟ್ಟಗಳ್ಳಿ 3ನೇ ಹಂತ	1632/ಎ	ಮಧ್ಯಂತರ	ದಕ್ಷಿಣ 9.00	12.00	9.00	108.00	58003.00	62.64
13	ದಟ್ಟಗಳ್ಳಿ 3ನೇ ಹಂತ	1632/ಎಫ್	ಮೂಲೆ	9.00 ಪ-ದ	12.00	(11.00+13.00)/2	144.00	64986.00	93.58
14	ದಟ್ಟಗಳ್ಳಿ 3ನೇ ಹಂತ	1638/ಎ	ಮಧ್ಯಂತರ	ಉತ್ತರ 9.00	9.00	6.00	54.00	58003.00	31.32
15	ದಟ್ಟಗಳ್ಳಿ 3ನೇ ಹಂತ	1638/ಸಿ	ಮೂಲೆ	9.00 ಉ-ಪ	9.00	(9.50+7.80)/2	77.85	64986.00	50.59
16	ದಟ್ಟಗಳ್ಳಿ 3ನೇ ಹಂತ	1644	ಮೂಲೆ	12-9 ಪೂ-ಉ	9.00	(5.40+6.00)/2	51.30	64986.00	33.34
17	ದಟ್ಟಗಳ್ಳಿ 3ನೇ ಹಂತ	1645	ಮೂಲೆ	12-9 ಪೂ-ದ	9.00	5.40	48.60	64986.00	31.58
18	ದಟ್ಟಗಳ್ಳಿ 3ನೇ ಹಂತ	1651/ಡಿ	ಮೂಲೆ	9.00 ಪ-ದ	9.00	(7.80+6.00)/2	62.10	64986.00	40.36
19	ದಟ್ಟಗಳ್ಳಿ 3ನೇ ಹಂತ	1660	ಮೂಲೆ	9.00 ಪ-ದ	(8.50+8.20)/2	12.00	100.20	64986.00	65.12
20	ದಟ್ಟಗಳ್ಳಿ 3ನೇ ಹಂತ	1660/ಎ	ಮಧ್ಯಂತರ	ಪಶ್ಚಿಮ 9.00	9.00	12.00	108.00	58003.00	62.64
21	ದಟ್ಟಗಳ್ಳಿ 3ನೇ ಹಂತ	1670	ಮೂಲೆ	18-12 ಉ-ಪ	9.00	12.00	108.00	64986.00	70.18
22	ದಟ್ಟಗಳ್ಳಿ 3ನೇ ಹಂತ	1671	ಮೂಲೆ	18-12 ಉ-ಪೂ	9.00	12.00	108.00	64986.00	70.18
23	ದಟ್ಟಗಳ್ಳಿ 3ನೇ ಹಂತ	2929	ಮೂಲೆ	9-12ಉ-ಪ	9.00	5.90	53.10	64986.00	34.51
24	ದಟ್ಟಗಳ್ಳಿ 3ನೇ ಹಂತ	ಇ-141/ಎ	ಮಧ್ಯಾಂತರ	ಉ-9.00	(0+8.98)/2	37.00	166.13	58003.00	96.36
25	ದಟ್ಟಗಳ್ಳಿ 3ನೇ ಹಂತ	2930	ಮೂಲೆ	12.00ದ-ಪ	9.00	5.90	53.10	64986.00	34.51
26	ದಟ್ಟಗಳ್ಳಿ 3ನೇ ಹಂತ	2956	ಮೂಲೆ	12.00ದ-ಪೂ	(5.00+6.20)/2	9.00	50.40	64986.00	32.75
27	ದಟ್ಟಗಳ್ಳಿ 3ನೇ ಹಂತ	2957	ಮೂಲೆ	12-9ದ-ಪ	(7.00+6.20)/2	9.00	59.40	64986.00	38.60
28	ದಟ್ಟಗಳ್ಳಿ 3ನೇ ಹಂತ	2963	ಮಧ್ಯಂತರ	ಪಶ್ಚಿಮ 9.00	6.00	9.00	54.00	58003.00	31.32
29	ದಟ್ಟಗಳ್ಳಿ 3ನೇ ಹಂತ	2969	ಮೂಲೆ	9.00 ಉ-ಪ	6.00	9.00	54.00	64986.00	35.09
30	ದಟ್ಟಗಳ್ಳಿ 3ನೇ ಹಂತ	3098	ಮಧ್ಯಂತರ	ದಕ್ಷಿಣ12.00	18.00	12.00	216.00	58003.00	125.29
31	ದಟ್ಟಗಳ್ಳಿ 3ನೇ ಹಂತ	4499	ಮಧ್ಯಂತರ	ಉತ್ತರ 24.00	24.00	15.00	360.00	58003.00	208.81
32	ದಟ್ಟಗಳ್ಳಿ 3ನೇ ಹಂತ	4501	ಮೂಲೆ	24-12 ಉ-ಪೂ	24.00	(15.50+17.50)/2	396.00	64986.00	257.34
33	ದಟ್ಟಗಳ್ಳಿ 3ನೇ ಹಂತ	4553	ಮೂಲೆ	12-12 ದ-ಪೂ	12.00	11.80	141.60	64986.00	92.02
34	ದಟ್ಟಗಳ್ಳಿ 3ನೇ ಹಂತ	4516	ಮೂಲೆ	12-12ದ-ಪೂ	18.00	(16.00+17.00)/2	297.00	64986.00	193.01
35	ದಟ್ಟಗಳ್ಳಿ 3ನೇ ಹಂತ	2944	ಮೂಲೆ	12-9ಉ-ಪೂ	6.80	9.00	61.20	64986.00	39.77
36	ವಿಜಯನಗರ 4ನೇ ಹಂತ 2ನೇ ಘಟ್ಟ	1756	ಮೂಲೆ	ಉ-ಪೂ9.00	24.00	16.15	387.60	86009.00	333.37
37	ವಿಜಯನಗರ 4ನೇ ಹಂತ 2ನೇ ಘಟ್ಟ	1766	ಮೂಲೆ	ಉ-ಪೂ12.00	24.00	(16.50+16.00)/2	390.00	86009.00	335.44
38	ವಿಜಯನಗರ 4ನೇ ಹಂತ 2ನೇ ಘಟ್ಟ	2847	ಮೂಲೆ	ಪೂ-ದ9.00	12.00	10.40	124.80	86009.00	107.34
39	ವಿಜಯನಗರ 4ನೇ ಹಂತ 2ನೇ ಘಟ್ಟ	4776	ಮೂಲೆ	9-12 ಉ-ಪ	9.00	(3.90+3.96)/2	35.37	86009.00	30.42
40	ವಿಜಯನಗರ 4ನೇ ಹಂತ 2ನೇ ಘಟ್ಟ	6128	ಮೂಲೆ	ಉ-ಪೂ 9.00	24.00	12.20	292.80	86009.00	251.83
41	ವಿಜಯನಗರ 4ನೇ ಹಂತ 2ನೇ ಘಟ್ಟ	7030	ಮೂಲೆ	ಉ-ಪೂ 9.00	4.60	18.00	82.80	86009.00	71.22
42	ವಿಜಯನಗರ 4ನೇ ಹಂತ 2ನೇ ಘಟ್ಟ	7281	ಮೂಲೆ	ದ-ಪೂ9.00	8.40	12.00	100.80	86009.00	86.70
43	ವಿಜಯನಗರ 4ನೇ ಹಂತ 2ನೇ ಘಟ್ಟ	7326	ಮೂಲೆ	ದ-ಪ 9.00	8.80	12.00	105.60	86009.00	90.83
44	ವಿಜಯನಗರ 4ನೇ ಹಂತ 2ನೇ ಘಟ್ಟ	9004	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
45	ವಿಜಯನಗರ 4ನೇ ಹಂತ 2ನೇ ಘಟ್ಟ	9005	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
46	ವಿಜಯನಗರ 4ನೇ ಹಂತ 2ನೇ ಘಟ್ಟ	9006	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
47	ವಿಜಯನಗರ 4ನೇ ಹಂತ 2ನೇ ಘಟ್ಟ	9007	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
48	ವಿಜಯನಗರ 4ನೇ ಹಂತ 2ನೇ ಘಟ್ಟ	9008	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
49	ವಿಜಯನಗರ 4ನೇ ಹಂತ 2ನೇ ಘಟ್ಟ	9009	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
50	ವಿಜಯನಗರ 4ನೇ ಹಂತ 2ನೇ ಘಟ್ಟ	9010	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
51	ವಿಜಯನಗರ 4ನೇ ಹಂತ 2ನೇ ಘಟ್ಟ	9011	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
52	ವಿಜಯನಗರ 4ನೇ ಹಂತ 2ನೇ ಘಟ್ಟ	9013	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
53	ವಿಜಯನಗರ 4ನೇ ಹಂತ 2ನೇ ಘಟ್ಟ	9016	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
54	ವಿಜಯನಗರ 4ನೇ ಹಂತ 2ನೇ ಘಟ್ಟ	9028	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
55	ವಿಜಯನಗರ 4ನೇ ಹಂತ 2ನೇ ಘಟ್ಟ	9029	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
56	ವಿಜಯನಗರ 4ನೇ ಹಂತ 2ನೇ ಘಟ್ಟ	9030	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
57	ವಿಜಯನಗರ 4ನೇ ಹಂತ 2ನೇ ಘಟ್ಟ	9031	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
58	ವಿಜಯನಗರ 4ನೇ ಹಂತ 2ನೇ ಘಟ್ಟ	9032	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
59	ವಿಜಯನಗರ 4ನೇ ಹಂತ 2ನೇ ಘಟ್ಟ	9033	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
60	ವಿಜಯನಗರ 4ನೇ ಹಂತ 2ನೇ ಘಟ್ಟ	9034	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
61	ವಿಜಯನಗರ 4ನೇ ಹಂತ 2ನೇ ಘಟ್ಟ	9035	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
62	ವಿಜಯನಗರ 4ನೇ ಹಂತ 2ನೇ ಘಟ್ಟ	9036	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
63	ವಿಜಯನಗರ 4ನೇ ಹಂತ 2ನೇ ಘಟ್ಟ	9037	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
64	ವಿಜಯನಗರ 4ನೇ ಹಂತ 2ನೇ ಘಟ್ಟ	9038	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
65	ವಿಜಯನಗರ 4ನೇ ಹಂತ 2ನೇ ಘಟ್ಟ	9063	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
66	ವಿಜಯನಗರ 4ನೇ ಹಂತ 2ನೇ ಘಟ್ಟ	9064	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
67	ವಿಜಯನಗರ 4ನೇ ಹಂತ 2ನೇ ಘಟ್ಟ	9065	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
68	ವಿಜಯನಗರ 4ನೇ ಹಂತ 2ನೇ ಘಟ್ಟ	9067	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
69	ವಿಜಯನಗರ 4ನೇ ಹಂತ 2ನೇ ಘಟ್ಟ	9068	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
70	ವಿಜಯನಗರ 4ನೇ ಹಂತ 2ನೇ ಘಟ್ಟ	9069	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
71	ವಿಜಯನಗರ 4ನೇ ಹಂತ 2ನೇ ಘಟ್ಟ	9070	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
72	ವಿಜಯನಗರ 4ನೇ ಹಂತ 2ನೇ ಘಟ್ಟ	9071	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
73	ವಿಜಯನಗರ 4ನೇ ಹಂತ 2ನೇ ಘಟ್ಟ	9072	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
74	ವಿಜಯನಗರ 4ನೇ ಹಂತ 2ನೇ ಘಟ್ಟ	9073	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
75	ವಿಜಯನಗರ 4ನೇ ಹಂತ 2ನೇ ಘಟ್ಟ	9074	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
76	ವಿಜಯನಗರ 4ನೇ ಹಂತ 2ನೇ ಘಟ್ಟ	9075	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
77	ವಿಜಯನಗರ 4ನೇ ಹಂತ 2ನೇ ಘಟ್ಟ	9076	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
78	ವಿಜಯನಗರ 4ನೇ ಹಂತ 2ನೇ ಘಟ್ಟ	9089	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
79	ವಿಜಯನಗರ 4ನೇ ಹಂತ 2ನೇ ಘಟ್ಟ	9090	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
80	ವಿಜಯನಗರ 4ನೇ ಹಂತ 2ನೇ ಘಟ್ಟ	9091	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
81	ವಿಜಯನಗರ 4ನೇ ಹಂತ 2ನೇ ಘಟ್ಟ	9092	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
82	ವಿಜಯನಗರ 4ನೇ ಹಂತ 2ನೇ ಘಟ್ಟ	9093	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
83	ವಿಜಯನಗರ 4ನೇ ಹಂತ 2ನೇ ಘಟ್ಟ	11160	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
84	ವಿಜಯನಗರ 4ನೇ ಹಂತ 2ನೇ ಘಟ್ಟ	11161	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
85	ವಿಜಯನಗರ 4ನೇ ಹಂತ 2ನೇ ಘಟ್ಟ	11162	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
86	ವಿಜಯನಗರ 4ನೇ ಹಂತ 2ನೇ ಘಟ್ಟ	11162/ಬಿ	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
87	ವಿಜಯನಗರ 4ನೇ ಹಂತ 2ನೇ ಘಟ್ಟ	11162/ಎ	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
88	ವಿಜಯನಗರ 4ನೇ ಹಂತ 2ನೇ ಘಟ್ಟ	11165	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
89	ವಿಜಯನಗರ 4ನೇ ಹಂತ 2ನೇ ಘಟ್ಟ	11166	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
90	ವಿಜಯನಗರ 4ನೇ ಹಂತ 2ನೇ ಘಟ್ಟ	11167	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
91	ವಿಜಯನಗರ 4ನೇ ಹಂತ 2ನೇ ಘಟ್ಟ	11168	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
92	ವಿಜಯನಗರ 4ನೇ ಹಂತ 2ನೇ ಘಟ್ಟ	11169	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
93	ವಿಜಯನಗರ 4ನೇ ಹಂತ 2ನೇ ಘಟ್ಟ	11170	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
94	ವಿಜಯನಗರ 4ನೇ ಹಂತ 2ನೇ ಘಟ್ಟ	11171	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
95	ವಿಜಯನಗರ 4ನೇ ಹಂತ 2ನೇ ಘಟ್ಟ	11172	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
96	ವಿಜಯನಗರ 4ನೇ ಹಂತ 2ನೇ ಘಟ್ಟ	11173	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
97	ವಿಜಯನಗರ 4ನೇ ಹಂತ 2ನೇ ಘಟ್ಟ	11174	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
98	ವಿಜಯನಗರ 4ನೇ ಹಂತ 2ನೇ ಘಟ್ಟ	11232	ಮಧ್ಯಂತರ	ಪೂರ್ವ9.00	12.00	18.00	216.00	59275.00	128.03
99	ಹೆಬ್ಬಾಳು 2ನೇ ಹಂತ	60/ಎ	ಮಧ್ಯಂತರ	ದಕ್ಷಿಣ 8.0 ಮೀ	10.00	5.50	55.00	64472.00	35.46
100	ಹೆಬ್ಬಾಳು 2ನೇ ಹಂತ	60/ಬಿ	ಮಧ್ಯಂತರ	ದಕ್ಷಿಣ 8.0 ಮೀ	10.00	5.50	55.00	64472.00	35.46
101	ಹೆಬ್ಬಾಳು 2ನೇ ಹಂತ	658	ಮಧ್ಯಂತರ	ಪೂರ್ವ 9.0 ಮೀ	6.00	9.00	54.00	64472.00	34.81
102	ಹೆಬ್ಬಾಳು 2ನೇ ಹಂತ	1017/ಎ	ಮಧ್ಯಂತರ	ಪಶ್ಚಿಮ 7.0 ಮೀ	6.00	9.00	54.00	64472.00	34.81
103	ಹೆಬ್ಬಾಳು 2ನೇ ಹಂತ	2598	ಮೂಲೆ	ಪಶ್ಚಿಮ 9.00	6.00	9.00	54.00	64489.00	34.82
104	ಹೆಬ್ಬಾಳು 1ನೇ ಹಂತ	1190/ಐ	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
105	ಹೆಬ್ಬಾಳು 1ನೇ ಹಂತ	1190/ಹೆಚ್	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
106	ವಿಜಯನಗರ 2ನೇ ಹಂತ	2784	ಮೂಲೆ	ಉ-ಪ 9.00	(0.5+11.00)/2	18.00	103.50	99318.00	102.79
107	ವಿಜಯನಗರ 2ನೇ ಹಂತ	2993	ಮೂಲೆ	ದಕ್ಷಿಣ & ಪೂರ್ವ 9.00	14.00	(9+12)/2	147.00	99318.00	146.00
108	ವಿಜಯನಗರ 2ನೇ ಹಂತ	4039	ಮೂಲೆ	ಪಶ್ಚಿಮ & ದಕ್ಷಿಣ 9.0 & 6.0	(8+5.50)/2	12.00	81.00	99318.00	80.45
109	ವಿಜಯನಗರ 2ನೇ ಹಂತ	4245	ಮೂಲೆ	ಉತ್ತರ & ಪೂರ್ವ 9.0 & 6.0	9.00	5.00	45.00	99318.00	44.69
110	ವಿಜಯನಗರ 2ನೇ ಹಂತ	4280	ಮೂಲೆ	ದಕ್ಷಿಣ & ಪೂರ್ವ 9.0 & 6.0	9.00	(4.5+5.0)/2	42.75	99318.00	42.46
111	ವಿಜಯನಗರ 2ನೇ ಹಂತ	4321	ಮೂಲೆ	ಉತ್ತರ & ಪೂರ್ವ 9.0 & 6.0	9.00	6.00	54.00	99318.00	53.63
112	ವಿಜಯನಗರ 2ನೇ ಹಂತ	4360	ಮೂಲೆ	ದಕ್ಷಿಣ & ಪೂರ್ವ 9.0 & 6.0	9.00	7.20	64.80	99318.00	64.36
113	ವಿಜಯನಗರ 2ನೇ ಹಂತ	4624	ಮೂಲೆ	ಉತ್ತರ & ಪಶ್ಚಿಮ 18.0 & 6.0	13.00	(18+16.5)/2	224.25	99318.00	222.72
114	ವಿಜಯನಗರ 2ನೇ ಹಂತ	4739	ಮೂಲೆ	ದಕ್ಷಿಣ & ಪೂರ್ವ 9.0 & 9.0	8.50	9.00	76.50	99318.00	75.98
115	ವಿಜಯನಗರ 2ನೇ ಹಂತ	4774	ಮೂಲೆ	ದಕ್ಷಿಣ & ಪಶ್ಚಿಮ 9.0 & 18.0	(15+12)/2	18.00	243.00	99318.00	241.34
116	ವಿಜಯನಗರ 2ನೇ ಹಂತ	5100	ಮೂಲೆ	ದಕ್ಷಿಣ & ಪಶ್ಚಿಮ 9.0 & 6.0	9.00	(4.50+4.0)/2	38.25	99318.00	37.99
117	ವಿಜಯನಗರ 2ನೇ ಹಂತ	5715	ಮೂಲೆ	ಪಶ್ಚಿಮ & ದಕ್ಷಿಣ 9.0 & 9.0	(8.50+2.00)/2	18.40	96.60	99318.00	95.94
118	ವಿಜಯನಗರ 2ನೇ ಹಂತ	4795	ಮೂಲೆ	ದಕ್ಷಿಣ & ಪಶ್ಚಿಮ 9.0 & 9.0	(9.5+8.5)/2	12.00	108.00	99318.00	107.26
119	ದೇವನೂರು 2ನೇ ಹಂತ 2ನೇ ಘಟ್ಟ	2014	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
120	ದೇವನೂರು 2ನೇ ಹಂತ 2ನೇ ಘಟ್ಟ	2167	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
121	ದೇವನೂರು 2ನೇ ಹಂತ 2ನೇ ಘಟ್ಟ	2168	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
122	ದೇವನೂರು 2ನೇ ಹಂತ 2ನೇ ಘಟ್ಟ	2280/ಡಿ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
123	ದೇವನೂರು 2ನೇ ಹಂತ 2ನೇ ಘಟ್ಟ	2280/ಇ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
124	ದೇವನೂರು 2ನೇ ಹಂತ 2ನೇ ಘಟ್ಟ	2280/ಎಫ್	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
125	ದೇವನೂರು 2ನೇ ಹಂತ 2ನೇ ಘಟ್ಟ	2280/ಜಿ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
126	ದೇವನೂರು 2ನೇ ಹಂತ 2ನೇ ಘಟ್ಟ	2280/ಹೆಚ್	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
127	ದೇವನೂರು 2ನೇ ಹಂತ 2ನೇ ಘಟ್ಟ	2280/ಐ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
128	ದೇವನೂರು 2ನೇ ಹಂತ 2ನೇ ಘಟ್ಟ	2280/ಜೆ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
129	ದೇವನೂರು 2ನೇ ಹಂತ 2ನೇ ಘಟ್ಟ	2280/ಕೆ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
130	ದೇವನೂರು 2ನೇ ಹಂತ 2ನೇ ಘಟ್ಟ	2233	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
131	ದೇವನೂರು 2ನೇ ಹಂತ 2ನೇ ಘಟ್ಟ	2230	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
132	ದೇವನೂರು 2ನೇ ಹಂತ 2ನೇ ಘಟ್ಟ	2231	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
133	ಶಾಂತವೇರಿ ಗೋಪಾಲಗೌಡ	01	ಮೂಲೆ	ಉ:9.00ಪೂ:9.00	9.00	11.70	105.30	59180.00	62.32
134	ಶಾಂತವೇರಿ ಗೋಪಾಲಗೌಡ	12	ಮೂಲೆ	ದ:12.00ಪೂ:9.00	6.60	11.50	75.90	59180.00	44.92
135	ಶಾಂತವೇರಿ ಗೋಪಾಲಗೌಡ	24	ಮೂಲೆ	ಉ:9.00ಪ:9.00	9.50	11.70	111.15	59180.00	65.78
136	ಶಾಂತವೇರಿ ಗೋಪಾಲಗೌಡ	79	ಮೂಲೆ	ದ:12.00ಪ:9.00	9.00	12.00	108.00	59180.00	63.91
137	ಶಾಂತವೇರಿ ಗೋಪಾಲಗೌಡ	90	ಮೂಲೆ	ಉ:9.00ಪ:9.00	10.00	11.00	110.00	59180.00	65.10
138	ಶಾಂತವೇರಿ ಗೋಪಾಲಗೌಡ	100	ಮೂಲೆ	ದ:12.00ಪ:12.00	12.20	18.00	219.60	59180.00	129.96
139	ಶಾಂತವೇರಿ ಗೋಪಾಲಗೌಡ	133	ಮೂಲೆ	ಉ:12.00ಪೂ:9.00	12.00	18.00	216.00	59180.00	127.83
140	ಶಾಂತವೇರಿ ಗೋಪಾಲಗೌಡ	144	ಮೂಲೆ	ದ:12.00ಪೂ:9.00	12.00	18.00	216.00	59180.00	127.83
141	ಶಾಂತವೇರಿ ಗೋಪಾಲಗೌಡ	121	ಮೂಲೆ	ದ:12.00ಪ:9.00	12.00	18.00	216.00	59180.00	127.83

ಮುಂದುವರೆದಿದೆ...

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ–ದ	ಅಳತೆ ಮೀ ಗಳಲ್ಲಿ ಪೂ–ಪ	ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
142	ಶಾಂತವೇರಿ ಗೋಪಾಲಗೌಡ	120	ಮೂಲೆ	ದ:12.00ಪೂ:9.00	12.00	18.00	216.00	59180.00	127.83
143	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	280	ಮೂಲೆ	ದ:9.00 ಪ:12.00	13.00	18.00	234.00	59180.00	138.48
144	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	300	ಮೂಲೆ	ಉ:12.00 ಪೂ:9.00	9.00	12.00	108.00	59180.00	63.91
145	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	318	ಮೂಲೆ	ಉ:12.00 ಪ:12.00	12.00	6.00	72.00	59180.00	42.61
146	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	338	ಮೂಲೆ	ಉ:12.00 ಪೂ.9.00	12.00	9.00	108.00	59180.00	63.91
147	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	363	ಮೂಲೆ	ದ:9.00 ಪ:12.00	12.00	13.70	164.40	59180.00	97.29
148	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	485	ಮೂಲೆ	ದ:9.00ಪ:12.00	9.00	12.00	108.00	59180.00	63.91
149	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	653	ಮೂಲೆ	ದ:9.00ಪ:9.00	13.00	12.00	156.00	59180.00	92.32
150	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	668	ಮೂಲೆ	ಉ.9.00 ಪ:9.00	9.00	12.00	108.00	59180.00	63.91
151	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	863	ಮೂಲೆ	ಉ.9.00 ಪ:12.00	18.00	12.00	216.00	59180.00	127.83
152	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	923	ಮೂಲೆ	ಉ.18.00 ಪ:12.00	24.00	15.00	360.00	59180.00	213.05
153	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1313	ಮೂಲೆ	ಉ.9.00 ಪೂ:9.00	9.00	12.00	108.00	59180.00	63.91
154	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1314	ಮೂಲೆ	ಉ:9.00 ಪ:12.00	12.00	18.00	216.00	59180.00	127.83
155	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1322	ಮೂಲೆ	ಉ:12.00 ಪ:12.00	9.00	12.00	108.00	59180.00	63.91
156	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1343	ಮೂಲೆ	ಉ:12.00 ಪ:12.00	12.00	9.00	108.00	59180.00	63.91
157	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1415	ಮೂಲೆ	ದಉ.9.00 ಪೂ:12.00	12.00	18.00	216.00	59180.00	127.83
158	ಲಲಿತಾದ್ರಿನಗರ (ದಕ್ಷಿಣ)	721	ಮೂಲೆ	ಉತ್ತರ18.00	9.00	12.00	108.00	59180.00	63.91
159	ಲಲಿತಾದ್ರಿನಗರ (ದಕ್ಷಿಣ)	722	ಮೂಲೆ	ಉತ್ತರ18.00	9.00	12.00	108.00	59180.00	63.91
160	ಗಾಯತ್ರಿಪುರಂ 1ನೇ ಹಂತ	388	ಮಧ್ಯಂತರ	ಪಶ್ಚಿಮ 9.00	9.00	14.00	126.00	64560.00	81.35
161	ಗಾಯತ್ರಿಪುರಂ 1ನೇ ಹಂತ	373	ಮಧ್ಯಂತರ	ಪೂರ್ವ9.00	12.00	15.00	180.00	64560.00	116.21
162	ಗಾಯತ್ರಿಪುರಂ 1ನೇ ಹಂತ	345	ಮಧ್ಯಂತರ	ಪಶ್ಚಿಮ9.00	10.00	12.00	120.00	64560.00	77.47
163	ಗಾಯತ್ರಿಪುರಂ 1ನೇ ಹಂತ	341	ಮಧ್ಯಂತರ	ಪಶ್ಚಿಮ 9.00	10.70	12.00	128.4	64560.00	82.90
164	ಗಾಯತ್ರಿಪುರಂ 1ನೇ ಹಂತ	314	ಮಧ್ಯಂತರ	ಪಶ್ಚಿಮ 9.00	12.00	9.00	108.00	64560.00	69.72
165	ಸಾತಗಳ್ಳಿ 2ನೇ ಹಂತ	4622	ಮೂಲೆ	ಪೂ–ಉ 9.00	(9.00+9.30)/2	(6.60+6.60)/2	60.39	37660.00	22.74
166	ಸಾತಗಳ್ಳಿ 2ನೇ ಹಂತ	4649	ಮೂಲೆ	9.00 ಪ – ಉ	9.00	6.00	54.00	37660.00	20.34
167	ಸಾತಗಳ್ಳಿ 2ನೇ ಹಂತ	4648	ಮೂಲೆ	9.00 ದ – ಪ	9.00	(6.10+6.30)/2	55.80	37660.00	21.01
168	ಸಾತಗಳ್ಳಿ 2ನೇ ಹಂತ	4597	ಮೂಲೆ	9.00 ಉ – ಪ	9.20	6.10	56.12	37660.00	21.13
169	ಸಾತಗಳ್ಳಿ 2ನೇ ಹಂತ	4596	ಮೂಲೆ	9.00 ಪ – ದ	9.00	(6.15+6.20)/2	55.57	37660.00	20.93
170	ಸಾತಗಳ್ಳಿ 2ನೇ ಹಂತ	4545	ಮೂಲೆ	9.00 ಉ	9.00	(6.10+6.15)/2	55.12	37660.00	20.76
171	ಸಾತಗಳ್ಳಿ 2ನೇ ಹಂತ	5406	ಮೂಲೆ	9.00 ಪೂ – ಪ	9.00	(6.00+8.50)/2	65.25	37660.00	24.57
172	ಸಾತಗಳ್ಳಿ 2ನೇ ಹಂತ	5405	ಮಧ್ಯಂತರ	9.00 ದ	9.00	6.00	54.00	32280.00	17.43
173	ಸಾತಗಳ್ಳಿ 2ನೇ ಹಂತ	5404	ಮಧ್ಯಂತರ	9.00 ದ	9.00	6.00	54.00	32280.00	17.43
174	ಸಾತಗಳ್ಳಿ 2ನೇ ಹಂತ	5403	ಮಧ್ಯಂತರ	9.00 ದ	9.00	6.00	54.00	32280.00	17.43
175	ಸಾತಗಳ್ಳಿ 2ನೇ ಹಂತ	5402	ಮಧ್ಯಂತರ	9.00 ದ	9.00	6.00	54.00	32280.00	17.43
176	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1698	ಮಧ್ಯಂತರ	9.00 ಪೂ	15.00	24.00	360.00	48643.00	175.11
177	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1697	ಮಧ್ಯಂತರ	9.00 ಪೂ	15.00	24.00	360.00	48643.00	175.11
178	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1696	ಮಧ್ಯಂತರ	9.00 ಪೂ	15.00	24.00	360.00	48643.00	175.11
179	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1695	ಮಧ್ಯಂತರ	9.00 ಪೂ	15.00	24.00	360.00	48643.00	175.11
180	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1694	ಮಧ್ಯಂತರ	9.00 ಪೂ	15.00	24.00	360.00	48643.00	175.11
181	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1693	ಮಧ್ಯಂತರ	9.00 ಪೂ	15.00	24.00	360.00	48643.00	175.11
182	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1692	ಮಧ್ಯಂತರ	9.00 ಪೂ	15.00	24.00	360.00	48643.00	175.11
183	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1688	ಮಧ್ಯಂತರ	9.00 ಪೂ	15.00	24.00	360.00	48643.00	175.11
184	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1689	ಮಧ್ಯಂತರ	9.00 ಪೂ	15.00	24.00	360.00	48643.00	175.11
185	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1690	ಮಧ್ಯಂತರ	9.00 ಪೂ	15.00	24.00	360.00	48643.00	175.11
186	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1691	ಮಧ್ಯಂತರ	9.00 ಪೂ	15.00	24.00	360.00	48643.00	175.11
187	ವಸಂತನಗರ	651	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
188	ವಸಂತನಗರ	682	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
189	ವಸಂತನಗರ	725	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
190	ವಸಂತನಗರ	754	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
191	ವಸಂತನಗರ	9	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
192	ವಸಂತನಗರ	10	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
193	ವಸಂತನಗರ	11	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
194	ವಸಂತನಗರ	12	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
195	ವಸಂತನಗರ	210	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
196	ವಸಂತನಗರ	1910	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
197	ವಸಂತನಗರ	1911	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
198	ವಸಂತನಗರ	1912	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
199	ವಸಂತನಗರ	1913	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
200	ವಸಂತನಗರ	1914	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
								ಒಟ್ಟು (ಲಕ್ಷಗಳು)	18629.43

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ **New e-Auction Bidding user manual** ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://kppp.karnataka.gov.in** ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ನಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ICICI** ಬ್ಯಾಂಕ್‌ಗೆ **DEBIT CARD/CREDIT CARD/NET BANKING** ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MDA Mysore, Bank of Baroda, Account No.89260100004660** (**IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು **https://kppp.karnataka.gov.in** ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕ್ಷಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕ್ಷಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ **(Location)**, ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –

ಅ) ವಲಯ ಕಛೇರಿ–1 – 1. ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.9740029156. ಆ) ವಲಯ ಕಛೇರಿ–2– ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ–4– ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ–6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ–8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿಗೆ ಪಿಯು ವಿದ್ಯಾರ್ಥಿನಿ ಬಲಿ



ಮಡಿಕೇರಿ: ಕಾಡಾನೆ ದಾಳಿಗೆ ವಿದ್ಯಾರ್ಥಿನಿ ಬಲಿಯಾಗಿರುವ ಘಟನೆ ಶನಿವಾರ ಸಂಜೆ ಮಡಿಕೇರಿ ತಾಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ನಡೆದಿದೆ. ಮಡಿಕೇರಿ ತಾಲೂಕಿನ ಮದೆ ಗ್ರಾಮ ಪಂಚಾಯಿತಿಯ ಬೆಟ್ಟತ್ತೂರು ಗ್ರಾಮದ ಗಿರೀಶ್ ಅವರ ಪುತ್ರಿ ಪೂಜಾ (17) ಮೃತ ದುರ್ದೈವಿ. ಮಡಿಕೇರಿಯ ಸಂತ ಮೈಕೆಲ್ ಶಾಲೆಯ ಪ್ರಥಮ ಕಗಅಯಲ್ಲಿ ವ್ಯಾಸಂಗ ಮಾಡುತಿದ್ದ ಪೂಜಾ ನಿನ್ನೆ ಸಂಜೆ 5:30ಕ್ಕೆ ಕಾಲೇಜು ಮುಗಿಸಿ ಮತ್ತೆ ಬೆಟ್ಟತ್ತೂರಿಗೆ ಬಂದಿದ್ದಳು. ಬಸ್ಸಿನಿಂದಿಳಿದು ಮನೆಗೆ ಹೋಗುವಾ ಏಕಾಏಕಿ ಬಂದ ಕಾಡಾನೆ ದಾರಿಯಲ್ಲೇ ದಾಳಿ ನಡೆಸಿದೆ. ಇದರಿಂದ ಪೂಜಾ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಗ್ರಾಮಸ್ಥರ ಆಕ್ರೋಶ: ವಿದ್ಯಾರ್ಥಿನಿ ಪೂಜಾ ಸಾವು ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದಾರೆ. ಆನೆ ದಾಳಿ ತಡೆಯುವಲ್ಲಿ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ. ಮಾನವ ಸಂಘರ್ಷ ತಡೆಗೆ ಅರಣ್ಯ ಇಲಾಖೆ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅಧಿಕಾರ ಹಸ್ತಾಂತರದಲ್ಲಿ ಡಿಕೆಶಿಗೆ ಹಿನ್ನಡೆ ಇಲ್ಲ

ದಾವಣಗೆರೆ: ಅಧಿಕಾರ ಹಸ್ತಾಂತರ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಹಿನ್ನಡೆಯಾಗುತ್ತಿಲ್ಲ. ಬದಲಿಗೆ, ಅವರಿಗೆ ಪೂರಕವಾದ ವಾತಾವರಣವೇ ಇದೆ. ಹೈಕಮಾಂಡ್ ತೀರ್ಮಾನ ಮಾಡಿದರೆ ಎಲ್ಲವೂ ಬಗೆಹರಿಯಲಿದೆ ಎಂದು ಚನ್ನಗಿರಿ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜು ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಸ್ತಾಂತರದ ಗೊಂದಲದ ಬಗ್ಗೆ ಎಲ್ಲರೂ ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅಧಿಕಾರ ಹಂಚಿಕೆಯ ಗೊಂದಲವನ್ನು ಹೈಕಮಾಂಡ್ ತಕ್ಷಣವೇ ಬಗೆಹರಿಸಬೇಕು. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧ. ಶೀಘ್ರವೇ ನಿರ್ಧಾರ ಕೈಗೊಳ್ಳದಿದ್ದರೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟ ಎಂಬ ಶಾಸಕ ಬಾಲಕೃಷ್ಣ ಅವರ ಹೇಳಿಕೆಯಲ್ಲಿ ಅರ್ಥವಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿನ ಕುರ್ಚಿ ಕಿತ್ತಾಟದಿಂದ ಬೇಸತ್ತ ಜನ ಕಾಂಗ್ರೆಸ್ ಕಡೆ ಒಲವು ತೋರಿದ್ದರು ಎಂಬುದನ್ನು ನಾವು ಮರೆಯಬಾರದು ಎಂದರು.

ವಿರಾಮ
ಪ್ರತಿ ಭಾನುವಾರ

ಹೊನ್ನೇಕೊಡಿ ಸೇತುವೆ ಉದ್ಘಾಟಿಸಲಿರುವ ಸಿಎಂ | ಮೊದಲ ಹಂತದಲ್ಲಿ 25 ಕೋಟಿ ರು : ಎಂ.ಶ್ರೀನಿವಾಸ್

ಎನ್.ಆರ್.ಪುರ ರಸ್ತೆ ಅಗಲೀಕರಣಕ್ಕೆ 60 ಕೋಟಿ

ವಿಶ್ವವಾಣಿ ಸುದ್ದಿಮನೆ

ಎನ್.ಆರ್.ಪುರ: ನರಸಿಂಹರಾಜಪುರ ಪಟ್ಟಣದ ರಸ್ತೆ ಅಗಲೀಕರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 60 ಕೋಟಿ ರುಪಾಯಿ ಮಂಜೂರು ಮಾಡಿದ್ದು ಇದರಲ್ಲಿ 25 ಕೋಟಿ ರುಪಾಯಿ ಬಿಡುಗಡೆಯಾಗಿದ್ದು ಉಪ ವಿಭಾಗಾಧಿಕಾರಿಗಳ ಖಾತೆಗೆ ಜಮೆಯಾಗಿದೆ ಎಂದು ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಥಮ ಹಂತದಲ್ಲಿ ಪ್ರವಾಸಿ ಮಂದಿರದಿಂದ ಪೋಲಿಸ್ ಠಾಣೆಯವರೆಗೆ ರಸ್ತೆ ಅಗಲೀಕರಣವಾಗಲಿದೆ. ಇದರಲ್ಲಿ 161 ಖಾತೆದಾರರ ಮನೆ, ಅಂಗಡಿಗಳಿವೆ. 161ರಲ್ಲಿ 150 ಜನರು ಸ್ವಯಂ ಒಪ್ಪಿಗೆ ಪತ್ರ ಹಾಗೂ ಎಲ್ಲಾ ದಾಖಲೆ ನೀಡಿದ್ದಾರೆ. ಅವರ ಖಾತೆಗಳಿಗೆ ಮುಂದಿನ 2–3 ದಿನಗಳಲ್ಲಿ ಪರಿಹಾರ ಹಣ ಜಮಾ ಮಾಡಲಾಗುವುದು. ಉಳಿದ 11 ಜನರು ಒಪ್ಪಿಗೆ ನೀಡದೆ ನ್ಯಾಯಾಲಯದ ಮೊರೆ ಹೋಗಿದ್ದಾರೆ ಎಂದು ವಿವರಿಸಿದರು.

ಜಯಪುರ, ಬಾಳೆಹೊನ್ನೂರು ಭಾಗದಲ್ಲಿ ರಸ್ತೆ ಅಗಲೀಕರಣ ಮಾಡುವ ಸಂದರ್ಭದಲ್ಲಿ ಪರಿಹಾರ ನೀಡಿರಲಿಲ್ಲ. ನಾನು ಹುಟ್ಟೂರಿನ ಅಭಿಮಾನದಿಂದ ರಸ್ತೆ ಅಗಲೀಕರಣದ ಬಗ್ಗೆ ತೀವ್ರ ಆಸಕ್ತಿ ವಹಿಸಿ ನನ್ನ ಹಾಗೂ ಸಿದ್ದರಾಮಯ್ಯ ಅವರ 40 ವರ್ಷದ ಸ್ನೇಹವನ್ನು ಉಪಯೋಗಿಸಿಕೊಂಡು ಸತತವಾಗಿ 2–3 ವರ್ಷ ಪ್ರಯತ್ನ ಪಟ್ಟು ಖಾತೆದಾರರಿಗೆ ಪರಿಹಾರ ನೀಡಲು 60 ಕೋಟಿ ರುಪಾಯಿ ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ಆ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದ ಪ್ರಶಾಂತಶೆಟ್ಟಿ ಸಹಕಾರ ನೀಡಿದ್ದರು ಎಂದು ಸ್ಮರಿಸಿದರು. ನರಸಿಂಹರಾಜಪುರ ಪಟ್ಟಣದ ಪ್ರವಾಸಿ ಮಂದಿರದಿಂದ ಪೊಲೀಸ್ ಠಾಣೆಯವರೆಗೆ ಮೊದಲ ಹಂತದ ರಸ್ತೆ ಅಗಲೀಕರಣವಾಗಲಿದೆ. ಎರಡನೇ ಹಂತದಲ್ಲಿ ಪಟ್ಟಣ ಪಂಚಾಯಿತಿ ಮುಂಭಾಗದಿಂದ ಸುಂಕದ ಕಟ್ಟೆಯವರೆಗೆ ರಸ್ತೆ ಅಗಲೀಕರಣವಾಗಲಿದೆ. 130 ವರ್ಷದ ನಂತರ ಪ್ರಥಮ ಬಾರಿಗೆ ರಸ್ತೆ ಅಗಲೀಕರಣ ಮಾಡುತ್ತಿದ್ದೇವೆ. 1 ವರ್ಷದ ಒಳಗೆ ರಸ್ತೆ ಅಗಲೀಕರಣ ಪೂರ್ತಿ ಆಗಲಿದೆ. ನರಸಿಂಹರಾಜಪುರ ಎಲ್ಲಾ ಜನರು ಒಟ್ಟಾಗಿ ಸಹಕಾರ ನೀಡಬೇಕು. ಸರಕಾರದ ಮಾನದಂಡದಂತೆ ಪರಿಹಾರ ನೀಡಲಾಗುವುದು. ಪ್ರತಿಯೊಬ್ಬ ಮನೆಯ ಖಾತೆದಾರರು ತಮ್ಮ ದಾಖಲೆಗಳನ್ನು ನೀಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಸದಸ್ಯ ಪಿ.ಆರ್. ಸದಾಶಿವ, ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಪ್ರಶಾಂತ ಶೆಟ್ಟಿ, ಮಾಜಿ ಅಧ್ಯಕ್ಷೆ ಜುಬೇದ, ಮಾಜಿ ಸದಸ್ಯರಾದ ಮೊಹ್ಮದ್ ವಸೀಂ, ಸುನೀಲ್ ಇದ್ದರು.

ಸೇತುವೆ ಕಾಮಗಾರಿಯನ್ನು ಪರಿಶೀಲನೆ ನಡೆಸಲಾಯಿತು.

> ರಸ್ತೆ ಅಗಲೀಕರಣವನ್ನು ಯಾರಿಂದಲೂ ನಿಲ್ಲಿಸಲು ಸಾಧ್ಯವಿಲ್ಲ. ಒಪ್ಪಿಗೆ ನೀಡಿದವರಿಗೆ ತಕ್ಷಣ ಪರಿಹಾರ ಸಿಗಲಿದೆ. ನ್ಯಾಯಾಲಯಕ್ಕೆ ಹೋದರೆ ತಕ್ಷಣ ಪರಿಹಾರ ಸಿಗುವುದಿಲ್ಲ. ನ್ಯಾಯಾಲಯದ ತೀರ್ಪಿನ ನಂತರ ಪರಿಹಾರ ಸಿಗಲಿದೆ. ಅಲ್ಲಿಯವರೆಗೆ ಕಾಯಬೇಕಾಗಿದೆ. 11 ಖಾತೆದಾರರು ನ್ಯಾಯಾಲಯಕ್ಕೆ ಹೋಗಿರುವುದು ನನಗೆ ನೋವು, ಬೇಸರ ತಂದಿದೆ.
>
> – ಎಂ.ಶ್ರೀನಿವಾಸ್, ಅಧ್ಯಕ್ಷರು, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ

ಅಲೀಪುರಕ್ಕೂ ಖಮೇನಿಗೂ ನಂಟೇನು?

← ಮೊದಲಪುಟದಿಂದ

15 ವಿದ್ಯಾರ್ಥಿಗಳು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿದಿನ ಕರೆ ಮಾಡಿ ಬಂಧು ಬಾಂಧವರ ಯೋಗಕ್ಷೇಮ ವಿಚಾರಿಸುತ್ತಾರೆ ಎಂದು ಹೇಳಿದ್ದಾರೆ. ಬೆಳ್ಳಿಕುಂಟೆ ಅಲೀಪುರ ವಾಯಿತು: ಅಲೀಪುರದ ಮೂಲ ಹೆಸರು ಬೆಳ್ಳಿಕುಂಟೆ. ಈ ಹಿಂದೆ ಬಿಜಾಪುರ ಆದಿಲ್ ಶಾಹಿಗಳ ಅವಧಿ ಯಲ್ಲಿ ಅಲ್ಲಿನ ಜನರು ಇಲ್ಲಿಗೆ ವಲಸೆ ಬಂದರು. ಮುಸ್ಲಿಮರ ಸಂಖ್ಯೆ ಹೆಚ್ಚಿದಂತೆ ಬೆಳ್ಳುಕುಂಟೆ ಅಲೀಪುರವಾಗಿ ರೂಪಾಂತರವಾಯಿತು. ಗ್ರಾಮದ ಬಹುತೇಕ ಮಂದಿ ಇರಾನ್, ಅರಬ್ ದೇಶಗಳು ಸೇರಿದಂತೆ ಜಗತ್ತಿನ ವಿವಿಧ ದೇಶಗಳ ಜತೆ ವ್ಯಾಪಾರ, ವಹಿವಾಟು, ಶಿಕ್ಷಣದ ಕಾರಣಕ್ಕೆ ಸಂಪರ್ಕ ಹೊಂದಿದ್ದಾರೆ. ಗ್ರಾಮದಲ್ಲಿ ಅಂಜುಮನ್ ಜಾಫರಿಯಾ ಸಮಿತಿ ಪ್ರತ್ಯೇಕವಾದ ಕೇಬಲ್ ಚಾನಲ್ ಹೊಂದಿದೆ. 'ಅಲಿ ಟಿವಿ' ಹೆಸರಿನ ಈ ಚಾನಲ್‌ನಲ್ಲಿ ಮಸೀದಿಯ ಪ್ರಾರ್ಥನೆಗಳು, ಕುರ್‌ಆನ್ ಪಠಣ ಧಾರ್ಮಿಕ ವಿಚಾರಗಳು ಪ್ರಸಾರವಾಗುತ್ತವೆ.

ಅಲೀಪುರದಲ್ಲಿ ಪ್ರತಿಭಟನೆ

ಅಯಾತೊಲ್ಲಾ ಅಲಿ ಖಮೇನಿ ಹತ್ಯೆಗೆ ಆಕ್ರೋಶ ವ್ಯಕ್ತಪಡಿಸಿ ಗೌರಿಬಿದನೂರಿನ ಅಲೀಪುದಲ್ಲಿ ಶಿಯಾ ಮುಸ್ಲಿಮರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮಸೀದಿಯಿಂದ ಆರಂಭವಾದ ಮೆರವಣಿಗೆ ಸೈಯದ್ ಮುಸ್ತಫಾ ಹುಸೇನ್ ವೃತ್ತದವರೆಗೆ ಸಾಗಿತು. ಕಪ್ಪು ಬಟ್ಟೆ ಧರಿಸಿ, ಕಪ್ಪು ಬಾವುಟ ಹಿಡಿದು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ ಕೂಗಿದರು. ಮಸೀದಿ ಬಳಿ ಖಮೇನಿ ಅವರಿಗೆ ಗೌರವ ಸಲ್ಲಿಸಲು ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಹಲವರು ಭಾವುಕರಾಗಿ ಕಣ್ಣೀರಿಟ್ಟರು. ನಂತರ ಗ್ರಾಮದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಸಾಗಿದರು. ಮೆರವಣಿಗೆಯಲ್ಲಿ ಹಾಡಿನ ಮೂಲಕ ಖಮೇನಿ ಅವರ ಸಾಧನೆ ಸ್ಮರಿಸಲಾಯಿತು. ಗ್ರಾಮದ ಎಲ್ಲ ಅಂಗಡಿಗಳು ಬಾಗಿಲು ಮುಚ್ಚಿದ್ದವು.

ಕಲಬುರಗಿ ಐಟಿಎಫ್ ಮಹಿಳಾ ಟೆನಿಸ್ | ಅಂತಿಮ ಅರ್ಹತಾ ಸುತ್ತಿಗೆ ಪ್ರವೇಶ | ಪೂಜಾ ಇಂಗಳೆಗೆ ಕಶಿಶ್ ಶಾಕ್

2ನೇ ಸುತ್ತಿಗೆ 12 ಭಾರತೀಯ ಆಟಗಾರ್ತಿಯರು ಲಗ್ಗೆ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಇಲ್ಲಿನ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದ ಸಿಂಥೆಟಿಕ್ ಕೋರ್ಟ್‌ನಲ್ಲಿ ಆರಂಭವಾದ ಐಟಿಎಫ್‌ಡಬ್ಲ್ಯು ಕಲಬುರಗಿ ಮಹಿಳಾ ಟೆನಿಸ್ ಟೂರ್ನಮೆಂಟ್‌ನ ಅರ್ಹತಾ ಸುತ್ತಿನ ಮೊದಲ ದಿನವೇ ಆತಿಥೇಯ ಭಾರತೀಯ ಆಟಗಾರ್ತಿಯರು ಅಬ್ಬರದ ಪ್ರದರ್ಶನ ನೀಡಿದ್ದಾರೆ. ಭಾನುವಾರ ನಡೆದ ಪಂದ್ಯಗಳಲ್ಲಿ ಅಮೋಘ ಜಯ ಸಾಧಿಸಿದ 12 ಭಾರತೀಯರು ಅಂತಿಮ ಅರ್ಹತಾ ಸುತ್ತಿಗೆ ಪ್ರವೇಶ ಪಡೆಯುವ ಮೂಲಕ ಮುಖ್ಯ ಡ್ರಾಗೆ ಏರಲು ಸಜ್ಜಾಗಿದ್ದಾರೆ.

ಪೂಜಾ ಇಂಗಳೆಗೆ ಕಶಿಶ್ ಶಾಕ್: ದಿನದ ದೊಡ್ಡ ಅಚ್ಚರಿ ಎಂದರೆ ಕಶಿಶ್ ಭಾಟಿಯಾ ಅವರ ಪ್ರದರ್ಶನ. ನಾಲ್ಕನೇ ಶ್ರೇಯಾಂಕದ ಪೂಜಾ ಇಂಗಳೆ ವಿರುದ್ಧ ಕಶಿಶ್ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದರು. ಅನುಭವದಲ್ಲಿ ಮೇಲಿದ್ದ ಪೂಜಾ ಅವರಿಗೆ ತೀವ್ರ ಪೈಪೋಟಿ ನೀಡಿದ ಕಶಿಶ್, ಅಂತಿಮವಾಗಿ 6–4, 6–0 ನೇರ ಸೆಟ್‌ಗಳಿಂದ ಗೆದ್ದು ಎರಡನೇ ಸುತ್ತು ತಲುಪಿದರು. ಮತ್ತೊಂದು ಪಂದ್ಯದಲ್ಲಿ ಸೌಮ್ಯ ರೊಂಡೆ ಅವರು 15ನೇ ಶ್ರೇಯಾಂಕದ ದಿಶಾ ಬೆಹೆರಾ ವಿರುದ್ಧ 7–5, 6–4 ಅಂತರದಲ್ಲಿ ಜಯಗಳಿಸಿ ಅಚ್ಚರಿ ಮೂಡಿಸಿದರು.

ರೋಚಕ ಹೋರಾಟದಲ್ಲಿ ಸ್ನಿಗ್ಧಾ ಕಾಂತಾ ಜಯ: ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ ಸ್ನಿಗ್ಧಾ ಕಾಂತಾ ಅವರು ಮಲೇಷ್ಯಾದ ಆರನೇ ಶ್ರೇಯಾಂಕದ ಎಲ್ವಾ ವಾನ್ ವಿರುದ್ಧ ಮೈನವಿರೇಳಿಸುವ ಹೋರಾಟ ನಡೆಸಿದರು. ಮೊದಲ ಸೆಟ್ ಅನ್ನು 6–1 ರಿಂದ ಸುಲಭವಾಗಿ ಗೆದ್ದರೂ, ಎರಡನೇ ಸೆಟ್‌ನಲ್ಲಿ ಸೋತರು. ಆದರೆ ನಿರ್ಣಾಯಕ ಮೂರನೇ ಸೆಟ್‌ನಲ್ಲಿ (ಟೈ–ಬ್ರೇಕರ್) 10–3 ರಿಂದ ಎದುರಾಳಿಯನ್ನು ಮಣಿಸಿ ಪಂದ್ಯ ಗೆದ್ದುಕೊಂಡರು. 12ನೇ ಶ್ರೇಯಾಂಕದ ಆಹಾನ್ ಆಹಾನ್ ಕೂಡ ಡಾನಿಕಾ ಫರ್ನಾಂಡೋ ವಿರುದ್ಧ 5–7, 6–4, 11–9 ಅಂತರದ ಕಠಿಣ ಜಯ ದಾಖಲಿಸಿದರು. ಸೋಮವಾರ ನಡೆಯಲಿರುವ ಅಂತಿಮ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಗೆಲ್ಲುವ ಆಟಗಾರ್ತಿಯರು ಟೂರ್ನಮೆಂಟ್‌ನ ಪ್ರಮುಖ ಘಟ್ಟವಾದ 'ಮುಖ್ಯ ಡ್ರಾ'ಗೆ ಆಯ್ಕೆಯಾಗಲಿದ್ದಾರೆ.

ಶ್ರೇಯಾಂಕಿತರ ಮುನ್ನಡೆ: ಅಗ್ರ ಶ್ರೇಯಾಂಕದ ಮರಿಯಾ ಮಿಖೈಲೋವಾ ಭಾರತದ ಚಂದನಾ ಪೊಟುಗಾರಿ ವಿರುದ್ಧ 6–2, 6–1 ರಿಂದ ಜಯಗಳಿಸಿದರೆ, ಸಿಂಗಾಪುರದ ಎವಾ ಮೇರಿ ಡೆಸ್ವಿಗ್ನೆಸ್ ಭಾರತದ ಓಮ್ನಾ ಯಾದವ್ ವಿರುದ್ಧ 6–1, 6–3 ಅಂತರದಲ್ಲಿ ಸುಲಭ ಜಯ ದಾಖಲಿಸಿದರು.

ಪ್ರಮುಖ ಫಲಿತಾಂಶಗಳು

- ಐಶ್ವರ್ಯಾ ಜಾಧವ್ ಬಿಟಿ ಪ್ರತ್ಯೂಷಾ ರಾಚಪುಡಿ (6–3, 6–1)
- ಸಂದೀಪ್ತಿ ಸಿಂಗ್ ರಾವ್ ಬಿಟಿ ಸೈಲಿ ಪ್ರಶಾಂತ್ ಕುಮಾರ್ (7–5, 6–2)
- ಯಶಸ್ವಿನಿ ಪನ್ವಾರ್ ಬಿಟಿ ಆಕೃತಿ ಸೋಂಕುಸಾರೆ (6–4, 6–4)
- ಲಕ್ಷ್ಮಿಸಿರಿ ದಂಡು ಬಿಟಿ ಜೀತೇಶ್ ಕುಮಾರಿ (6–1, 6–1)
- ಬೇಲಾ ತಮ್ಹಾಂಕರ್ ಬಿಟಿ ಜಿಜ್ಞಾಸಾ ನರಸಿಂಹಾನಿ (6–3, 6–2)

2 ವಾರ ಚುನಾವಣೆ ವಿಳಂಬ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಲದ (ಕೆಎಂಎಫ್) ಅಧ್ಯಕ್ಷ ಸ್ಥಾನದ ಚುನಾವಣೆ ಎರಡು ವಾರ ವಿಳಂಬವಾಗುವ ಸಾಧ್ಯತೆಯಿದೆ. ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆ ಪ್ರಕ್ರಿಯೆ ಮುಗಿದಿದ್ದರಿಂದ ಮಾ.6 ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಹುದು ಎಂದು ಹಾಲು ಮಹಾಮಂಡಲದಿಂದ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿತ್ತು. ಆದರೆ, ಮಾ.6 ರಿಂದ ಕರ್ನಾಟಕ ಬಜೆಟ್ ಅಧಿವೇಶನ ಆರಂಭವಾಗುತ್ತಿದ್ದು, ಅದೇ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸುತ್ತಿದ್ದಾರೆ. ಮಹಾಮಂಡಲದ ನಿರ್ದೇಶಕರಾಗಿ ಐವರು ವಿಧಾನಸಭಾ ಸದಸ್ಯರು ಇರುವ ಕಾರಣದಿಂದ ಚುನಾವಣೆಯನ್ನು ಎರಡು ವಾರ ಮುಂದೆ ಹಾಕುವ ಸೂಚನೆ ನೀಡಲಾಗಿತ್ತು. ಇದರಿಂದ ಮಾರ್ಚ್ 3ನೇ ವಾರ ಚುನಾವಣಾ ದಿನಾಂಕ ನಿಗದಿಯಾಗಬಹುದು ಎಂದು ಮೂಲಗಳು ತಿಳಿಸಿವೆ. ಶಾಸಕರಾದ ಎಚ್.ಡಿ.ರೇವಣ್ಣ (ಹಾಸನ ಒಕ್ಕೂಟ), ಬಾಲಚಂದ್ರ ಜಾರಕಿಹೊಳಿ (ಬೆಳಗಾವಿ ಒಕ್ಕೂಟ), ಕೆ.ವೈ.ನಂಜೇಗೌಡ (ಕೋಲಾರ ಒಕ್ಕೂಟ), ರಾಘವೇಂದ್ರ ಹಿಟ್ನಾಳ್ (ಬಳ್ಳಾರಿ, ರಾಯಚೂರು, ಕೊಪ್ಪಳ ಒಕ್ಕೂಟ), ಎಚ್.ವಿ.ವೆಂಕಟೇಶ್ (ತುಮಕೂರು ಒಕ್ಕೂಟ) ಅವರು ಕೆಎಂಎಫ್ ನಿರ್ದೇಶಕರು. ಇವರಲ್ಲದೇ ಇನ್ನೂ 11 ಒಕ್ಕೂಟದ ನಿರ್ದೇಶಕರು ಹಾಗೂ ಸರಕಾರದ ಪ್ರತಿನಿಧಿ, ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದ್ದಾರೆ.

ಸಮಾಚಾರ ಸಣ್ಣದಲ್ಲ

ದುಬೈನಲ್ಲಿ ಸಿಲುಕಿದ ಪುಷ್ಪಾ ಅಮರನಾಥ್

ಮೈಸೂರು: ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಮೈಸೂರಿನ ಪುಷ್ಪಾ ಅಮರನಾಥ್ ದುಬೈನಲ್ಲಿ ಸಿಲುಕಿದ್ದಾರೆ.

ಪತ್ರಿಕೆಯೊಂದು ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಪಾಲ್ಗೊಳ್ಳಲೆಂದು ದುಬೈಗೆ ಬಂದಿದ್ದೆ. ಇಸ್ರೇಲ್-ಇರಾನ್ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ. ನಾವು ಬರಬೇಕಿದ್ದ ವಿಮಾನ ರದ್ದಾಗಿದೆ. ಹೀಗಾಗಿ, ಇಲ್ಲೇ ಉಳಿಯುವಂತಾಗಿದೆ. ಹೋಟೆಲ್‌ವೊಂದರಲ್ಲಿ ತಂಗಿರುವ ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ಏನೂ ತೊಂದರೆ ಇಲ್ಲ ಎಂದು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ವಿದೇಶದಲ್ಲಿ ಸಿಲುಕಿದವರ ರಕ್ಷಣೆಗೆ ಕ್ರಮ: ಪರಂ

ಬೆಂಗಳೂರು: ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ವಿದ್ಯಾರ್ಥಿಗಳು ಸೇರಿದಂತೆ 150ಕ್ಕೂ ಹೆಚ್ಚು ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯವಾಗಿ ಚಿಕ್ಕಬಳ್ಳಾಪುರ ಮೂಲದ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ಲಭ್ಯವಾಗಿದೆ. ಅವರೆಲ್ಲರನ್ನೂ ಸುರಕ್ಷಿತವಾಗಿ ರಾಜ್ಯಕ್ಕೆ ಮರಳಿ ಕರೆತರಲು ಅಧಿಕಾರಿಗಳು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ಸಂಕಷ್ಟದಲ್ಲಿರುವ ಕನ್ನಡಿಗರಿಗೆ ಅಗತ್ಯ ಸೌಲಭ್ಯ ಒದಗಿಸಲು ಮತ್ತು ಅವರ ಕುಟುಂಬದೊಂದಿಗೆ ಸಂಪರ್ಕ ಸಾಧಿಸಲು ಸರಕಾರವು ಕಾರ್ಯಪ್ರವೃತ್ತವಾಗಿದೆ ಎಂದು ಸ್ಪಷ್ಟಪಡಿಸಿದರು.

ರೈಲು ವಿಳಂಬ ಖಂಡಿಸಿ ಪ್ರಯಾಣಿಕರ ಪ್ರತಿಭಟನೆ

ರಾಮನಗರ: ಮೈಸೂರುಬೆಂಗಳೂರು ನಡುವಣ ಸಂಚರಿಸುವ ಅಶೋಕಪುರಂ ಮೆಮು ಪ್ಯಾಸೆಂಜರ್ ರೈಲು ಒಂದೂವರೆ ತಾಸು ವಿಳಂಬವಾಗಿದ್ದನ್ನು ಖಂಡಿಸಿ ಪ್ರಯಾಣಿಕರು ಭಾನುವಾರ ಸಂಜೆ ರೈಲು ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಮೈಸೂರಿಗೆ ಹೊರಟಿದ್ದ ರೈಲು ನಿಲ್ದಾಣದಿಂದ ಒಂದೂವರೆ ತಾಸಾದರೂ ಕದಲಿಲ್ಲ. ಕಾದು ಹೈರಾಣಾದ ಪ್ರಯಾಣಿಕರು ನಂತರ ಹೊರಬಂದು ನಿಲ್ದಾಣದ ಅಧಿಕಾರಿಗಳನ್ನು ವಿಚಾರಿಸಲು ಮುಂದಾದರು. ಆದರೆ, ಸ್ಟೇಷನ್ ಮಾಸ್ಟರ್ ಕೊಠಡಿ ಬಾಗಿಲು ಹಾಕಿತ್ತು. ಉಳಿದ ಸಿಬ್ಬಂದಿ ಸಹ ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಇದರಿಂದ ರೊಚ್ಚಿಗೆದ್ದ ಪ್ರಯಾಣಿಕರು ರೈಲು ಹಳಿ ಮೇಲೆ ನಿಂತು ಪ್ರತಿಭಟನೆ ಆರಂಭಿಸಿದರು. ರೈಲ್ವೆ ಇಲಾಖೆ ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ವಿಶ್ವವಾಣಿ ಕ್ಲಬ್ ಹೌಸ್
02.03.2026
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಶ್ರೀಮತಿ ಪಲ್ಲವಿ ಭಟ್,
ಶ್ರೀಮತಿ ವಿದ್ಯಾಶ್ರೀ ಹಿರೇಮಠ
ವಿಷಯ
ದ್ರೋಣ ಪ್ರತಿಜ್ಞೆ
vishwavani.news

ಫನ್‌ತರಂಗ

- ರಘುಪತಿ ಶೃಂಗೇರಿ -

ಭೂಮಿಯಿಂದ ದೂರ ಸರಿಯುತ್ತಿರುವ ಚಂದ್ರ; ಕೆಲವು ವರ್ಷಗಳಲ್ಲಿ ಆಗಲಿದೆ ದಿನಕ್ಕೆ 25 ಗಂಟೆ
ಸುದ್ದಿ



ದಿನ ವಿಶೇಷ

02 ಮಾರ್ಚ್ 2026 ಸೋಮವಾರ

» ಸೂರ್ಯೋದಯ	:	06-37
» ಸೂರ್ಯಾಸ್ತ	:	06-30
» ತಿಥಿ	:	ಚತುರ್ದಶಿ
» ನಕ್ಷತ್ರ	:	ಆಶ್ಲೇಷಾ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಶಿಶಿರ
» ಮಾಸ	:	ಫಾಲ್ಗುಣ
» ಪಕ್ಷ	:	ಶುಕ್ಲ ಪಕ್ಷ

ಆತಂಕ ಪಡದೆ ಸುರಕ್ಷಿತ ಸ್ಥಳದಲ್ಲಿರಿ, ವಿಮಾನ ಸೇವೆ ಆರಂಭ ಬೆನ್ನಲ್ಲೇ ತಯ್ನಾಡಿಗೆ | ಪ್ರತಿಯೊಬ್ಬರನ್ನು ಆದ್ಯತೆಯ ಮೇರೆ ಕರೆತರುವ ಭರವಸೆ

ಯುದ್ಧಪೀಡಿತ ಪ್ರದೇಶದ ಕನ್ನಡಿಗರ ಜತೆ ಸಿಎಂ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಧ್ಯಪ್ರಾಚ್ಯದಲ್ಲಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಕ್ಷಿಪಣಿ ಸಮರ ತೀವ್ರಗೊಂಡಿರುವ ಬೆನ್ನಲ್ಲೇ, ಆ ದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ರಕ್ಷಣೆಗೆ ಹಾಗೂ ಕುಟುಂಬ ಸದಸ್ಯರೊಂದಿಗೆ ಸಂವಹನ ಸಾಧಿಸಲು ಸಹಾಯವಾಣಿ ಆರಂಭಿಸಿದೆ.

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿದೇಶದಲ್ಲಿರುವ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದಾಗಿ ಇಸ್ರೇಲ್, ಯುಎಇ, ಇರಾನ್, ಕತಾರ್ ಸೇರಿದಂತೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನೆಲೆಸಿರುವ ಕನ್ನಡಿಗರ ಸುರಕ್ಷತೆಯನ್ನು ನಾವು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಈ ಸಂಬಂಧ ದೆಹಲಿಯ ನಿವಾಸಿ ಆಯುಕ್ತರ ಜತೆ ಸಮಾಲೋಚನೆ ನಡೆಸಿ, ನಮ್ಮ ಜನರ ಸುರಕ್ಷತೆಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇನೆ ಎಂದರು.

ಸಹಾಯವಾಣಿಯನ್ನು ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಯುದ್ಧಪೀಡಿತ ದೇಶಗಳಲ್ಲಿ ನೆಲೆಸಿರುವ ಕುಟುಂಬ ಸದಸ್ಯರು ಸಂಪರ್ಕಕ್ಕೆ ಸಿಗದೆ ಇದ್ದಲ್ಲಿ ಯಾರೂ ಕೂಡ ಆತಂಕಕ್ಕೆ ಒಳಗಾಗುವುದು ಬೇಡ. ಮಧ್ಯಪ್ರಾಚ್ಯ ದೇಶಗಳಲ್ಲಿ ವಿಮಾನ ಸಂಚಾರ ಸ್ಥಗಿತಗೊಂಡಿರುವ ಕಾರಣ ನಾಡಿಗೆ ಮರಳಲು ಸಾಧ್ಯವಾಗದೇ ಯುದ್ಧಪೀಡಿತ ರಾಷ್ಟ್ರಗಳಲ್ಲಿ ಸಿಲುಕಿರುವವರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಮನವಿ ಮಾಡುತ್ತೇನೆ ಎಂದರು.

ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಯುದ್ಧ ಅನಗತ್ಯ: ಸಿಎಂ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಯುದ್ಧ ಅನಗತ್ಯವಾದದ್ದು. ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಸಯ್ಯದ್ ಅಲಿ ಖಮೇನಿ ಹತ್ಯೆ ಖಂಡನೀಯ, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಅಮೆರಿಕದವರು ಖಮೇನಿ ಮೇಲೆ ಮಾಡಿರುವ ಯುದ್ಧ ಅನಗತ್ಯವಾದದ್ದು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದು ಕಡೆ ಶಾಂತಿ ಬಗ್ಗೆ ಮಾತನಾಡುತ್ತಾರೆ. ಇನ್ನೊಂಡೆಡೆ ಯುದ್ಧ ಮಾಡುತ್ತಾರೆ. ಇದು ಅಮೆರಿಕದವರ ತದ್ವಿರುದ್ಧವಾದ ನೀತಿಯಾಗಿದೆ. ಇದನ್ನು ಖಂಡಿಸುತ್ತೇನೆ ಎಂದರು.

> ಇರಾನ್, ಇಸ್ರೇಲ್‌ನಲ್ಲಿ ನೆಲೆಸಿರುವ ಕನ್ನಡಿಗರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ನಾವು ಕೇಂದ್ರದ ವಿದೇಶಾಂಗ ಇಲಾಖೆ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ನಾನು ಈ ಕುರಿತು ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿ ಜತೆ ಮಾತನಾಡಿದ್ದೇನೆ. ವಿದೇಶ ಪ್ರವಾಸದಲ್ಲಿರುವ ಎಂಎಲ್‌ಸಿ ಭೋಜೆಗೌಡರ ಜತೆ ಮಾತನಾಡಿದ್ದೇನೆ. ಅವರು ಸುರಕ್ಷಿತವಾಗಿದ್ದಾರೆ. ಅಲ್ಲಿನ ವಿಮಾನ ನಿಲ್ದಾಣ ತೆರೆದ ತಕ್ಷಣ ಎಲ್ಲರನ್ನೂ ವಾಪಸ್ ಕರೆ ತರಲಾಗುವುದು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಹಾಯವಾಣಿಗಳು

ಇಸ್ರೇಲ್	+972547520711
ಇರಾನ್	+98 912 8109115
ಯುಎಇ	ವಾಟ್ಸಾಪ್ +971 5430 90571
ಕತಾರ್	0097455647502
ಬಹರೇನ್	0097339418071
ಜೋರ್ಡಾನ್	00962770 422 276
ಒಮನ್	8007 1234
ಕುವೈತ್	+96565501946

ಮಾನವ ಧರ್ಮಕ್ಕೆ ಜಯವಾಗಲಿ: ಡಿಸಿಎಂ

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಡಿಸಿಎಂ ಡಿ.ಕೆ.ಶಿವಕುಮಾರ ಖಂಡಿಸಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಪ್ರಪಂಚದಲ್ಲಿ ಶಾಂತಿ ನೆಲೆಸಬೇಕು. ಯಾವುದೇ ಪ್ರಾಣ ಹಾನಿಯಾಗಬಾರದು ಎಂಬುದು ನಮ್ಮ ಪ್ರಾರ್ಥನೆ. ಮಾನವ ಧರ್ಮಕ್ಕೆ ಜಯವಾಗಲಿ. ಮಾನವಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ಅಮೆರಿಕ ಯುದ್ಧ ನಿಲ್ಲಿಸಬೇಕಿದೆ. ಈ ಯುದ್ಧ ದಿಂದ ಭಾರತಕ್ಕೂ ಗಂಡಾಂತರವಾಗಲಿದೆ. ನಮ್ಮ ಸರಕಾರದಿಂದಲೂ ನಮ್ಮ ಜನರಿಗೆ ಧೈರ್ಯ ತುಂಬುವ ಕೆಲಸವಾಗುತ್ತಿದೆ. ಶಾಂತಿ ಕಾಪಾಡಲು ನಾವೆಲ್ಲರೂ ಮನವಿ ಮಾಡೋಣ. ಇಲ್ಲಿ ಕನ್ನಡಿಗರು, ಆ ರಾಜ್ಯದವರು ಎಂದು ಬರುವುದಿಲ್ಲ. ನಾವೆಲ್ಲರೂ ಭಾರತೀಯರು. ಏಕೆಂದರೆ ಇಡೀ ಸೌದಿ ದೇಶ ನಡೆಯುತ್ತಿರುವುದೇ ಭಾರತೀಯರಿಂದ. ಅದರಲ್ಲೂ ದಕ್ಷಿಣ ಭಾರತೀಯರು ವೃತ್ತಿಪರವಾಗಿ ಕೆಲಸ ಮಾಡುತ್ತಿದ್ದಾರೆ. ಮಂಗಳೂರು, ಕೇರಳ ಭಾಗದಲ್ಲಿ ಕುಟುಂಬದ ಒಬ್ಬರಾದರೂ ಸೌದಿಯಲ್ಲಿ ನೆಲೆಸಿರುತ್ತಾರೆ. ದೇಶವನ್ನು ಬೆಳೆಸುತ್ತಾ ಅವರೂ ಬದುಕುತ್ತಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಸಭೆ: ಇನ್ನು ಇಸ್ರೇಲ್ - ಇರಾನ್ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ಸಿಲುಕಿರುವ ಕನ್ನಡಿಗರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿ, ಧೈರ್ಯ ತುಂಬಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಅಧಿಕಾರಿಗಳ ಜತೆ ಚರ್ಚೆ ನಡೆಸಿ ದುಬೈ ಸೇರಿದಂತೆ ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಕನ್ನಡಿಗರ ಸದ್ಯದ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದು, ಬಳಿಕ ಅವರನ್ನು ತವರಿಗೆ ವಾಪಸ್ ಕರೆ ತರುವ ಸಂಬಂಧ ವಿದೇಶಾಂಗ ಇಲಾಖೆ ಅಧಿಕಾರಿಗಳ ಜತೆ ಸಂಪರ್ಕದಲ್ಲಿರುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದೇನೆ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಇರುವ ಕನ್ನಡಿಗರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿರುವುದು ತುಸು ಸಮಾಧಾನಕರ ವಿಚಾರ. ಯಾರೊಬ್ಬರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಪ್ರತಿಯೊಬ್ಬರನ್ನೂ ಸುರಕ್ಷಿತವಾಗಿ ಕರೆತರುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಿರಂತರವಾಗಿರಲಿದೆ ಎಂದಿದ್ದಾರೆ.

ದಿನೇಶ್ ಗೂಳಿಗೌಡ ಮನವಿಗೆ ಸ್ಪಂದನೆ | ರಾಯಭಾರಿಗಳ ಜತೆ ಸಂಪರ್ಕ

ಕನ್ನಡಿಗರ ರಕ್ಷಣೆಗೆ ಶಾಲಿನಿ ರಜನೀಶ್ ಭರವಸೆ

ಬೆಂಗಳೂರು: ಇಸ್ರೇಲ್-ಇರಾನ್ ಯುದ್ಧದ ಭೀತಿಯಿಂದಾಗಿ ದುಬೈ ಸೇರಿದಂತೆ ಅರಬ್ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮಾಹಿತಿ ನೀಡಿದ್ದಾರೆ.

ವಿಪ ಸದಸ್ಯ ದಿನೇಶ್ ಗೂಳಿಗೌಡ ಅವರು ಈ ಕುರಿತು ಬರೆದಿದ್ದ ಪತ್ರಕ್ಕೆ ತಕ್ಷಣವೇ ಸ್ಪಂದಿಸಿದ ಶಾಲಿನಿ ರಜನೀಶ್ ಅವರು, ವಿದೇಶದಲ್ಲಿರುವ ಕನ್ನಡಿಗರ ಸುರಕ್ಷತೆಗಾಗಿ ಸರಕಾರವು ಈಗಾಗಲೇ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಿದ್ದಾರೆ. ಸದ್ಯದ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು, ವಿದೇಶದಲ್ಲಿ ಸಿಲುಕಿರುವ ಕನ್ನಡಿಗರ ಮಾಹಿತಿಯನ್ನು ನಾವು ಸಂಗ್ರಹಿಸುತ್ತಿದ್ದೇವೆ. ಇವರೆಲ್ಲರ ಹೆಸರನ್ನು ನೋಂದಾಯಿಸಲು ಮತ್ತು ಮುಂದಿನ ನೆರವು ಹಾಗೂ ರಕ್ಷಣಾ ಕಾರ್ಯಕ್ಕಾಗಿ ನಾವು ಎಲ್ಲ ಅಗತ್ಯ ವಿವರಗಳನ್ನು (ದೂರವಾಣಿ ಸಂಖ್ಯೆಗಳು ಮತ್ತು ಮಾಹಿತಿ) ಸಂಬಂಧಪಟ್ಟ ಭಾರತೀಯ ರಾಯಭಾರ ಕಚೇರಿಗಳಿಗೆ ನೀಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಸಿಎಂ, ಡಿಸಿಎಂ, ಸಿಎಸ್‌ಗೆ ಪತ್ರ ಬರೆದಿದ್ದ ದಿನೇಶ್: ಇದಕ್ಕೂ ಮೊದಲು ಅರಬ್ ರಾಷ್ಟ್ರಗಳಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಕನ್ನಡಿಗರು ಮತ್ತು ಜನಪ್ರತಿನಿಧಿಗಳನ್ನು ತುರ್ತಾಗಿ ತಾಯ್ನಾಡಿಗೆ ಕರೆತರಲು ಒಬ್ಬರು ಸಚಿವರು ಹಾಗೂ ಐಎಎಸ್ ಅಧಿಕಾರಿಯೊಬ್ಬರನ್ನು ನಿಯೋಜಿಸಲು ಕ್ರಮವಹಿಸುವಂತೆ ದಿನೇಶ್ ಗೂಳಿಗೌಡ ಅವರು ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸರಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದರು. ಶಾಸಕರಾದ ಎ.ಸಿ. ಶ್ರೀನಿವಾಸ್,ಎಸ್.ಎಲ್.ಭೋಜೇಗೌಡ, ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ ಹಲವು ಪ್ರಮುಖರು ದುಬೈಗೆ ಭೇಟಿ ನೀಡಿದ್ದು, ಅಲ್ಲಿಯೇ ಸಿಲುಕಿಕೊಂಡಿದ್ದಾರೆ. ಪ್ರವಾಸಕ್ಕೆ ತೆರಳಿದ್ದವರು, ಉದ್ಯೋಗ ಅರಸಿ ಹೋದ ಅಸಂಖ್ಯಾತ ಕನ್ನಡಿಗರು ತಾಯ್ನಾಡಿಗೆ ಕರೆತರಬೇಕು. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ವಿದೇಶದಲ್ಲಿ ಅಧ್ಯಯನ ಪ್ರವಾಸಕ್ಕೆ ಹೋಗಿದ್ದಾರೆ. ಅವರನ್ನೂ ಸುರಕ್ಷಿತವಾಗಿ ಕರೆತರುವ ಕೆಲಸ ಆಗಬೇಕಿದೆ ಎಂದು ಮನವಿ ಮಾಡಿದ್ದರು.

ಅಮೆರಿಕ-ಇರಾನ್ ಯುದ್ಧ ಭಾರತದ ಮೇಲೂ ಪರಿಣಾಮ ಬೀರಲಿದೆ

ಸರಕಾರ ದುಬೈ ಕನ್ನಡಿಗರನ್ನು ಕರೆತರಲಿ: ಬೊಮ್ಮಾಯಿ

ಹಾವೇರಿ: ಅಮೇರಿಕಾ ಇರಾನ್ ಯುದ್ಧದ ಪರಿಣಾಮವಾಗಿ ದುಬೈ ಹಾಗೂ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿರುವ ಕನ್ನಡಿಗರಿಗೆ ರಾಜ್ಯ ಸರಕಾರ ದುಬೈನಲ್ಲಿರುವ ಕನ್ನಡಿಗರು ಹಾಗೂ ಅಲ್ಲಿನ ರಾಯಭಾರಿ ಕಚೇರಿ ಮುಖಾಂತರ ತಾತ್ಕಾಲಿಕವಾಗಿ ಊಟ, ವಸತಿ ವ್ಯವಸ್ಥೆ ಮಾಡಿ ಕೂಡಲೆ ವಾಪಸ್ ಕರೆ ತರಲು ಎಲ್ಲ ರೀತಿಯ ವ್ಯವಸ್ಥೆ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಬಹಳಷ್ಟು ಆತಂಕಕಾರಿಯಾಗಿದೆ. ಇದರ ಪರಿಣಾಮ ಭಾರತದ ಮೇಲೂ ಆಗಲಿದೆ. ಇಲ್ಲಿಯ ಪೆಟ್ರೋಲಿಯಂ ವಲಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಆರ್ಥಿಕತೆಯ ಮೇಲೂ ದೊಡ್ಡ ಪ್ರಭಾವ ಬೀರಲಿದೆ. ಮತ್ತು ವಿಶ್ವಾದ್ಯಂತ ಇದರ ಪರಿಣಾಮ ಎಲ್ಲರೂ ಎದುರಿಸಬೇಕಾದ ಪರಿಸ್ಥಿತಿ ಇದೆ. ಇನ್ನಷ್ಟು ಜನರ ಸಾವುಗಳು ಆಗುವ ಮುಂಚೆ ಮಾತುಕತೆಯ ಮುಖಾಂತರ ಇದನ್ನು ಬಗೆಹರಿಸುವುದು ಸೂಕ್ತ ಎಂದು ಅನಿಸುತ್ತಿದೆ ಎಂದು ಹೇಳಿದರು.

ಬಹಳಷ್ಟು ಮಧ್ಯಪ್ರಾಚ್ಯ ರಾಷ್ಟ್ರಗಳು ಈ ಯುದ್ಧಕ್ಕೆ ತುತ್ತಾಗಿವೆ. ಮಧ್ಯ ಪ್ರಾಚ್ಯದಲ್ಲಿರುವ ಭಾರತೀಯರು ವಿಶೇಷವಾಗಿ ಕನ್ನಡಿಗರು ಸಿಲುಕಿಕೊಂಡಿದ್ದಾರೆ. ದೋಹಾ, ದುಬೈ, ಕುವೈತ್ ಸೇರಿದಂತೆ ಅನೇಕ ಕಡೆಗಳಲ್ಲಿ ನಮ್ಮ ಕನ್ನಡಿಗರು ಕೆಲಸಕ್ಕೆ ಹೋಗಿದ್ದಾರೆ. ಯುರೋಪಿನಿಂದ ಬರುವಾಗ ದುಬೈ, ದೋಹಾ ಮೂಲಕ ಬರುವುದು ವಾಡಿಕೆ ಇದೆ. ಅಲ್ಲೂ ಕೂಡ ಬಹಳಷ್ಟು ಜನರು ಸಿಲುಕಿಕೊಂಡಿದ್ದಾರೆ. ಈಗಾಗಲೇ ಭಾರತ ಸರಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಸುರಕ್ಷಿತವಾಗಿ ಕರೆದುಕೊಂಡು ಬರಲು ರಾಜ್ಯ ಸರಕಾರ ಕೆಲಸ ಮಾಡುತ್ತಿದೆ ಎಂದರು.

> ಹಿಂದೆ ಇದೇ ಥರ ಸಿರಿಯಾ, ಇರಾಕ್‌ನಲ್ಲಿ ಯುದ್ಧ ನಡೆದಾಗ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಎಲ್ಲ ಭಾರತಿಯರನ್ನು ಸುರಕ್ಷತವಾಗಿ ಕರೆತಂದಿರುವ ಉದಾಹರಣೆ ಇದೆ. ಭಾರತೀಯರು ವಿಶೇಷವಾಗಿ ಕನ್ನಡಿಗರನ್ನು ಸುರಕ್ಷಿತವಾಗಿ ಕರೆ ತರುವ ಜವಾಬ್ದಾರಿ ರಾಜ್ಯ ಸರಕಾರದ ಮೇಲಿದೆ. ಅಲ್ಲಿಗೆ ಹೋಗಿರುವ ಬಹಳಷ್ಟು ಜನರಿಗೆ ಹಣ, ಆಹಾರ ಇಲ್ಲದೆ ತೊಂದರೆ ಆಗುತ್ತಿದೆ.
> -ಬಸವರಾಜ ಬೊಮ್ಮಾಯಿ, ಸಂಸದ

ಚಿಕ್ಕಬಳ್ಳಾಪುರ ಜಿಲ್ಲೆಯ ಅಲಿಪುರದಲ್ಲಿ ಮೂರುಗಳ ಕಾಲ ದಿನ ಶೋಕಾಚರಣೆ

ಖಮೇನಿ ಹತ್ಯೆ ಖಂಡಿಸಿ ರಾಜ್ಯದಲ್ಲಿ ಪ್ರತಿಭಟನೆ

ಬೆಂಗಳೂರು: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿ ಹಾಗೂ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಸಯ್ಯದ್ ಅಲಿ ಖಮೇನಿ ಹತ್ಯೆ ಖಂಡಿಸಿ ರಾಜ್ಯದ ಕೆಲವೆಡೆ ಪ್ರತಿಭಟನೆ, ದುಃಖ, ಆಕ್ರೋಶ ವ್ಯಕ್ತವಾಗಿದೆ.

ಇರಾನ್ ಮೇಲೆ ಇಸ್ರೇಲ್ ದಾಳಿ ಹಾಗೂ ಖಮೇನಿ ಸಾವಿಗೆ ಹಲವೆಡೆ ಆಕ್ರೋಶ ವ್ಯಕ್ತವಾಗಿದ್ದು, ಬೆಂಗಳೂರಿನ ರಿಚ್ಮಂಡ್ ಟೌನ್ ಬಳಿ ಶಿಯಾ ಮುಸ್ಲಿಮರು ಪ್ರತಿಭಟನೆ ನಡೆಸಿದ್ದಾರೆ. ನೂರಾರು ಜನರು ಕಪ್ಪು ಬಟ್ಟೆ ಧರಿಸಿ ಶಾಂತಿಯುತ ಧರಣಿ ನಡೆಸಿದ್ದಾರೆ. ಶಾಸಕ ಎನ್.ಎ. ಹ್ಯಾರಿಸ್ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಪ್ರತಿಭಟನೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗಿಯಾಗಿದ್ದು, ಅಮೆರಿಕಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಖಮೇನಿ ಹತ್ಯೆ ಖಂಡಿಸಿ ದೊಡ್ಡ ಮಟ್ಟದ ಪ್ರತಿಭಟನೆ ನಡೆದಿದೆ. ರಸ್ತೆಯಲ್ಲಿ ರ‍್ಯಾಲಿ ಮಾಡುವ ಮೂಲಕ ಪ್ರತಿಭಟನಾಕಾರರು ಕಣ್ಣೀರು ಹಾಕಿದ್ದಾರೆ. ಒಬ್ಬ ಖಮೇನಿಯನ್ನ ಸಾಯಿಸಿದ್ದೀರಾ, ಇದರಿಂದ ಪ್ರಪಂಚದ ಮೂಲೆ ಮೂಲೆಯಲ್ಲಿ ಖಮೇನಿ ಬರುತ್ತಾನೆ ಎಂದು ಅಳುತ್ತಾ ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು.

ಅಲಿಪುರದಲ್ಲಿ ಬೃಹತ್ ಮೆರವಣಿಗೆ: ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಅಲಿಪುರದಲ್ಲಿ ಜನರು ರಸ್ತೆಗಿಳಿದು ಪ್ರತಿಭಟನೆ ನಡೆಸಿದ್ದು, ಮೂರು ದಿನಗಳವರೆಗೆ ಶೋಕಾಚರಣೆ ಘೋಷಿಸಿ, ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿದೆ. ಖಮೇನಿ ಹತ್ಯೆ ವರದಿಗಳ ಹಿನ್ನೆಲೆಯಲ್ಲಿ, ಅಲಿಪುರ ಪಟ್ಟಣದ ಜನರು ಸಾಮೂಹಿಕ ಶೋಕಾಚರಣೆ ಮಾಡಿದರು. ದುಃಖದ ಸಂಕೇತವಾಗಿ ಕಪ್ಪು ಬಟ್ಟೆ ಧರಿಸಿ, ಬಾವುಟಗಳನ್ನು ಹಿಡಿದು ಅಲ್ಲಿನ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಖಮೇನಿ ಅವರ ಫೋಟೋ ಹಿಡಿದು ಕಣ್ಣೀರು ಹಾಕಿದರು. ಶೋಕಾಚರಣೆ ಮೆರವಣಿಗೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಲಿಪುರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು. ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ನೇತೃತ್ವದಲ್ಲಿ ಬಂದೋಬಸ್ತ್ ಮಾಡಲಾಗಿತ್ತು. ಡಿವೈಎಸ್‌ಪಿ, ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ಸುಮಾರು 100 ಕ್ಕೂ ಹೆಚ್ಚು ಪೊಲೀಸರು, ಕೆಎಸ್‌ಆರ್‌ಪಿ ಹಾಗೂ ಡಿಎಆರ್ ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು.

ಇರಾನ್ ನಾಯಕ ಅಯತೊಲ್ಲಾ ಸಯ್ಯದ್ ಅಲಿ ಖಮೇನಿ ಹತ್ಯೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮಂಗಳೂರಿನಿಂದ ಅರಬ್‌ಗೆ ವಿಮಾನಗಳ ಸೇವೆ ರದ್ದು

ಮಂಗಳೂರು: ಇಸ್ರೇಲ್ ಇರಾನ್ ಸಂಘರ್ಷದ ಹಿನ್ನೆಲೆ ಮಂಗಳೂರು ವಿಮಾನ ನಿಲ್ದಾಣದಿಂದ ವಿಮಾನ ಹಾರಾಟದಲ್ಲಿ ವ್ಯತ್ಯಯವಾಗಿದೆ. ನಿಗದಿಯಾಗಿದ್ದ ಏರ್ ಇಂಡಿಯಾ, ಇಂಡಿಗೋ ವಿಮಾನಗಳ ಹಾರಾಟವನ್ನು ಹಠಾತ್ ರದ್ದುಗೊಳಿಸಲಾಗಿದೆ.

ಪ್ರಮುಖವಾಗಿ ದುಬೈಗೆ ತೆರಳುವ ವಿಮಾನಗಳ ಹಾರಾಟ ಸ್ಥಗಿತಗೊಂಡಿದ್ದು, ಪ್ರಯಾಣಿಕರು ಪರದಾಡುವಂತಾಗಿದೆ. ವಿದೇಶಕ್ಕೆ ಪ್ರಯಾಣ ಮಾಡುವ ಪ್ರಯಾಣಿಕರು ಆಯಾ ವಿಮಾನ ಸಂಸ್ಥೆಗಳು ಖಚಿತಪಡಿಸಿದ ಬಳಿಕವಷ್ಟೇ ವಿಮಾನ ನಿಲ್ದಾಣಕ್ಕೆ ಆಗಮಿಸಿ ಎಂದು ವಿಮಾನ ನಿಲ್ದಾಣ ಪ್ರಾಧಿಕಾರಿಗಳು ಮನವಿ ಮಾಡಿವೆ. ಇರಾನ್ ವಾಯು ಮಾರ್ಗದಲ್ಲಿ ವಿಮಾನ ಹಾರಾಟ ನಿಷೇಧ ಹಿನ್ನೆಲೆಯಲ್ಲಿ ವಿಮಾನಗಳ ಹಾರಾಟ ಸ್ಥಗಿತಗೊಳಿಸಲಾಗಿದೆ. ಗಲ್ಫ್ ರಾಷ್ಟ್ರಗಳಿಗೆ ತೆರಳುವ ಎಲ್ಲ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳ ಹಾರಾಟ ರದ್ದುಗೊಳಿಸಲಾಗಿದೆ. ಪ್ರಯಾಣಿಕರಿಗೆ ಮಾಹಿತಿ ನೀಡಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ ವೆಬ್‌ಸೈಟ್ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರದ್ದಾದ ವಿಮಾನಗಳು

- 9.25ರ ಮಂಗಳೂರು-ಮಸ್ಕತ್ ಏರ್ ಇಂಡಿಯಾ ಎಕ್ಸ್‌ಪ್ರೆಸ್
- ಮಧ್ಯಾಹ್ನ 1.20 ರ ಮಂಗಳೂರು-ದುಬೈ ಏರ್ ಇಂಡಿಯಾ ಎಕ್ಸ್‌ಪ್ರೆಸ್
- ರಾತ್ರಿ 7.15ರ ಮಂಗಳೂರು-ದುಬೈ ಇಂಡಿಗೊ
- ರಾತ್ರಿ 8.15ರ ಮಂಗಳೂರು-ದುಬೈ ಏರ್ ಇಂಡಿಯಾ ಎಕ್ಸ್‌ಪ್ರೆಸ್
- ರಾತ್ರಿ 8.55ರ ಮಂಗಳೂರು-ಬಹರೇನ್ ಏರ್ ಇಂಡಿಯಾ ಎಕ್ಸ್‌ಪ್ರೆಸ್
- ರಾತ್ರಿ 9.05ರ ಮಂಗಳೂರು-ಅಬುಧಾಬಿ ಇಂಡಿಗೊ

ಬಹ್ರೇನ್‌ನಲ್ಲಿ ಸಿಲುಕಿದ 50 ಕನ್ನಡಿಗರ ಪರದಾಟ

ಹಾಸನ: ದ್ವೀಪ ರಾಷ್ಟ್ರ ಬಹ್ರೇನ್‌ನಲ್ಲಿ ಹಾಸನ ಜಿಲ್ಲೆಯ ಐವರು ಸಿಲುಕಿದ್ದಾರೆ. ಬಹ್ರೇನ್ ರಾಜಧಾನಿ ಮನಾಮರಲ್ಲಿರುವ ಕಟ್ಟಡವೊಂದರಲ್ಲಿ ಕನ್ನಡಿಗರು ಆಶ್ರಯ ಪಡೆದಿದ್ದಾರೆ. ಹಾಸನ ಜಿಲ್ಲೆ, ಬೇಲೂರು ತಾಲೂಕಿನ, ಅಂಗಡಿಹಳ್ಳಿಯ ಪಂಜು, ಜಮುನ, ಸುರೇಂದ್ರ ಪ್ರಸಾದ್, ರತೀಶ್ ಹಾಗೂ ಮೈಸೂರು ಮೂಲದ ನೇತ್ರಾವತಿ ತಾವಿರುವ ಕಟ್ಟಡದ ಪಕ್ಕದಲ್ಲೇ ಬಾಂಬ್ ಸಿಡಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸಂಬಂಧಿಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಕನ್ನಡಗರ ರಕ್ಷಣೆಗೆ ಕುಟುಂಬ ಸದಸ್ಯರ ಮೊರೆ ಹೋಗಿದ್ದಾರೆ. ಶಾರ್ಜಾ ವಿಮಾನ ನಿಲ್ದಾಣದಲ್ಲಿ ದಾವಣಗೆರೆ ಪ್ರವಾಸಿಗರು ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ. ಜಗಳೂರು ತಾಲೂಕು ತೋರಣಘಟ್ಟದ ಗ್ರಾಮದ 15 ಜನ ಪ್ರವಾಸಿಗರು ಕಳೆದ ಫೆ.23 ರಂದು ದುಬೈ ಮತ್ತಿತರ ನಗರಗಳಿಗೆ ಪ್ರವಾಸ ಹೊರಟಿದ್ದರು. ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷದಲ್ಲಿ ಶಾರ್ಜಾ ಏರ್ ಪೋರ್ಟ್‌ನಲ್ಲಿ ಕನ್ನಡಿಗರು ಸಿಲುಕಿಕೊಂಡಿದ್ದಾರೆ. ಬಾಂಬ್ ಸ್ಫೋಟ ಹಾಗೂ ಇನ್ನಿತರ ಅವಘಡಗಳು ಸಂಭವಿಸಬಹುದು ಎಂದು ಮುಂಜಾಗ್ರತವಾಗಿ ವಿಮಾನ ನಿಲ್ದಾಣ ಬಂದ್ ಮಾಡಲಾಗಿದೆ. ದಾವಣಗೆರೆಯ 15 ಜನ ಸೇರಿ ಚಿತ್ರದುರ್ಗ, ಬಳ್ಳಾರಿಯಿಂದ 50 ಜನ ಪ್ರವಾಸಿಗರು ಏರ್‌ಪೋರ್ಟ್‌ನಲ್ಲೇ ಉಳಿದಿದ್ದಾರೆ. ಭದ್ರತಾ ಸಿಬ್ಬಂದಿ ಏರ್‌ಪೋರ್ಟ್ ಸಮೀಪದ ಹೋಟೆಲ್‌ವೊಂದಕ್ಕೆ ಕಳುಹಿಸಿದ್ದು, ದುಬಾರಿ ಹೋಟೆಲ್ ಶುಲ್ಕ ಬರಿಸಲಾಗದೇ ಪರದಾಡುತ್ತಿದ್ದಾರೆ.

ಸಂಕಷ್ಟದಲ್ಲಿರುವ ಪಂಪನಗೌಡ ಕುಟುಂಬದ 15 ಮಂದಿ | ಜನಪ್ರತಿನಿಧಿಗಳ ಜತೆ ನಿರಂತರ ಸಂಪರ್ಕ

ದುಬೈನಲ್ಲಿ ಸಿಲುಕಿದ ಬಳ್ಳಾರಿಯ 35 ಪ್ರವಾಸಿಗರು

ಬಳ್ಳಾರಿ: ಇರಾನ್-ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧದಿಂದ ಮಧ್ಯಪ್ರಾಚ್ಯದಲ್ಲಿ ತೀವ್ರ ಉದ್ವಿಗ್ನತೆ ಉಂಟಾಗಿದ್ದು, ಪ್ರವಾಸಕ್ಕೆಂದು ತೆರಳಿದ್ದ ಬಳ್ಳಾರಿ ಮೂಲದ 35 ಪ್ರವಾಸಿಗರು ದುಬೈನಲ್ಲಿ ಸಿಲುಕಿ ಪರದಾಡುವಂತಾಗಿದೆ. 35 ಪ್ರವಾಸಿಗರ ಪೈಕಿ ಒಂದೇ ಕುಟುಂಬದ 15 ಜನರು ದುಬೈನಲ್ಲಿ ಲಾಕ್ ಆಗಿದ್ದಾರೆ. ಬಳ್ಳಾರಿಯ ಯಾಳ್ಪಿ ಪಂಪನಗೌಡ ಕುಟುಂಬಸ್ಥರು ಕುಟುಂಬ ಸಮೇತರಾಗಿ ದುಬೈ ಪ್ರವಾಸಕ್ಕೆ ತೆರಳಿದ್ದರು. ಯಾಳ್ಪಿ ಪಂಪನಗೌಡ ಕುಟುಂಬದ 15 ಜನ ಸೇರಿ ಬಳ್ಳಾರಿಯಿಂದ 35 ಜನ ದುಬೈ ಪ್ರವಾಸಕ್ಕೆ ತೆರಳಿದ್ದರು. ಇರಾನ್-ಇಸ್ರೇಲ್ ಯುದ್ಧ ಹಿನ್ನೆಲೆ ವಿಮಾನ ಹಾರಾಟ ವ್ಯತ್ಯಯದಿಂದಾಗಿ ಸದ್ಯ 35 ಪ್ರವಾಸಿಗರು ದುಬೈನಲ್ಲೇ ಉಳಿದುಕೊಂಡಿದ್ದಾರೆ. ದುಬೈನಲ್ಲಿ ಸಿಲುಕಿರುವ ಪ್ರವಾಸಿಗರು ಕುಟುಂಬದ ಜತೆ ನಿರಂತರ ಸಂಪರ್ಕದಲ್ಲಿದ್ದಾರೆ. ಯಾವುದೇ ಆತಂಕ ಇಲ್ಲ, ನಾವು ಸುರಕ್ಷಿತವಾಗಿದ್ದೇವೆ ಎಂದು ಕುಟುಂಬಸ್ಥರ ಜತೆ ಪ್ರವಾಸಿಗರು ಹೇಳಿದ್ದಾರೆ.

ಈಗಾಗಲೇ ಬಳ್ಳಾರಿ ಗ್ರಾಮೀಣ ಶಾಸಕ ಬಿ ನಾಗೇಂದ್ರ, ಕೂಡಾ ಸಂಪರ್ಕ ಮಾಡಿದ್ದಾರೆ. ಸೋಮವಾರ ವಿಮಾನ ಹಾರಾಟ ಆರಂಭ ಆಗುತ್ತೆ ಎಂದು ಹೇಳಿದ್ದಾರೆ. ಸೋಮವಾರ ವಾಪಸ್ ಬರುವ ವಿಶ್ವಾಸ ಇದೆ ಎಂದು ಯಾಳ್ಪಿ ಪಂಪನಗೌಡ ಪುತ್ರ ದಿವಾಕರ್ ಮಾತನಾಡಿದ್ದಾರೆ. ದುಬೈ ಪ್ರವಾಸದಲ್ಲಿರುವ ನಾಗಭೂಷಣ ಸಹೋದರ ರಾಮಲಿಂಗಪ್ಪ ಮಾತನಾಡಿ, ಬಳ್ಳಾರಿಯ 35 ಜನರು ದುರ್ಗದ 15 ಜನರು ಒಂದೆಡೆ ಇದ್ದೇವೆ ಎಂದು ಹೇಳಿದ್ದಾರೆ. ಶಾಸಕ ಭರತ್ ರೆಡ್ಡಿ ಕೂಡ ದುಬೈನಲ್ಲಿದ್ದಾರೆ. ಭರತ್ ರೆಡ್ಡಿ ಆಪ್ತರು ಸಂಪರ್ಕ ಮಾಡಿದ್ದಾರೆ. ಬುರ್ಜ್ ಖಲೀಫಾ ಪಕ್ಕದ ಲಾಡ್ಜ್‌ನಲ್ಲಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅವರೆಲ್ಲರೂ ಆತಂಕದಲ್ಲಿದ್ದಾರೆ. ಕೂಡಲೇ ದುಬೈನಲ್ಲಿ ಸಿಲುಕಿರುವವರನ್ನು ಭಾರತಕ್ಕೆ ವಾಪಸ್ ಕರೆತರಬೇಕು ಎಂದು ಆಗ್ರಹಿಸಿದ್ದಾರೆ.

ಫೆ.24ರಂದು ಚಿತ್ರದುರ್ಗದ 15 ಮಂದಿ, ಬಳ್ಳಾರಿಯ 35 ಮಂದಿ ಸೇರಿ 50 ಜನರ ತಂಡ ಐದು ದಿನಗಳ ದುಬೈ ಪ್ರವಾಸಕ್ಕೆಂದು ತೆರಳಿದ್ದರು. ಫೆ.28ರಂದು ರಾತ್ರಿ 9 ಗಂಟೆಯ ವಿಮಾನದ ಮೂಲಕ ವಾಪಸ್ ಭಾರತಕ್ಕೆ ಬರಬೇಕಿತ್ತು. ಮಧ್ಯಾಹ್ನ ವಿಮಾನ ನಿಲ್ದಾಣಕ್ಕೆ ಬರುವಷ್ಟರಲ್ಲಿ ಯುದ್ಧ ಆರಂಭವಾಗಿದೆ.

ಯುದ್ಧ ಭೀತಿಯಿಂದ ದುಬೈನಲ್ಲಿ ಸಿಲುಕಿರುವ ಬಳ್ಳಾರಿ ಜಿಲ್ಲೆಯ ಪ್ರವಾಸಿಗರು.

ದುಬೈನಲ್ಲಿ ಸಿಲುಕಿದ ನಾರಾ ಭರತ್ ರೆಡ್ಡಿ

ದುಬೈನಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಕೂಡ ಸಿಲುಕಿಕೊಂಡಿದ್ದು, ಅವರು ಉಳಿದುಕೊಂಡ ಹೋಟೆಲ್‌ನ ಸನಿಹದಲ್ಲೇ ಮಿಸೈಲ್ ದಾಳಿ ನಡೆದಿದೆ. ಸದ್ಯ ಭರತ್ ರೆಡ್ಡಿ ಹೋಟೆಲ್‌ನಲ್ಲಿ ಸೇಫಾಗಿದ್ದಾರೆ. ಸರಕಾರದ ಸೂಚನೆಯಂತೆ ನಡೆದುಕೊಳ್ಳುವಂತೆ ಶಾಸಕ ಬಿ.ನಾಗೇಂದ್ರ, ಸಲಹೆ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಮಾತನಾಡಿ ಬಳ್ಳಾರಿ ಕ್ಷೇತ್ರದ ಜನರ ಬಗ್ಗೆ ಶಾಸಕ ಬಿ.ನಾಗೇಂದ್ರ, ಮಾಹಿತಿ ನೀಡಿದ್ದಾರೆ.

ಒಂದ್ ಕಪ್ ಮಾತು

ಟ್ಯಾಲೆಂಟ್ ಟೆನಿಸ್: ಧನುಷ್, ಅನನಿಗೆ ಪ್ರಶಸ್ತಿ

ಬೆಂಗಳೂರು: ರಾಜ್ಯದ ಎಸ್.ಎಂ.ಧನುಷ್ ಹಾಗೂ ಅನನಿ ಗೋಪಿ ರೆಡ್ಡಿ ಎಐಟಿಎ 14 ವಯೋಮಿತಿಯ ಟ್ಯಾಲೆಂಟ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಕಣದಲ್ಲಿ ನಡೆದ ಫೈನಲ್‌ನಲ್ಲಿ ಧನುಷ್ 6-1, 6-2ರಿಂದ ಸಂವೃತ್‌ರನ್ನು ಮಣಿಸಿದರು. ಬಾಲಕಿಯರ ಪ್ರಶಸ್ತಿ ಸುತ್ತಿನಲ್ಲಿ ಅನನಿ 6-3, 3-6, 6-3ರಿಂದ ನಿಶ್ಕಾ ಮಲಿಕ್‌ರನ್ನು ಮಣಿಸಿದರು.

ಲಂಕಾ ವೈಫಲ್ಯ: ಜಯಸೂರ್ಯ ರಾಜೀನಾಮೆ?

ಕೊಲಂಬೋ: ಶ್ರೀಲಂಕಾ ಕ್ರಿಕೆಟ್ ತಂಡದ ಪ್ರಮುಖ ಬೆಳವಣಿಗೆಯೊಂದರಲ್ಲಿ, 2026ರ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧದ ಸೋಲಿನ ನಂತರ ತಂಡದ ಮುಖ್ಯ ಕೋಚ್ ಸನತ್ ಜಯಸೂರ್ಯ ಅವರು ತಮ್ಮ ಮುಖ್ಯ ಕೋಚ್ ಹುದ್ದೆಯಿಂದ ಕೆಳಗಿಳಿಯುವ ಸಾಧ್ಯತೆಯಿದೆ. ಪಂದ್ಯದ ಬಳಿಕ ಮಾತನಾಡಿದ ಜಯಸೂರ್ಯ ಅವರು ತಮ್ಮ ಪಾತ್ರದಿಂದ ಹಿಂದೆ ಸರಿಯುವ ಸುಳಿವು ನೀಡಿದರು. ತಕ್ಷಣ ಬದಲಾಗುವ ಸಾಧ್ಯತೆಯಿಲ್ಲ.

ಸೋಲು: ಸಲ್ಮಾನ್ ಪಾಕ್ ಟಿ20 ನಾಯಕತ್ವಕ್ಕೆ ಧಕ್ಕೆ?

ಕೊಲಂಬೋ: 2026ರ ಟಿ20 ವಿಶ್ವಕಪ್‌ನಲ್ಲಿ ತಮ್ಮ ತಂಡ ಸೆಮಿಫೈನಲ್‌ಗೆ ತಲುಪಲು ವಿಫಲವಾದ ಎಲ್ಲ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಾಗಿ ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಹೇಳಿದ್ದಾರೆ. ಪಲ್ಲೇಕೆಲೆಯಲ್ಲಿ ನಡೆದ ತನ್ನ ಕೊನೆಯ ಸೂಪರ್-8 ಪಂದ್ಯದಲ್ಲಿ ಪಾಕ್‌ಗೆ ಶ್ರೀಲಂಕಾವನ್ನು ವಿರುದ್ಧ ಗೆದ್ದರೂ, ರನ್‌ರೇಟ್ ಸಾಧಿಸಲು ವಿಫಲವಾಗಿ ಸೆಮಿಫೈನಲ್‌ನಿಂದ ಹೊರಬಿತ್ತು. ಪಾಕಿಸ್ತಾನದ ಟಿ20 ನಾಯಕನಾಗಿ ಉಳಿಯುವ ಬಗ್ಗೆ ಮುಂದೆ ಪರಿಶೀಲಿಸುವುದಾಗಿ ಆಘಾ ಹೇಳಿದರು.

ಸೂಪರ್-8 ಹಂತ: ಬ್ಯಾಟಿಂಗ್ ಸ್ನೇಹಿ ಅಂಕಣದಲ್ಲಿ ವಿಂಡೀಸ್ ದೊಡ್ಡ ಮೊತ್ತ
ಭಾರತದ ವಿರುದ್ಧ ವಿರುದ್ಧ ಚೇಸ್, ಪೊವೆಲ್, ಹೋಲ್ಡರ್ ಮಿಂಚಿನ ಬ್ಯಾಟಿಂಗ್

ಸಿಡಿದಾಡಿದ ವೆಸ್ಟ್ ಇಂಡೀಸ್

ಕೋಲ್ಕತಾ: ಟಿ20 ವಿಶ್ವಕಪ್ ಸೂಪರ್-8 ಹಂತದ ಗುಂಪು-1ರ ಪಂದ್ಯದಲ್ಲಿ ಭಾನುವಾರ ಭಾರತ ಟಾಸ್ ಗೆದ್ದು ಕ್ಷೇತ್ರರಕ್ಷಣೆ ಆಯ್ದುಕೊಂಡಿತು. ಕ್ವಾರ್ಟರ್ ಫೈನಲ್ ಮಹತ್ವದ ಪಂದ್ಯದಲ್ಲಿ ಕೋಲ್ಕತಾದ ಪರಿಸ್ಥಿತಿಗೆ ತಕ್ಕಂತೆಯೇ ನಿರ್ಧಾರ ಮಾಡಿತು. ಬ್ಯಾಟಿಂಗ್‌ಗೆ ಪೂರಕ ಅಂಕಣದಲ್ಲಿ ಸಿಡಿದಾಡಿದ ವೆಸ್ಟ್ ಇಂಡೀಸ್ ಬ್ಯಾಟರ್‌ಗಳು ತಂಡ ಬೃಹತ್ ಮೊತ್ತ ಗಳಿಸಲು ಕಾರಣರಾದರು. 20 ಓವರ್‌ಗಳಲ್ಲಿ ವಿಂಡೀಸ್ 4 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿತು.

ವಿಂಡೀಸ್ ತಂಡದ ಪರ ಮೊದಲ ವಿಕೆಟ್‌ಗೆ ನಾಯಕ ಶೈ ಹೋಪ್ ಹಾಗೂ ರೋಸ್ಟನ್ ಚೇಸ್ 68 ರನ್ ಸೇರಿಸಿದರು. 5ನೇ ವಿಕೆಟ್‌ಗೆ ಜೇಸನ್ ಹೋಲ್ಡರ್ ಹಾಗೂ ರೋವ್ಮನ್ ಪೊವೆಲ್ 76 ರನ್ ಕೂಡಿಸಿದರು. ಆರಂಭಿಕ ಹೋಪ್ ನಿಧಾನವಾಗಿ ಆಡಿ 33 ಎಸೆತಗಳಲ್ಲಿ 32 ರನ್ ಗಳಿಸಿದರು. ರೋಸ್ಟನ್ ಚೇಸ್ 25 ಎಸೆತಗಳಲ್ಲಿ 40 ರನ್ ಸಿಡಿಸಿದರು. ಇದರಲ್ಲಿ 5 ಬೌಂಡರಿ, 1 ಸಿಕ್ಸರ್ ಸೇರಿತ್ತು. ರೋವ್ಮನ್ ಪೊವೆಲ್ ಇನ್ನಷ್ಟು ಆಕ್ರಮಣಕಾರಿಯಾಗಿ ಗೋಚರಿಸಿದರು. ಅವರು 19 ಎಸೆತಗಳಲ್ಲಿ 34 ರನ್ ಹೊಡೆದರು. ಜೇಸನ್ ಹೋಲ್ಡರ್ 22 ಎಸೆತಗಳಲ್ಲಿ 37 ರನ್ ಗಳಿಸಿದರು. ತಂಡ ದಲ್ಲಿ ಪರ ಯಾರೂ ಅರ್ಧಶತಕ ಗಳಿಸದಿದ್ದರೂ ಉತ್ತಮ ಮೊತ್ತ ದಾಖಲಾಯಿತು.

ಪಿಚ್ ಬ್ಯಾಟಿಂಗ್‌ಗೆ ಪೂರಕವಾಗಿದೆ ಎನ್ನುವುದು ಮೊದಲೇ ಗೊತ್ತಿತ್ತು. 2ನೇ ಬ್ಯಾಟಿಂಗ್ ಬೌಲಿಂಗ್ ಮಾಡುವ ತಂಡಕ್ಕೆ ಇಬ್ಬನಿ ಸಮಸ್ಯೆ ಎದುರಾಗುವ ಬಗ್ಗೆಯೂ ಖಚಿತವಿತ್ತು. ಚೆಂಡು ನಿಯಂತ್ರಣ ತಪ್ಪಬಹುದು ಎಂಬ ಕಾರಣಕ್ಕೆ ಭಾರತ ಮೊದಲೇ ಬೌಲಿಂಗ್ ಮಾಡಿತು. ಈ ಮಧ್ಯೆ ವಿಂಡೀಸ್ ಬ್ಯಾಟರ್‌ಗಳು ಅಬ್ಬರಿಸಿದರು. ಭಾರತದ ತೀಕ್ಷ್ಣ ವೇಗಿ ಜಸ್‌ಪ್ರೀತ್ ಬುಮ್ರಾ 2 ವಿಕೆಟ್ ಪಡೆದರು. 36 ರನ್‌ಗಳನ್ನೂ ಬಿಟ್ಟುಕೊಟ್ಟರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್, 195/4 (ರೋಸ್ಟನ್ ಚೇಸ್ 40, ಹೋಲ್ಡರ್ 37, ಪೊವೆಲ್ 34, ಬುಮ್ರಾ 36ಕ್ಕೆ 2)

ಸೂಪರ್-8 ಗುಂಪು-1: ಜಿಂಬಾಬ್ವೆಗೆ ಮತ್ತೆ ಸೋಲು

ಸತತ ಮೂರೂ ಪಂದ್ಯ ಗೆದ್ದ ದ.ಆಫ್ರಿಕಾ

ದೆಹಲಿ: ಟಿ20 ವಿಶ್ವಕಪ್‌ನಲ್ಲಿ ದ.ಆಫ್ರಿಕಾ ತಂಡ ತನ್ನ ಅಜೇಯ ಗೆಲುವಿನ ಓಟ ಮುಂದುವರಿಸಿದೆ. ಭಾನುವಾರ ನಡೆದ ತನ್ನ ಕೊನೆಯ ಸೂಪರ್-8ರ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ 5 ವಿಕೆಟ್‌ಗಳಿಂದ ಗೆಲುವು ಸಾಧಿಸಿ ಸೆಮಿಫೈನಲ್‌ಗೆ ಸಜ್ಜಾಗಿದೆ. ಗುಂಪು-1ರಲ್ಲಿ ಆಡಿದ ಮೂರೂ ಪಂದ್ಯಗಳಲ್ಲಿ ಗೆದ್ದಿದೆ. ಈ ಗೆಲುವು, ಸೋಲು ಗುಂಪಿನ ಸೆಮಿಫೈನಲ್ ಲೆಕ್ಕಾಚಾರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ದೆಹಲಿಯ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಜಿಂಬಾಬ್ವೆ ಬ್ಯಾಟಿಂಗ್ ಆಯ್ದುಕೊಂಡಿತು. ಆದರೆ ತಂಡಕ್ಕೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಅಂತಿಮವಾಗಿ ನಾಯಕ ಸಿಕಂದರ್ ರಾಜಾ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 153 ರನ್ ಬಾರಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡ 17.5 ಓವರ್‌ಗಳಲ್ಲಿ 5 ವಿಕೆಟ್‌ಗೆ 154 ರನ್ ಬಾರಿಸಿ ಗೆಲುವು ಸಾಧಿಸಿತು.

ಚೇಸಿಂಗ್ ವೇಳೆ ದಕ್ಷಿಣ ಆಫ್ರಿಕಾ ಕೂಡ ಜಿಂಬಾಬ್ವೆಯಂತೆ ಆರಂಭಿಕ ಆಘಾತ ಎದುರಿಸಿತು. ನಾಯಕ ಏಡನ್ ಮಾರ್ಕ್ರಮ್ (4) ಮತ್ತು ಕ್ವಿಂಟನ್ ಡಿ ಕಾಕ್ (0) ವಿಕೆಟ್ ಕಳೆದುಕೊಂಡಿತು. ರ್‍ಯಾನ್ ರಿಕೆಲ್ಟನ್ (31) ರನ್ ಗಳಿಸಿದರು. ಡೆವಾಲ್ಡ್ ಬ್ರೆವಿಸ್ 42 ರನ್ ಗಳಿಸಿ ತಂಡದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಜಿಂಬಾಬ್ವೆ ಪರ ಸಿಕಂದರ್ ರಾಜಾ 73 ರನ್ ಬಾರಿಸಿ ಮಿಂಚಿದರು. ಅವರು 4 ಸಿಕ್ಸರ್ ಮತ್ತು 8 ಬೌಂಡರಿ ಬಾರಿಸಿದರು.

ಸಂಕ್ಷಿಪ್ತ ಸ್ಕೋರ್: ಜಿಂಬಾಬ್ವೆ 20 ಓವರ್, 153/7 (ಸಿಕಂದರ್ 73, ಮದಾಂಡೆ 26, ಎಂಫಕ 21ಕ್ಕೆ 2, ಬಾಷ್ 40ಕ್ಕೆ 2). ದ.ಆಫ್ರಿಕಾ 17.5 ಓವರ್, 154/5 (ಬ್ರೆವಿಸ್ 42, ರಿಕೆಲ್ಟನ್ 31, 29ಕ್ಕೆ 3).

ನನ್ನ 3ನೇ ಮದುವೆ ಸುಳ್ಳು ಸುದ್ದಿ: ಶೋಯಬ್ ಬೇಸರ

ಕರಾಚಿ: ಪಾಕಿಸ್ತಾನ ಮಾಜಿ ಕ್ರಿಕೆಟಿಗ, ಸಾನಿಯಾ ಮಿರ್ಜಾ ಅವರ ಮಾಜಿ ಪತಿ ಶೋಯಬ್ ಮಲಿಕ್ ಅವರು ಪಾಕಿಸ್ತಾನದ ರೂಪದರ್ಶಿ ಹಾಗೂ ನಟಿ ವನೀಝಾ ಸತ್ತಾರ್‌ರನ್ನು ಮದುವೆಯಾಗಲಿದ್ದಾರೆ ಎಂಬ ವದಂತಿಗಳ ನಡುವೆ ಮಲಿಕ್ ಮೌನ ಮುರಿದಿದ್ದಾರೆ. ಈ ಹೇಳಿಕೆಗಳನ್ನು ಬಲವಾಗಿ ನಿರಾಕರಿಸಿದ್ದು, ಇದು ಸುಳ್ಳು ಎಂದು ಬೇಸರಿಸಿದ್ದಾರೆ. ತಮ್ಮ ಪತ್ನಿ ಸನಾ ಜಾವೇದ್‌ರನ್ನು ಗುರಿಯಾಗಿಸಿಕೊಂಡು ಸುಳ್ಳು ಸುದ್ದಿ ಹರಡಲಾಗುತ್ತಿದೆ, ಈಗ ನನ್ನ ಮಗ (ಸಾನಿಯಾಗೆ ಜನಿಸಿದ್ದು) ಬೆಳೆದು ಇಂತಹ ಸುದ್ದಿಗಳನ್ನು ಓದುವ ಹಂತಕ್ಕೆ ಬಂದಿದ್ದಾನೆ. ಇದನ್ನು ಗಮನಿಸಿ ಎಂದು ನೊಂದು ನುಡಿದಿದ್ದಾರೆ. 2010ರಲ್ಲಿ ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಜಾರನ್ನು ವಿವಾಹವಾಗಿದ್ದ ಮಲಿಕ್, 2023ರಲ್ಲಿ ವಿಚ್ಛೇದನ ನೀಡಿ ಸನಾ ಜಾವೇದ್‌ರನ್ನು ವಿವಾಹವಾಗಿದ್ದರು. 'ಜವಾಬ್ದಾರಿಯುತವಾಗಿ ವರ್ತಿಸಿ, ಜೀವನದಲ್ಲಿ ಕೆಲವೇ ಲೈಕ್‌ಗಳು ಮತ್ತು ವೀಕ್ಷಣೆಗಳಿಗಿಂತ ಹೆಚ್ಚಿನದಿದೆ. ನಿಮ್ಮೆಲ್ಲರಂತೆ ನನಗೂ ಒಂದು ಕುಟುಂಬವಿದೆ. ಈ ಸಂದೇಶವನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಲಾಗುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದ್ದಾರೆ.

ಮಾ.3ರಿಂದ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್, ಸಿಂಧು ದುಬೈನಲ್ಲಿ ಅತಂತ್ರ
ಸದ್ಯ ಸಿಂಧು, ಇತರೆ ಸಹಾಯಕ ಸಿಬ್ಬಂದಿಗೆ ಸುರಕ್ಷಿತ ಸ್ಥಳದಲ್ಲಿ ಭದ್ರತೆ

ನಾವಿದ್ದ ಸ್ಥಳದ ಸನಿಹವೇ ಸ್ಫೋಟ, ಕಂಗಾಲಾಗಿ ಹೋಗಿದ್ದೆವು: ಸಿಂಧು

ದುಬೈ: ಮಾ.3ರಿಂದ ಇಂಗ್ಲೆಂಡ್‌ನಲ್ಲಿ ಶುರುವಾಗುವ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗೆಂದು ಹೊರಟಿರುವ ಪಿ.ವಿ.ಸಿಂಧು ಕೊಲ್ಲಿ ರಾಷ್ಟ್ರಗಳಲ್ಲಿ ಶುರುವಾಗಿರುವ ದಿಢೀರ್ ಯುದ್ಧದಿಂದಾಗಿ ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಯುದ್ಧದ ಭೀಕರ ಪರಿಸ್ಥಿತಿಯನ್ನು ವಿವರಿಸಿರುವ ಅವರು, ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸನಿಹ ತಾವುಳಿದುಕೊಂಡಿದ್ದ ಸ್ಥಳದ ಸಮೀಪವೇ ಭಾರೀ ಸ್ಫೋಟವೊಂದು ಸಂಭವಿಸಿದೆ. ಭಾನುವಾರ ಬೆಳಗ್ಗೆ ನಡೆದ ಈ ಸ್ಫೋಟದಿಂದಾಗಿ ವಿಪರೀತ ಭೀತಿಯಾಗಿತ್ತು ಎಂದು ಸಿಂಧು ಹೇಳಿದ್ದಾರೆ.

ಅಗ್ನಿಪರೀಕ್ಷೆ ಮುಂದುವರಿಯುತ್ತಲೇ ಇತ್ತು. ನಾವುಳಿದುಕೊಂಡಿದ್ದ ಜಾಗದ ಸನಿಹ ಭೀಕರ ಸ್ಫೋಟವಾಯಿತು. ನಮ್ಮ ತರಬೇತುದಾರರು ಸ್ಫೋಟಗೊಂಡ ಸ್ಥಳಕ್ಕೆ ಬಹಳ ಹತ್ತಿರದಲ್ಲಿದ್ದರಿಂದ ತಕ್ಷಣ ಹೊರಗೆ ಓಡಿಬಂದರು. ಕಟ್ಟಡದ ಅವಶೇಷ ಹಾಗೂ ದಟ್ಟ ಹೊಗೆ ಅವರಿಗೆ ಅಷ್ಟು ಹತ್ತಿರದಲ್ಲಿತ್ತು. ಇದು ನಮಗೆ ವಿಪರೀತ ಒತ್ತಡ, ಹೆದರಿಕೆ ಹುಟ್ಟಿಸಿದ ಗಳಿಗೆ ಎಂದು ಸಿಂಧು ಹೇಳಿದ್ದಾರೆ.

ಸದ್ಯ, ನಾವೆಲ್ಲ ಸುರಕ್ಷಿತವಾಗಿದ್ದೇವೆ. ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ದುಬೈ ವಿಮಾನನಿಲ್ದಾಣದ ಸಿಬ್ಬಂದಿ, ದುಬೈ ಅಧಿಕಾರಿ ವರ್ಗಕ್ಕೆ ಧನ್ಯವಾದ. ದುಬೈನಲ್ಲಿರುವ ಭಾರತೀಯ ಕಚೇರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮನ್ನು ಸುರಕ್ಷಿತಗೊಳಿಸಲು ಅವರು ಸತತವಾಗಿ ಶ್ರಮ ಹಾಕಿದ್ದಾರೆ ಎಂದು ಸಿಂಧು ಹೇಳಿದ್ದಾರೆ.

ಯುದ್ಧ: ಇಂಗ್ಲೆಂಡ್, ಪಾಕ್ ಪಂದ್ಯ ರದ್ದು

ದುಬೈ: ಇರಾನ್-ಇಸ್ರೇಲ್, ಅಮೆರಿಕ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ, ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಅಬುಧಾಬಿಯಲ್ಲಿ ನಡೆಯಬೇಕಿದ್ದ ಪಾಕಿಸ್ತಾನ ಶಾಹೀನ್ಸ್ ಮತ್ತು ಇಂಗ್ಲೆಂಡ್ ಲಯನ್ಸ್ ತಂಡದ ಎರಡನೇ 50 ಓವರ್‌ಗಳ ಪಂದ್ಯವನ್ನು ರದ್ದುಗೊಳಿಸಿದೆ. ಇದು ಎರಡೂ ದೇಶದ ಎ ತಂಡಗಳ ನಡುವಿನ ಪಂದ್ಯವಾಗಿದೆ. ನಮ್ಮ ತಂಡಗಳು ಮತ್ತು ಸಿಬ್ಬಂದಿಯ ಸುರಕ್ಷತೆ ಹಾಗೂ ಭದ್ರತೆ ನಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಇಸಿಬಿ ಹೇಳಿಕೆಯಲ್ಲಿ ತಿಳಿಸಿದೆ. ಮಧ್ಯಪ್ರಾಚ್ಯದಲ್ಲಿನ ಪ್ರಸ್ತುತ ಘಟನೆಗಳಿಗೆ ಸಂಬಂಧಿಸಿದಂತೆ ನಾವು ಭದ್ರತಾ ತಜ್ಞರು ಮತ್ತು ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದೇವೆ ಎಂದು ಇಸಿಬಿ ತಿಳಿಸಿದೆ.

ಟೆನಿಸ್: ಮಿಂಚಿದ ಭಾರತೀಯರು

ಕಲಬುರಗಿ: ಭಾನುವಾರ ಇಲ್ಲಿ ಆರಂಭವಾದ ಐಟಿಎಫ್ ಡಬ್ಲ್ಯು- 35 ಟೆನಿಸ್ ಕೂಟದಲ್ಲಿ ಭಾರತೀಯ ತಂಡ ಉತ್ತಮ ಆರಂಭ ಮಾಡಿದೆ. ಚಂದ್ರಶೇಖರ್ ಪಾಟೀಲ್ ಕ್ರಿಡಾಂಗಣದಲ್ಲಿ ನಡೆದ ಅರ್ಹತಾ ಪಂದ್ಯದ ಮೊದಲ ದಿನದಂದು ಭಾರತೀಯ ಆಟಗಾರ್ತಿಯರು ಪ್ರಬಲ ಪ್ರದರ್ಶನ ನೀಡಿದರು. ವಂಶಿತಾ ಪಠಾನಿಯಾ, ಸೌಮ್ಯಾ ರೋಂಡೆ, ಕಾಶಿಶ್ ಭಾಟಿಯಾ, ಅಹಾನ್, ಐಶ್ವರ್ಯಾ ಜಾಧವ್, ಶ್ರೀಮಾನ್ಯ ರೆಡ್ಡಿ, ಮಹಿಕಾ ಖನ್ನಾ, ಸ್ನಿಗ್ಧಾ ಕಾಂತಾ, ಸಂದೀಪ್ತಿ, ಯಶಸ್ವಿನಿ, ಬೇಲಾ, ಲಕ್ಷ್ಮಿಸಿರಿ ದಂಡು ಗೆಲುವು ಸಾಧಿಸಿದರು.

ವಿಟಾಕೀಸ್

ಲವ್ ಮಾಕ್ಟೇಲ್‌ನ ಬೆಳದಿಂಗಳು

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿದ್ದ ಲವ್ ಮಾಕ್ಟೇಲ್ ಯಾರೂ ನಿರೀಕ್ಷೆ ಮಾಡದ ಮಟ್ಟಿಗೆ ಯಶಸ್ವಿಯಾಯಿತು. ಆ ಯಶಸ್ಸಿನ ಖುಷಿಯಲ್ಲಿ ಲವ್ ಮಾಕ್ಟೇಲ್ 2 ಕೂಡ ಮೂಡಿಬಂತು. ದ್ವಿತೀಯಾ ಭಾಗವೂ ಸೂಪರ್ ಹಿಟ್ ಆಯಿತು. ಎರಡು ಸಿನಿಮಾಗಳು ಗೆದ್ದ ಖುಷಿಯಲ್ಲಿರುವ ಕೃಷ್ಣ ಈಗ ಲವ್ ಮಾಕ್ಟೇಲ್ 3 ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿರುವ ಕೃಷ್ಣ ನಾಯಕನಾಗಿಯೂ ಮಿಂಚಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಲವ್ ಮಾಕ್ಟೇಲ್ 3 ಹಾಡುಗಳ ಮೂಲಕವೂ ಸದ್ದು ಮಾಡುತ್ತಿದೆ. ಈಗ ಚಿತ್ರದ ಮತ್ತೊಂದು ಹೊಸ ಗೀತೆ ರಿಲೀಸ್ ಆಗಿದ್ದು, ಸಂಗೀತ ಪ್ರಿಯರ ಮನಸೂರೆಗೊಂಡಿದೆ. ಬೆಳದಿಂಗಳು.. ಎಂಬ ಹಾಡು ಇದಾಗಿದ್ದು ರಾಘವೇಂದ್ರ ಕಾಮತ್ ಸಾಹಿತ್ಯ ರಚಿಸಿರುವ ಈ ಹಾಡಿಗೆ ನಕುಲ್ ಅಭ್ಯಂಕರ್ ಸಂಗೀತ ಸಂಯೋಜಿಸಿದ್ದಾರೆ. ವಿಜಯ್ ಪ್ರಕಾಶ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಸುಮಧುರ ಪ್ರೇಮಗೀತೆ ಇದಾಗಿದ್ದು ಸುಂದರ ತಾಣಗಳಲ್ಲಿ ಹಾಡನ್ನು ಸೆರೆಹಿಡಿಯಲಾಗಿದೆ. ಇಲ್ಲಿಯೂ ಮನಸೆಳೆಯುವ ಪ್ರೇಮಕಥೆಯ ಜತೆಗೆ ಸೆಂಟಿಮೆಂಟ್ ಅಂಶಗಳು ಬೆರೆತಿವೆ. ಹಾಗಾಗಿ ನಿಧಿಯಮ್ಮನ ನೆನಪುಗಳು ಮತ್ತೆ ಕಾಡಲಿವೆ. ಡಾರ್ಲಿಂಗ್ ಕೃಷ್ಣಗೆ ಜತೆಯಾಗಿ ಮಿಲನಾ ನಾಗರಾಜ್ ಬಣ್ಣಹಚ್ಚಿದ್ದು, ಸಂವೃತಾ, ಅಮೃತಾ ಅಯ್ಯಂಗಾರ್, ರಚೆಲ್ ಡೇವಿಡ್, ಅಭಿಲಾಶ್ ದಳಪತಿ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಲವ್ ಮಾಕ್ಟೇಲ್ 3, ಏಪ್ರಿಲ್ 10ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಕ್ರಿಸ್‌ಮಿ ಬ್ಯಾನರಿನಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ನಡುವೆ ಕೃಷ್ಣ ನಟಿಸಿದ ಸಿನಿಮಾಗಳು ಅಷ್ಟಾಗಿ ಸದ್ದು ಮಾಡಲಿಲ್ಲ. ಹಾಗಾಗಿ ಲವ್ ಮಾಕ್ಟೇಲ್ 3 ಬಗ್ಗೆ ನಿರೀಕ್ಷೆ ಹೆಚ್ಚಿದ್ದು, ಈ ಚಿತ್ರ ಡಾರ್ಲಿಂಗ್ ಕೃಷ್ಣಗೆ ಮತ್ತೊಂದು ಬಿಗ್ ಬ್ರೇಕ್ ನೀಡಲಿದೆ ಎಂಬ ನಿರೀಕ್ಷೆಯೂ ಇದೆ.



ಸೆಲೆಬ್ರಿಟಿಗೆ ಸುದೀಪ್ ಸಾಥ್

ಕನ್ನಡ ಚಿತ್ರರಂಗಕ್ಕೆ ಸದಭಿರುಚಿಯ ಸಿನಿಮಾಗಳನ್ನು ನೀಡಬೇಕು ಎಂಬ ಉದ್ದೇಶದಿಂದ ಗೌರಿ ಆರ್ಟ್ಸ್ ನಿರ್ಮಾಣ ಸಂಸ್ಥೆ ಹುಟ್ಟಿಕೊಂಡಿದ್ದು, ಈ ನಿರ್ಮಾಣ ಸಂಸ್ಥೆಯಲ್ಲಿ ಮೂಡಿಬರುತ್ತಿರುವ ಚೊಚ್ಚಲ ಚಿತ್ರದ ಟೈಟಲ್ ಬಿಡುಗಡೆಯಾಗಿದೆ. ಈ ಹೊಸ ಚಿತ್ರಕ್ಕೆ ಸೆಲೆಬ್ರಿಟಿ ಎಂಬ ಟೈಟಲ್ ಇಡಲಾಗಿದೆ. ಕಿಚ್ಚ ಸುದೀಪ್ ಶೀರ್ಷಿಕೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನನಗೆ ಟೀಸರ್ ತುಂಬಾ ಇಷ್ಟವಾಯಿತು, ತಾಂತ್ರಿಕವಾಗಿಯೂ ಸಿನಿಮಾ ಅದ್ಭುತವಾಗಿದೆ. ಈ ಚಿತ್ರದ ಮೂಲಕ ಹೊಸ ಪ್ರತಿಭೆಗಳು ಚಿತ್ರರಂಗಕ್ಕೆ ಪರಿಚಿತರಾಗುತ್ತಿದ್ದಾರೆ, ಎಲ್ಲರಿಗೂ ಶುಭವಾಗಲಿ ಎಂದು ಸುದೀಪ್ ಶುಭಕೋರಿದರು. ಅಶ್ವಿನ್ ನಾಯಕನಾಗಿ ನಟಿಸುತ್ತಿದ್ದು, ಈ ಚಿತ್ರದ ಮೂಲಕ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ನಾನು ಸಿನಿಮಾದಲ್ಲಿ ನಾಯಕನಾಗಿ ನಟಿಸಬೇಕು ಎಂದು ಬಾಲ್ಯದಿಂದಲೂ ಕನಸು ಕಟ್ಟಿಕೊಂಡಿದ್ದೆ. ಅದು ಈ ಚಿತ್ರದ ಮೂಲಕ ನನಸಾಗಿದೆ ಎಂದು ಅಶ್ವಿನ್ ಸಂತಸದಿಂದ ನುಡಿದರು. ನಾಯಕಿಯಾಗಿ ನಟಿ ಪ್ರಿಯಾಂಕಾ ಆಚಾರ್ ಅಭಿನಯಿಸುತ್ತಿದ್ದು, ಯಾರೇ ನೀನು ಚೆಲುವೆ ಖ್ಯಾತಿಯ ಸಂಗೀತಾ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಮರಳಿ ಬಂದಿದ್ದಾರೆ. ಸೆಲೆಬ್ರಿಟಿ ಚಿತ್ರವನ್ನು ಕಿರಣ್ ವಿಶ್ವನಾಥ್ ನಿರ್ದೇಶನ ಮಾಡುತ್ತಿದ್ದಾರೆ. ಗೌರಿ ಆರ್ಟ್ಸ್ ಬ್ಯಾನರ್‌ನಲ್ಲಿ ಸಾರಾ ಮಹೇಶ್ ಹಾಗೂ ಸುಷ್ಮಾ ಅಶ್ವಿನ್ ನಿರ್ಮಾಣ ಮಾಡುತ್ತಿದ್ದಾರೆ. ಅನಿರುದ್ಧ್ ಶಾಸ್ತ್ರಿ ಸಾಹಿತ್ಯ ರಚಿಸಿರುವ ಚಿತ್ರದ ಹಾಡುಗಳಿಗೆ ಗುಮ್ಮಿನೇನಿ ವಿಜಯ್ ಸಂಗೀತ ಸಂಯೋಜಿಸಿದ್ದಾರೆ. ರವಿವರ್ಮ ಸಾಹಸ ನಿರ್ದೇಶನ, ಗುಣ ಕಲಾ ನಿರ್ದೇಶನ, ಜಾನಿ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಕಾಲಿವುಡ್ ಅಂಗಳದಲ್ಲಿ ಶ್ರೀಕಾಂತ್

ಈ ಹಿಂದೆ ಸನ್ ಆಫ್ ಮುತ್ತಣ್ಣ ಚಿತ್ರದ ಮೂಲಕ ಅಪ್ಪ-ಮಗನ ಬಾಂಧವ್ಯದ ಕಥೆಯನ್ನು, ಭಾವನಾತ್ಮಕವಾಗಿ ಕಟ್ಟಿಕೊಟ್ಟಿದ್ದ ಸನ್ ಆಫ್ ಮುತ್ತಣ್ಣ ಚಿತ್ರತಂಡ ಮತ್ತೊಂದು ಹೊಸ ಪ್ರಯತ್ನಕ್ಕೆ ಕೈ ಹಾಕಿದೆ. ಯಾವುದೇ ಆಡಂಬರ, ಮೇಕಿಂಗ್ ವೈಭವೀಕರಣ ಇಲ್ಲದೆ ತಣ್ಣಗೆ ಒಂದು ಕಥೆ ಹೇಳುವುದು ಹೇಗೆ ಎನ್ನುವುದನ್ನು ನಿರ್ದೇಶಕ ಶ್ರೀಕಾಂತ್ ಹುಣಸೂರು ಹೇಳಿದ್ದರು. ಶ್ರೀಪುರಾತನ ಫಿಲಂಸ್ ತಂಡ ಇದಕ್ಕೆ ಸಾಥ್ ನೀಡಿದ್ದರು. ಈಗ ಅದೇ ತಂಡ ಸದ್ದಿಲ್ಲದೆ ತಮಿಳು ಚಿತ್ರರಂಗಕ್ಕೆ ಎಂಟ್ರಿಕೊಟ್ಟಿದೆ. ಶ್ರೀಪುರಾತನ ಫಿಲಂಸ್, ತಮಿಳು ಖ್ಯಾತ ನಟ ಸೆಲ್ವ ರಾಘವನ್ ಜತೆ ಹೊಸ ಸಿನಿಮಾದ ಮಾತುಕತೆ ನಡೆಸಿದೆ. ಸೆಲ್ವ ರಾಘವನ್ ಕಥೆ ಕೇಳಿ ಮೆಚ್ಚುಗೆ ವ್ಯಕ್ತಪಡಿಸಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ಸಿನಿಮಾದ ಮುಹೂರ್ತ ಕೂಡ ನೆರವೇರಲಿದೆ. ವಿಶೇಷ ಎಂದರೆ ಈ ಸಿನಿಮಾದಲ್ಲಿ ನಾಯಕ ನಟಿ ಸೇರಿದಂತೆ ಹಲವರು ಕನ್ನಡ ಕಲಾವಿದರಿಗೆ ಪ್ರಾಮುಖ್ಯತೆ ನೀಡಲಾಗಿದೆ. ತಮಿಳಿನಲ್ಲಿ ನಿರ್ಮಾಣವಾಗುವ ಈ ಚಿತ್ರ ಕನ್ನಡದಲ್ಲಿಯೂ ಬಿಡುಗಡೆಯಾಗಲಿದೆ. ಕನ್ನಡದ ನಿರ್ಮಾಣ ಸಂಸ್ಥೆ ಮತ್ತು ಕನ್ನಡದ ನಿರ್ದೇಶಕರು ತಮಿಳು ಚಿತ್ರರಂಗದಲ್ಲಿಯೂ ಸದ್ದು ಮಾಡುತ್ತಿರುವುದು ಹೆಮ್ಮೆ ತಂದಿದೆ.